# ಸಿದ್ಧಯ್ಯ ಪುರಾಣಿಕ

ಜಿ. ಎಸ್. ಸಿದ್ಧಲಿಂಗಯ್ಯ



ಲಿಂಗಾಯತ ಪುಣ್ಯಪುರುಷ ಸಾಹಿತ್ಯರತ್ನಮಾಲೆ - ೧೩೬

# ಸಿದ್ಧಯ್ಯ ಪುರಾಣಿಕ

•

ಲೇಖಕರು

ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ

•

ಡಾ. ಎಂ. ಎಂ. ಕಲಬುರ್ಗಿ ಅಧ್ಯಯನಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ
ಎಡೆಯೂರು - ಡಂಬಳ - ಗದಗ.

**SIDDAYYA PURANIKA**
Written by : Prof. G. S. Siddhalingayya
Published by : Dr. M.M. Kalburgi Adhyayana samsthe,
Shri Jagadguru Tontadarya
Samsthana math, GADAG
e-mail : sec.jtmath@gamil.com
Mob. : 9448144419

© Publishers

Pages : viii +74 = 82
First Edition : 1995
Second Edition: 2018
Price : **Rs. 50/-**
Book Size : crown 1/8,
Used Paper : 70 GSM Maplitho

ಪ್ರಕಟನಾ ದಾಸೋಹ
ಶ್ರೀ ಪ್ರಭಯ್ಯ ಶಾಂತವೀರಯ್ಯ ವಿರಕ್ತಮಠ ದಂಪತಿಗಳು
ಸಾ. ಬೆಳವಣಿಕಿ (ರೋಣ)

ಸಿದ್ಧಯ್ಯ ಪುರಾಣಿಕ
ಲೇಖಕರು : ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ
ಪ್ರಕಾಶಕರು : ಡಾ. ಎಂ. ಎಂ. ಕಲಬುರ್ಗಿ ಅಧ್ಯಯನಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಎಡೆಯೂರು-ಡಂಬಳ-ಗದಗ
ಹಕ್ಕುಗಳು : ಪ್ರಕಾಶಕರವು
ಪುಟಗಳು : viii + ೭೪ = ೮೨
ಪ್ರತಿಗಳು : ೧೦೦೦
ಬೆಲೆ : ರೂ. ೫೦/-
ಮೊದಲ ಆವೃತ್ತಿ : ೧೯೯೫
ಎರಡನೆಯ ಆವೃತ್ತಿ : ೨೦೧೮
ಸೈಜ್ : ಕ್ರೌನ್ ೧/೮
ಬಳಸಿದ ಕಾಗದ : ೭೦ ಜಿ.ಎಸ್.ಎಂ. ಎನ್. ಎಸ್. ಮ್ಯಾಪಲಿಥೋ
ಮುದ್ರಣ : ತ್ವರಿತ ಮುದ್ರಣಾಲಯ, ಕಾಗದಗೇರಿ ಓಣಿ, ಗದಗ

# ಪ್ರಕಾಶಕರ ಮಾತು

ಶಿವಶರಣರ ವಚನವಾಙ್ಮಯವನ್ನು ಮಥಿಸಿ ಸಾಹಿತ್ಯ ಸೌಂದರ್ಯವನ್ನು ಹರಿಹರ, ರಾಘವಾಂಕಾದಿಗಳು ಪ್ರಕಟಿಸಿದರೆ, ತತ್ತ್ವ ಸೌಂದರ್ಯವನ್ನು ಸಾಕ್ಷಾತ್ಕಾರಗೊಳಿಸಿದವರು ಏಳುನೂರೊಂದು ವಿರಕ್ತರು. ಈ ವಿರಕ್ತಸಮೂಹದ ನಾಯಕ ವ್ಯಕ್ತಿಯಾಗಿ, ಲಿಂಗಾಯತ ಧರ್ಮ ಪರಂಪರೆಯ ಯುಗಪುರುಷನಾಗಿ ಮೆರೆದವ ತೋಂಟದ ಸಿದ್ಧಲಿಂಗಯತಿ. ಪ್ರಭುವಿನಂತೆ ನಿರಂಜನಮೂರ್ತಿಯಾಗಿ, ಬಸವನಂತೆ ಲಿಂಗಾಯತ ಸಂಘಟಕನಾಗಿ, ಚೆನ್ನಬಸವಣ್ಣನಂತೆ ತತ್ತ್ವವೇತ್ತನಾಗಿ ಬೆಳಗಿದ ೧೬ನೇ ಶತಮಾನದ ಈ ಶಿವಯೋಗಿಸೂರ್ಯನ ಪೀಠ–ಪ್ರಪೀಠ ಪರಂಪರೆ, ಶಿಷ್ಯ– ಪ್ರಶಿಷ್ಯ ಪರಂಪರೆ ನಾಡಿನ ಒಳಗೆಲ್ಲ ತುಂಬಿದೆ, ಹೊರಗೆಲ್ಲ ತುಳುಕಿದೆ. ಅಂದಿನಿಂದಲೂ ಕನ್ನಡಿಗರ, ವಿಶೇಷವಾಗಿ ಲಿಂಗಾಯತರ ಬದುಕನ್ನು ತಿದ್ದಿ, ಭಾವನೆಯನ್ನು ತೀಡಿ ಅಂಗವೇ ಶರಣ, ಲಿಂಗವೇ ಶಿವ ಎಂಬ ಮಂತ್ರವನ್ನು ಘೋಷಿಸುತ್ತ, ಶಿಷ್ಯಕೋಟಿಯನ್ನು ಪೋಷಿಸುತ್ತ ಬಂದ ಘನತೆ ಈ ''ತೋಂಟದಾರ್ಯ ಪೀಠ ಪರಂಪರೆ''ಗೆ ಸಲ್ಲುತ್ತದೆ.

''ಶಿಷ್ಯರ ಸೇವೆಯೇ ಶಿವಪೂಜೆ''ಯೆಂಬ ಮಹಾಗುರು ತೋಂಟದಾರ್ಯರ ಸಂದೇಶದಂತೆ ನಡೆಯುವುದು ತನ್ನ ಪರಮ ಕರ್ತವ್ಯವೆಂದು ಡಂಬಳ–ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ನಂಬಿದೆ. ಈ ನಂಬಿಕೆಯ ಫಲವಾಗಿ ೧೯೭೫ರಲ್ಲಿ ಸ್ಥಾಪಿತವಾದ 'ವೀರಶೈವ ಅಧ್ಯಯನ ಸಂಸ್ಥೆ' ನಂತರ ೨೦೦೫ರಲ್ಲಿ 'ಲಿಂಗಾಯತ ಅಧ್ಯಯನ ಸಂಸ್ಥೆ' ಎಂದು ನಾಮಕರಣಗೊಂಡಿತು. ಡಾ. ಎಂ. ಎಂ. ಕಲಬುರ್ಗಿಯವರು ಹುತಾತ್ಮರಾದ ನಂತರ 'ಡಾ. ಎಂ.ಎಂ.ಕಲಬುರ್ಗಿ ಅಧ್ಯಯನ ಸಂಸ್ಥೆ'ಯೆಂದು ಪುನರ್ ನಾಮಕರಣಗೊಂಡಿತು. ಈ ಸಂಸ್ಥೆಯು ವಿವಿಧ ಮಾಲಿಕೆಗಳಡಿಯಲ್ಲಿ ಪುಸ್ತಕಗಳನ್ನು ಪ್ರಕಟಿಸುತ್ತಾ ಬಂದಿದ್ದು ಅದರಲ್ಲಿ 'ಲಿಂಗಾಯತ ಪುಣ್ಯಪುರುಷ ಸಾಹಿತ್ಯ ರತ್ನಮಾಲೆ'ಯೂ ಒಂದು.

ಸಮಾಜದಲ್ಲಿ ಘಟಿಸಿದ ಸತ್ಕಾರ್ಯಗಳ 'ದಾಖಲೆ'ಯೆನಿಸಿರುವ ಸಮಾಜವನ್ನುದ್ಧರಿಸಿದ ಪುಣ್ಯಪುರುಷರ ಚರಿತ್ರೆಗಳು ಮುಂದಿನ ಪೀಳಿಗೆಗೆ ದಾರಿದೀಪವೂ ಹೌದು, ತೋರುಬೆರಳೂ ಹೌದು. ಕಾರಣ ಇತ್ತೀಚಿನ ದಿನಗಳಲ್ಲಿ ಸಮಾಜವನ್ನು ಕಟ್ಟಿ ಬೆಳೆಸಿದ, ಸಮಾಜಕ್ಕಾಗಿ ದುಡಿದ ಮಹಾತ್ಮರ ಚರಿತ್ರೆ ಕೈಗೆತ್ತಿಕೊಳ್ಳಲಾಗಿದೆ. ೧೯–೨೦–೨೧ನೆಯ ಶತಮಾನಗಳಲ್ಲಿ ಬಾಳಿದ ನೂರಾರು ಜನ ಲಿಂಗಾಯತ ಪುಣ್ಯಪುರುಷರಲ್ಲಿ ಪ್ರತಿ ತಿಂಗಳು ಒಬ್ಬರನ್ನು ಕುರಿತು ಉಪನ್ಯಾಸವನ್ನೇರ್ಪಡಿಸುವುದು, ಏರ್ಪಡಿಸಿದ ಉಪನ್ಯಾಸವನ್ನು ಪ್ರಕಟಿಸಿ ಸುಲಭ ಬೆಲೆಯಲ್ಲಿ ವಿತರಣೆಗೊಳಿಸುವುದು ಈ ಮಾಲಿಕೆಯ ಸಂಕಲ್ಪವಾಗಿದೆ. ತಿಂಗಳು ತಿಂಗಳು ಪ್ರಕಟವಾಗುವ ಈ ಮಾಲಿಕೆಯಲ್ಲಿ ೧೩ನೆಯ ಕೃತಿ 'ಸಿದ್ಧಯ್ಯ ಪುರಾಣಿಕರು'.

ಕರ್ನಾಟಕಕ್ಕೆ ರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟ ಕನ್ನಡದ ಧೀಮಂತರಲ್ಲಿ ಡಾ. ಸಿದ್ಧಯ್ಯ ಪುರಾಣಿಕರೂ ಒಬ್ಬರು. ಮಾಸ್ತಿ, ಪುತಿನ, ನರಸಿಂಹಸ್ವಾಮಿ, ಟಿ.ಎನ್.ಮಹದೇವಯ್ಯ, ನವರತ್ನರಾಮರಾಯ–ಇವರೇ ಮೊದಲಾದವರು ಸರಕಾರಿ ಸೇವೆಯಲ್ಲಿದ್ದೂ ಕನ್ನಡ ಸಾಹಿತ್ಯವನ್ನು ತಮ್ಮ ಬದುಕಿನ ಒಂದು ಮುಖ್ಯ ಭಾಗವಾಗಿ ಸ್ವೀಕರಿಸಿದವರು. ಈ ಪರಂಪರೆಗೆ ಸೇರಿದವರು ಡಾ|| ಪುರಾಣಿಕರು. ಅವರ ಕಕ್ಕ ದ್ಯಾಂಪುರದ ಚೆನ್ನಕವಿಗಳು, ತಂದೆ ಕಲ್ಲಿನಾಥಶಾಸ್ತ್ರಿಗಳು ಕನ್ನಡದ ಉದ್ದಾಮ ಪಂಡಿತರು. ಸಾಹಿತ್ಯ ಪರಿಸರದಲ್ಲಿ ಬೆಳೆದು, ಹರ್ಡೇಕರ ಮಂಜಪ್ಪನವರ ಪ್ರಭಾವಲಯದಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡು, ಸರಕಾರಿ ಅಧಿಕಾರಿಯಾಗಿ ಸ್ಮರಣೀಯವಾದ ಕಾರ್ಯಗಳ ಮೂಲಕ ಜನಪ್ರಿಯರಾಗಿ, ಶಿವಶರಣರ ವಾಙ್ಮಯದಿಂದ ತಮ್ಮ ಬದುಕನ್ನು ತುಂಬಿಕೊಂಡು ಸಾರ್ಥಕ ಜೀವನವನ್ನು ಸವೆಸಿದ ಡಾ. ಪುರಾಣಿಕರು ಸ್ಮರಣಾರ್ಹ ವ್ಯಕ್ತಿಗಳು. ವಚನ ಸಾಹಿತ್ಯದಲ್ಲಿ ನಿತ್ಯವೂ ಉಸಿರಾಡಿದ ಇವರು ಆಧುನಿಕ ವಚನಕಾರರಾಗಿ ಕನ್ನಡಕ್ಕೆ ಕೊಟ್ಟ ಕೊಡುಗೆ ಬೆಲೆಕಟ್ಟಲಾಗದ್ದು. ಕವಿಗಳಾಗಿ, ನಾಟಕಕಾರರಾಗಿ, ಶ್ರೇಷ್ಠ ವಾಗ್ಮಿಗಳಾಗಿ, ಮೇಲಾಗಿ ಕನ್ನಡ–ಕರ್ನಾಟಕದ ಬಗೆಗೆ ನಿಜವಾದ ಕಳಕಳಿಯುಳ್ಳವರಾಗಿ ಕನ್ನಡಿಗರ ಅಭಿಮಾನಕ್ಕೆ ಪಾತ್ರರು.



ಈ ಪುಣ್ಯ ಪುರುಷರನ್ನು ಕುರಿತು ಪ್ರಸ್ತುತ ಕೃತಿಯನ್ನು ಪ್ರಕಟಿಸಲು ಹೆಮ್ಮೆಯೆನಿಸುತ್ತಿದೆ. ಶ್ರೀಮಠದ ಮೇಲಿನ ಭಕ್ತಿಮಾತ್ರದಿಂದ ಈ ಪುಸ್ತಕವನ್ನು ಬರೆದುಕೊಟ್ಟವರು ಪ್ರೊ. ಜಿ.ಎಸ್.ಸಿದ್ಧಲಿಂಗಯ್ಯನವರು. ಗ್ರಂಥದಾನ ಮಾಡಿದವರು ಸಾಲೋಟಗಿಯ ಗಣ್ಯವರ್ತಕರೂ, ಆದರ್ಶ ಕೃಷಿಕರೂ, ಆದರ್ಶ ದಂಪತಿಗಳೂ ಆಗಿರುವ ಶ್ರೀ ಮಲ್ಲಿಕಾರ್ಜುನ ವ್ಹಿ ವಾಲಿ ಹಾಗೂ ಶ್ರೀಮತಿ ನೀಲಾವತಿದೇವಿ ವಾಲಿ ಅವರು. ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟವರು ಸ್ನೇಹಾ ಪ್ರಿಂಟರ್ಸ್, ಬೆಂಗಳೂರು ಇವರೆಲ್ಲರಿಗೂ ಎಡೆಯೂರ ಶ್ರೀಸಿದ್ಧಲಿಂಗ ಶಿವಯೋಗಿ ಸಕಲ ಸನ್ಮಂಗಲಗಳನ್ನು ಉಂಟುಮಾಡಲೆಂದು ಹಾರೈಸುತ್ತೇವೆ.

೧೯೯೫ — ಪ್ರಕಾಶಕರು

## ಎರಡನೆಯ ಮುದ್ರಣಕ್ಕಾಗಿ

ನಮ್ಮ ಲಿಂಗಾಯತ ಅಧ್ಯಯನ ಸಂಸ್ಥೆಯಿಂದ ಪ್ರಕಟಗೊಂಡ 'ಸಿದ್ಧಯ್ಯ ಪುರಾಣಿಕರು' ಈ ಕೃತಿಯು ಮೊದಲ ಮುದ್ರಣವಾಗಿ ೧೯೯೫ರಲ್ಲಿ ಪ್ರಕಟಗೊಂಡಿದೆ. ಈಗ ಪರಿಷ್ಕೃತ ಆವೃತ್ತಿಯು ಎರಡನೆಯ ಬಾರಿ ೨೩ ವರ್ಷಗಳ ನಂತರ ಪ್ರಕಟಗೊಳ್ಳುತ್ತಿರುವುದು ಸಂತೋಷವನ್ನುಂಟು ಮಾಡಿದೆ. ಗ್ರಂಥ ಮರುಮುದ್ರಣ ಕಾಣುತ್ತಿರುವಂತಹ ಈ ಸಂದರ್ಭದಲ್ಲಿ ಇದಕ್ಕೆ ಕಾರಣರಾದಂತಹ ಸರ್ವರನ್ನು ನಾವು ಅಭಿನಂದಿಸುತ್ತೇವೆ.

ಇಲ್ಲಿಯ ಅಭಿಪ್ರಾಯಗಳಿಗೆ ಲೇಖಕರೇ ಜವಾಬ್ದಾರರು. ಈ ಸಂಸ್ಥೆಯ ಹುಟ್ಟಿಗೆ ಕಾರಣರಾದ ಡಾ. ಎಂ. ಎಂ. ಕಲಬುರ್ಗಿಯವರು ಹುತಾತ್ಮರಾದ ನಂತರ ಈ ಸಂಸ್ಥೆ ಡಾ. ಎಂ. ಎಂ. ಕಲಬುರ್ಗಿ ಲಿಂಗಾಯತ ಅಧ್ಯಯನ ಸಂಸ್ಥೆ ಎಂದು ಪುನರ್ನಾಮಕರಣಗೊಂಡಿತು.

ವಿಶೇಷವಾಗಿ ಎರಡನೆಯ ಮುದ್ರಣಗೊಳ್ಳಲು ಕಾರಣರಾದ ಡಾ. ಸಿದ್ಧಯ್ಯ ಪುರಾಣಿಕ ಇವರ ಚಿರಂಜೀವಿ ಶ್ರೀ ಪ್ರಸನ್ನ ಪುರಾಣಿಕ, ಬೆಂಗಳೂರು ಇವರಿಗೂ, ಗ್ರಂಥದಾನ ಗೈದ ಶ್ರೀ ಪ್ರಭಯ್ಯ ಶಾಂತವೀರಯ್ಯ ವಿರಕ್ತಮಠ ದಂಪತಿಗಳು ಸಾ. ಬೆಳವಣಿಕಿ (ರೋಣ) ಇವರಿಗೆ, ಅಕ್ಷರ ಜೋಡಿಸಿದ ಸಿದ್ದು ಅಂಗಡಿಯವರಿಗೆ, ಅಲ್ಪಾವಧಿಯಲ್ಲಿ ಸುಂದರವಾಗಿ ಅಚ್ಚಿಸಿದ ತ್ವರಿತ ಮುದ್ರಣದ ಮಾಲೀಕರಾದ ಶ್ರೀ ಅಶೋಕ ಖಟವಟೆ ಅವರಿಗೆ, ಧರ್ಮಗುರು ಬಸವೇಶ್ವರರು ಹಾಗೂ ಎಡೆಯೂರು ಸಿದ್ಧಲಿಂಗೇಶ್ವರರು ಸಕಲ ಸನ್ಮಂಗಲವನ್ನುಂಟು ಮಾಡಲೆಂದು ಹಾರೈಸುತ್ತೇವೆ.

೨೦೧೮ — ಪ್ರಕಾಶಕರು

## ಲೇಖಕರ ಮಾತು

ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿದ್ದಾಗ ಡಾ. ಸಿದ್ಧಯ್ಯ ಪುರಾಣಿಕರು ಸಮ್ಮೇಳನಾಧ್ಯಕ್ಷರಾಗಿ, ಕಾರ್ಯಕಾರಿ ಸಮಿತಿಯ ಹಾಗೂ ಪ್ರಕಟನಾ ಸಮಿತಿಯ ಸದಸ್ಯರಾಗಿದ್ದರು. ಕನ್ನಡ-ಕನ್ನಡ ನಿಘಂಟು ಸಮಿತಿಯ ಸದಸ್ಯರೂ ಆಗಿದ್ದರು. ಹೀಗಾಗಿ ನಾನವರನ್ನು ತೀರಾ ಹತ್ತಿರದಿಂದ ಅರಿಯಲು ಸಾಧ್ಯವಾಯಿತು.

ಕನ್ನಡದ ಕೆಲಸದ ಬಗ್ಗೆ ಅವರಿಗಿದ್ದ ಅರಿವು, ಆಸಕ್ತಿಗಳು ಮೆಚ್ಚುಗೆಗೆ ಕಾರಣವಾಗಿದ್ದವು. ಅವರ ಅಕಾಲ ಮೃತ್ಯುವಿನಿಂದ ಕನ್ನಡ ಮತ್ತು ಕನ್ನಡಪರ ಆಸಕ್ತಿಗಳಿಗಾದ ನಷ್ಟ ಅಷ್ಟಿಷ್ಟಲ್ಲ.

ಅವರ ನಿಧನಾನಂತರ ಅವರ ಬಗ್ಗೆ 'ಪ್ರಜಾವಾಣಿ' ಒಂದು ಲೇಖನವನ್ನು ಬರೆಯಲು ಪ್ರಾರ್ಥಿಸಿತು. ಜೊತೆಗೆ ಶಂಬಾ ವೇದಿಕೆಯವರು ಒಂದು ಭಾಷಣವನ್ನು ನೀಡಲು ಆಹ್ವಾನಿಸಿದರು. Youth Karnatakaದ ಸಂಪಾದಕರು ಇಂಗ್ಲೀಷಿನಲ್ಲಿ ಲೇಖನವೊಂದನ್ನು ಬರೆಯಲು ಕೋರಿದರು. ಹೀಗಾಗಿ ಸಿದ್ಧಯ್ಯ ಪುರಾಣಿಕರ ಸಾಹಿತ್ಯವನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡಬೇಕಾದ ಅಗತ್ಯ ಒದಗಿ ಬಂದಿತು.

ನನ್ನ ಅಧ್ಯಯನ ವಿವರಗಳನ್ನು ತಿಳಿದ ಡಾ. ಎಸ್. ವಿದ್ಯಾಶಂಕರ ಅವರು ಡಾ. ಎಂ.ಎಂ.ಕಲಬುರ್ಗಿವರೊಂದಿಗೆ ಪ್ರಸ್ತಾಪಿಸಿದಾಗ 'ಲಿಂಗಾಯತ ಪುಣ್ಯಪುರುಷ ಸಾಹಿತ್ಯ ರತ್ನಮಾಲೆ'ಗಾಗಿ ಬರೆದುಕೊಡಬಾರದೇಕೆಂದು ಆಹ್ವಾನಿಸಿದರು. ಮಠದ ವತಿಯಿಂದ ಈಬಗ್ಗೆ ಪತ್ರವೂ ಬಂದಿತು. ಹೀಗಾಗಿ ಈ ಕಿರುಹೊತ್ತಿಗೆ ಈಗ ಸಿದ್ಧವಾಗಿದೆ.

ಡಾ. ಸಿದ್ಧಯ್ಯ ಪುರಾಣಿಕರನ್ನು ಕುರಿತು ಹೇಳಬೇಕೆನಿಸಿದ ಮುಖ್ಯ ವಿಷಯಗಳನ್ನು ಈ ಕೃತಿಯಲ್ಲಿ ತಿಳಿಸಿದ್ದೇನೆ. ಕನ್ನಡದ ಕೆಲಸದಲ್ಲಿ ಆಡಳಿತದ

ಕ್ಷೇತ್ರದಲ್ಲಿ ಹಾಗೆಯೇ ಸಾಹಿತ್ಯ ಕ್ಷೇತ್ರದಲ್ಲಿ ಅದರಲ್ಲಿಯೂ ವಚನ ರಚನೆಯಲ್ಲಿ ಅವರ ಸಾಧನೆ ಸಾಮಾನ್ಯವಾದುದಲ್ಲ; ಅಷ್ಟೇ ಏಕೆ ಆಧುನಿಕ ವಚನಕಾರರ ಶ್ರೇಣಿಯಲ್ಲಿ ಇವರ ಹೆಸರು ಸದಾ ಸ್ಮರಣೀಯವಾದುದು. ಪ್ರೀತ್ಯಭಿಮಾನಗಳಿಂದ ಪ್ರಕಟಿಸುತ್ತಿರುವ ಗದಗಿನ ತೋಂಟದಾರ್ಯ ಮಠದ ಪೂಜ್ಯ ಜಗದ್ಗುರು ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ಗದಗ ಇವರಿಗೆ ಕೃತಜ್ಞತಾ ಭಕ್ತಿಪೂರ್ವಕ ನಮಸ್ಕಾರಗಳು.

ಈ ಗ್ರಂಥ ರಚನೆಗೆ ತೊಡಗಿದಾಗ ಕೆಲವು ಅಗತ್ಯ ಗ್ರಂಥಗಳನ್ನು ಒದಗಿಸಿದವರು ಡಾ. ಸಿದ್ಧಯ್ಯ ಪುರಾಣಿಕರ ಸೊಸೆ ಶ್ರೀಮತಿ ಲತಾದೇವಿ ಪುರಾಣಿಕ ಅವರು. ಈ ಕೃತಿಯ ಶುದ್ಧಪ್ರತಿ ಸಿದ್ಧಪಡಿಸಿದವರು ಚಿ. ರುದ್ರೇಶ್‌ರವರು, ಯಥಾಪ್ರಕಾರ ಮಿತ್ರ ಡಾ. ಎಸ್.ವಿದ್ಯಾಶಂಕರರು ಅಗತ್ಯಬಿದ್ದ ಕೃತಿಗಳನ್ನು ಒದಗಿಸುವಲ್ಲಿ ಹಾಗೂ ಮುದ್ರಣ ಕರಡನ್ನು ತಿದ್ದುವುದರಲ್ಲಿ ನೆರವಾಗಿದ್ದಾರೆ. ಡಾ. ಕಲಬುರ್ಗಿ, ಡಾ. ಎಸ್. ವಿದ್ಯಾಶಂಕರ, ಚಿ. ರುದ್ರೇಶ್, ಶ್ರೀಮತಿ ಲತಾದೇವಿ ಪುರಾಣಿಕ ಇವರೆಲ್ಲರಿಗೆ ಕೃತಜ್ಞತೆಗಳು.

ಮಾರ್ಚ್ –೧೯೯೫ — ಜಿ. ಎಸ್. ಸಿದ್ಧಲಿಂಗಯ್ಯ
ಬೆಂಗಳೂರು

# ಹಿನ್ನೆಲೆ

## ಹೀಗೊಂದು ಘಟನೆ

ಡಾ|| ಸಿದ್ಧಯ್ಯ ಪುರಾಣಿಕರ ಆರೋಗ್ಯ ಕೊನೆಯ ದಿನಗಳಲ್ಲಿ ಅಷ್ಟೇನು ಉತ್ತಮವಾಗಿರಲಿಲ್ಲ. ತೀವ್ರವಾದ ಸಕ್ಕರೆಯ ಕಾಯಿಲೆಯ ಜೊತೆಗೆ ಕೀಲುಗಳ ನೋವು ಅವರನ್ನು ಬಾಧಿಸುತ್ತಿತ್ತು, ಹೀಗಿದ್ದರೂ ಅವರು ತಮ್ಮ ಹಾಸ್ಯ ಪ್ರಜ್ಞೆಯನ್ನಾಗಲಿ ಜೀವನೋತ್ಸಾಹವನ್ನಾಗಲಿ ಕಳೆದುಕೊಂಡವರಲ್ಲ. ಸೆಪ್ಟೆಂಬರ್ ತಿಂಗಳ ಆರಂಭದಲ್ಲಿ ಅವರನ್ನು ನೋಡುವುದಕ್ಕೆ ಹೋದಾಗ ಸೊಂಟದ ನೋವಿನಿಂದ ವಿಶೇಷವಾಗಿ ಬಳಲಿದ್ದರು. 'ಡಾ|| ಪುರಾಣಿಕರೇ ನಿಮ್ಮ ಆರೋಗ್ಯ ಹೇಗಿದೆ?' ಎಂದು ಮಿತ್ರರೊಬ್ಬರು ಪ್ರಶ್ನಿಸಿದಕ್ಕೆ ದೊಡ್ಡ ನಗುವೇ ಅವರ ಉತ್ತರವಾಗಿತ್ತು, ನಕ್ಕ ಮೇಲೆ ನಿಧಾನವಾಗಿ ಆದರೆ ದೃಢವಾಗಿ ಅವರು ಹೇಳಿದ್ದು ಹೀಗೆ : 'ನೋಡಿ ನಮ್ಮ ಹಕ್ಕಿನ ಆಯಸ್ಸು ಮುಗಿದು ಹೋಯಿತು. ಈಗೇನಿದ್ದರೂ 'Spare parts'ಗಳ ಕೊಸರಿನ ಅವಧಿ'. ಹೀಗೆನ್ನುತ್ತ ಕಟ್ಟಿಸಿಕೊಂಡಿದ್ದ ದಂತ ಪಂಕ್ತಿಗಳು, ಬಳಸುತ್ತಿದ್ದ ಎರಡು ಜೊತೆ ಕನ್ನಡಕಗಳು, ಸಕ್ಕರೆ ಕಾಯಿಲೆಗಾಗಿ ವಿದೇಶದಿಂದ ತರಿಸಿದ್ದ ಸೂಜಿಮದ್ದು ಹಾಗೂ ಉಳುಕಿದ ಸೊಂಟಕ್ಕೆ ಕಟ್ಟಿಕೊಂಡಿದ್ದ ಪಟ್ಟಿಗಳತ್ತ ಗಮನಸೆಳೆದರು.

ಇಷ್ಟು ಹೇಳುವಾಗ ಪಾರ್ಶ್ವವಾಯುವಿನಿಂದ ನರಳುತ್ತಿರುವ ಅವರ ಧರ್ಮಪತ್ನಿ ಗಿರಿಜಾದೇವಿಯವರು ಕಣ್ಣು ಪಿಳುಕಿಸುತ್ತಾ ನಿಶ್ಚಲವಾಗಿ ಕುಳಿತಿದ್ದರು. ಈ ಸೊಂಟದ ನೋವು ಯಾವಾಗಿನಿಂದ? ಎಂದು ಕೇಳಿದ್ದಕ್ಕೆ ಅವರು ತಿಳಿಸಿದ ವಿಷಯ ಆಘಾತಕರವಾಗಿತ್ತು. ತೀರ ಮೊನ್ನೆ ತಮ್ಮ ಪಕ್ಕದಲ್ಲಿ ಕುಳಿತಿದ್ದ ಧರ್ಮಪತ್ನಿ ಇದ್ದಕ್ಕಿದ್ದಂತೆ ಉರುಳಿಕೊಳ್ಳುವುದನ್ನು ಗಮನಿಸಿದ ಪುರಾಣಿಕರು ತಟ್ಟನೆ ತಮ್ಮ ತೋಳುಗಳನ್ನು ಚಾಚಿ ತಪ್ಪಿಸಿದರು. ಆದರೆ ಆಗ ಉಂಟಾದ ಜೋಲಿಯಿಂದಾಗಿ ಸೊಂಟದ ಕೀಲು ಜಾರಿಕೊಂಡಿದ್ದು ಅದಕ್ಕಾಗಿ ಸೊಂಟದ ಪಟ್ಟಿ ಒಂದನ್ನು ಧರಿಸಿದ್ದು, ಈಗ ಅದು ಸ್ವಲ್ಪಮಟ್ಟಿಗೆ

ಗುಣಮುಖಿ ಆಗುತ್ತಲಿತ್ತು. ಈ ಘಟನೆಯನ್ನು ಹೇಳುವ ಕಾರಣ ಇಷ್ಟೆ: ಡಾ|| ಪುರಾಣಿಕರು ತಮ್ಮ ಅಧ್ಯಯನಶೀಲತೆಯನ್ನು ಬಿಟ್ಟವರಲ್ಲ, ಹಾಗೆಯೇ ಜೀವನೋತ್ಸಾಹವನ್ನೂ ಕಳೆದುಕೊಂಡವರಲ್ಲ. ಅದಕ್ಕೆ ಉದಾಹರಣೆ ಯೆಂದರೆ ತೀರಾ ಇತ್ತೀಚೆಗೆ ಡಾ|| ಜಿ.ಎಸ್.ಆಮೂರ್‌ರವರು ಬೇಂದ್ರೆ ಮತ್ತು ಅಲ್ಲಮಪ್ರಭುಗಳನ್ನು ಕುರಿತು ಬರೆದ ಲೇಖನವನ್ನು ಓದಿ ಆ ಬಗ್ಗೆ ತಮಗಿರುವ ಆಸಕ್ತಿಯನ್ನು ಆಮೂರರಿಗೆ ತಿಳಿಸಿದ್ದರು.

ಕನ್ನಡದ ಸಮಸ್ಯೆಗಳನ್ನು ಕುರಿತಂತೆ ಕಾರ್ಯಕರ್ತರೊಬ್ಬರು ಮನೆಗೆ ಹೋಗಿದ್ದಾಗ ''ನೋಡಿ ಕನ್ನಡದ ಸ್ಥಿತಿ ತುಂಬಾ ಶೋಚನೀಯವಾಗಿದೆ. ಕನ್ನಡಿಗರ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆಯುತ್ತಿದೆ. ಅವುಗಳಿಗೆ ಪರಿಹಾರ ಮಾತ್ರ ದೊರಕುತ್ತಿಲ್ಲ. ಈ ವರ್ಷದ ರಾಜ್ಯೋತ್ಸವ ಸಂದರ್ಭದಲ್ಲಿ ಬೃಹತ್ತಾದ ಪ್ರತಿಭಟನಾಸಭೆ ನಡೆಸಿ ಕನ್ನಡಿಗರ ಸಮಸ್ಯೆಯ ಕಡೆಗೆ ಜನರ ಹಾಗೂ ಸರಕಾರದ ಗಮನವನ್ನು ಸೆಳೆಯಬೇಕಾಗಿದೆ. ಅಗತ್ಯವಾದರೆ ಗೋಕಾಕ್ ಚಳುವಳಿಯಂಥ ಒಂದು ಚಳುವಳಿಯನ್ನು ನಡೆಸುವುದು ತೀರಾ ಅಗತ್ಯವಿದೆ'' ಎಂದು ಹೇಳುತ್ತಲೇ ಕ್ಷೀಣಿಸುತ್ತಿರುವ ತಮ್ಮ ಆರೋಗ್ಯದ ಸ್ಥಿತಿಯ ಕಾರಣವಾಗಿ ತಾವು ಮೊದಲಿನಂತೆ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆಯೋ ಇಲ್ಲವೋ ಎಂದು ಶಂಕೆ ವ್ಯಕ್ತಪಡಿಸಿದ್ದು ಉಂಟು. ಅಷ್ಟೇ ಅಲ್ಲ ತೀರಾ ಇತ್ತೀಚೆಗೆ ಪ್ರಕಟವಾದ ಪುಸ್ತಕಗಳ ಬಗ್ಗೆ ಅವರಿಗಿದ್ದ ಆಸಕ್ತಿ ವಿಶೇಷ ರೀತಿಯದು. ಇಂಥ ಕನ್ನಡಪರ ಚಿಂತನೆಗಳಿಗೆ ಸದಾ ಜಾಗೃತವಾಗಿದ್ದ ವ್ಯಕ್ತಿತ್ವ ಪಡೆದ ಡಾ|| ಸಿದ್ಧಯ್ಯ ಪುರಾಣಿಕರು ರೂಪುಗೊಂಡ ರೀತಿ ಅಷ್ಟೇ ಆಸಕ್ತಿಯನ್ನು ಹುಟ್ಟಿಸುವಂತಹದ್ದು.

## ಬಾಲ್ಯದ ಒಂದು ಚಿತ್ರ

ಡಾ|| ಸಿದ್ಧಯ್ಯ ಪುರಾಣಿಕರ ಬದುಕಿನ ವಿವರಗಳನ್ನು ಸಂಕ್ಷೇಪವಾಗಿ ಗುರುತಿಸಬೇಕೆನ್ನುವಾಗ ತಟ್ಟನೆ ನಮ್ಮ ಗಮನ ಸೆಳೆಯುವುದು ಅವರ ಬಾಲ್ಯದ ಈ ಘಟನೆ: ಸ್ವಂತ ಸೋದರಮಾವನೆ ಮಾಸ್ತರನಾಗಿದ್ದ ಶಾಲೆಯಲ್ಲಿ ಅವರು ಒಂದು ದಿನ ವಿದ್ಯಾರ್ಥಿಗಳ ಅಭಿರುಚಿಗಳನ್ನು ತಿಳಿದುಕೊಳ್ಳ ಬೇಕೆಂದು ಕುತೂಹಲಗೊಂಡು ಹುಡಗರನ್ನೆಲ್ಲಾ ಹತ್ತಿರಕ್ಕೆ ಕರೆದು, 'ನಿಮಗೆ



ಏನು ಬೇಕು? ಎಂಬುದನ್ನು ನಿಮ್ಮ ಸ್ಲೇಟುಗಳ ಮೇಲೆ ಬರೆದು ತಂದು ತೋರಿಸಿರಿ' ಎಂದು ಅಪ್ಪಣೆ ಮಾಡಿದರು. ಒಬ್ಬ ಹುಡುಗ ನನಗೆ ತಿಂಡಿ ಬೇಕು ಎಂದು ಬರೆದಿದ್ದರೆ, ಮತ್ತೊಬ್ಬ ನನಗೆ ಹುಂಡಿ ಬೇಕೆಂದು,ಇನ್ನೊಬ್ಬ ಬಳಪ ಬೇಕೆಂದು,ಮತ್ತೊಬ್ಬ ಊಟ ಬೇಕು ಎಂದು ಹೀಗೆ ವಿಧವಿಧವಾಗಿ ತಮ್ಮ ಆಶಯಗಳನ್ನು ಸ್ಲೇಟಿನ ಮೇಲೆ ಬರೆದು ತಂದಿದ್ದರು. ಈ ಸ್ಲೇಟುಗಳನ್ನು ನೋಡುತ್ತಿದ್ದಂತೆಯೇ ಅದರಲ್ಲಿ ಒಂದು ಸ್ಲೇಟು ಅವರ ಗಮನವನ್ನು ಸೆಳೆಯಿತು. ಕಣ್ಣು ಅಲ್ಲೇ ನಾಟಿತು, ಹುಬ್ಬು ಮೇಲಕ್ಕೇರಿದವು. ಒಬ್ಬ ವಿದ್ಯಾರ್ಥಿ 'ವಿದ್ಯೆ ಬೇಕು' ಎಂದು ಬರೆದಿದ್ದ. ಆ ವಿದ್ಯಾರ್ಥಿಯೇ ಮುಂದೆ ಡಾ||ಸಿದ್ಧಯ್ಯ ಪುರಾಣಿಕ್ ಐ.ಎ.ಎಸ್., ಎಂದು ಖ್ಯಾತನಾಮರಾದವರು.

## ಮನೆ - ಮನೆತನ

ಡಾ||ಸಿದ್ಧಯ್ಯ ಪುರಾಣಿಕರು ಹುಟ್ಟಿದ್ದು ೧೮-೮-೧೯೧೮ರಂದು ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲೂಕಿನ ದ್ಯಾಂಪುರದಲ್ಲಿ. ಅವರ ತಂದೆ ಕಲ್ಲಿನಾಥಶಾಸ್ತ್ರೀಗಳು, ತಾಯಿ ದಾನಮ್ಮನವರು. ಕಲ್ಲಿನಾಥಶಾಸ್ತ್ರಿಗಳು ಶ್ರೀಮಂತರಲ್ಲದಿದ್ದರೂ ಸುಸಂಸ್ಕೃತರಾದವರು. ಪುರಾಣಪ್ರವಚನ ಮಾಡಿದವರು. ಕೀರ್ತನೆ ಮಾಡುವುದು-ನಾಟಕವಾಡಿಸುವುದು ಈ ಕಾರ್ಯಗಳಿಂದ ಗ್ರಾಮದ ಜನರ ಮನಸ್ಸನ್ನು ಗೆದ್ದವರು. ಜನಾನುರಾಗಿಗಳಾಗಿ ಬದುಕನ್ನು ನೆಮ್ಮದಿಯಿಂದ ನಡೆಸುತ್ತಿದ್ದವರು. ತಾಯಿ ದಾನಮ್ಮ ಹೆಸರಿಗೆ ತಕ್ಕಂತೆ ಇದ್ದುದರಲ್ಲಿಯೇ ದಾಸೋಹಕ್ಕೆ ಹೆಸರಾದವರು. ಇಂಥ ಮನೆಯಲ್ಲಿ ಹುಟ್ಟಿದ್ದ ಸಿದ್ಧಯ್ಯನವರು ಹಲವು ವಿಧದಲ್ಲಿ ಅದೃಷ್ಟವಂತರು. ಇವರ ಅಜ್ಜಂದಿರಾದ ಚನ್ನಕವಿಗಳು ಕವಿರತ್ನರೆಂದು ಖ್ಯಾತರಾದವರು. ಕಲ್ಲಿನಾಥಶಾಸ್ತ್ರಿಗಳ ಗೆಳೆಯರಾದ ಸಣ್ಣಬಸಪ್ಪ ಹಾಸ್ಯಪ್ರಜ್ಞೆಗೆ ಹೆಸರಾದವರು. ಕೆಂಗಲ್ ವೀರಭದ್ರಯ್ಯನವರಂತೂ ಇವರ ಬಂಧುಗಳೂ ಹೌದು, ಗುರುಗಳೂ ಹೌದು. ಹೀಗಾಗಿ ಸಿದ್ಧಯ್ಯ ಪುರಾಣಿಕರು ಸಹಜವಾಗಿ ಶಿಶುನಾಳ ಶರೀಫರ ಹಾಡುಗಳು, ಮುಪ್ಪಿನ ಷಡಕ್ಷರಿಯ ಹಾಡುಗಳು, ಬಾಲಲೀಲಾ ಮಹಾಂತಶಿವಯೋಗಿಗಳ ಹಾಡುಗಳು, ವಚನಗಳು, ಸರ್ಪಭೂಷಣರ ಹಾಡುಗಳು ಇವುಗಳನ್ನು

ಕೇಳುವ ಸೌಭಾಗ್ಯ ಪಡೆದರು. ದ್ಯಾಂಪುರದ 'ಗಾವಟಿ' ಶಾಲೆಗೆ ಊರವರ ಬಡತನದ ಕಾರಣವಾಗಿ ಅಧ್ಯಾಪಕರಿರುತ್ತಿದ್ದುದೇ ಅಪರೂಪವಾಗಿರುತ್ತಿತ್ತು, ಏಕೆಂದರೆ ಊರಿನವರೇ ಆ ಶಾಲೆಯ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸ ಬೇಕಾಗಿತ್ತು. ಹೀಗಾಗಿ ತಂದೆ ಕಲ್ಲಿನಾಥಶಾಸ್ತ್ರೀಗಳೇ ಕ್ರಮಬದ್ಧವಾಗಿ ಮಗನಿಗೆ ಶಿಕ್ಷಣ ನೀಡಿದರು. ಅಲ್ಲಿ ಪಡೆದ ಶಿಕ್ಷಣ ಕೇವಲ ಅಕ್ಷರ ಅಭ್ಯಾಸ ಮಾತ್ರವಾಗಿರಲಿಲ್ಲ, ಜೈಮಿನಿ ಭಾರತ, ಪ್ರಭುಲಿಂಗ ಲೀಲೆ, ಶಬರಶಂಕರ ವಿಳಾಸ ಮೊದಲಾದ ಸಾಹಿತ್ಯಕೃತಿಗಳ ಪರಿಚಯ ಕೂಡ ಅಲ್ಲಿ ಆಯಿತು. ಸಾಹಿತ್ಯ, ವ್ಯಾಕರಣ, ಛಂದಸ್ಸುಗಳ ಅರಿವು ಪ್ರಾಪ್ತವಾಗತೊಡಗಿತು. ಈ ವಾತಾವರಣವನ್ನು ಇನ್ನಷ್ಟು ಸಮೃದ್ಧಿಗೊಳಿಸಿದ್ದು ಇವರ ತಾತಂದಿರಾದ ಕವಿರತ್ನ ಚನ್ನಕವಿಗಳ ಮನೆಯಲ್ಲಿ ನಡೆಯುತ್ತಿದ್ದ ಪ್ರವಚನಗಳು ಹಾಗೂ ಶಾಸ್ತ್ರಸಾಹಿತ್ಯ ಚರ್ಚೆಗಳು; ಆ ಚರ್ಚೆಯಲ್ಲಿ ಉಪನಿಷನ್ಮಂತ್ರಗಳು, ಸಿದ್ಧಾಂತ ಶಿಖಾಮಣಿಯ ಶ್ಲೋಕಗಳು,ಗೀತೆ ಇವುಗಳನ್ನು ಕುರಿತ ಚರ್ಚೆ ಹಾಗೂ ವ್ಯಾಖ್ಯಾನಗಳು ತುಂಬಿ ತುಳುಕುತ್ತಿದ್ದವು. ಇಂಥ ಸಾಂಸ್ಕೃತಿಕವಾದ ಮತ್ತು ಸಾಹಿತ್ಯಿಕವಾದ ಅದ್ಭುತ ವಾತಾವರಣವನ್ನು ಸಿದ್ಧಯ್ಯ ಪುರಾಣಿಕರು ಪಡೆದಿದ್ದರು. ಇಲ್ಲಿ ಗಮನಿಸಬೇಕಾದ ಇನ್ನೆರಡು ಮುಖ್ಯ ಸಂಗತಿಗಳೆಂದರೆ ಸಿದ್ಧಯ್ಯ ಪುರಾಣಿಕರಿಗಿದ್ದ 'ಏಕಾಗ್ರಚಿತ್ತತೆ'. ಸಂತೆಯಲ್ಲಿ ಕುಳಿತು ಓದಬಲ್ಲ ಏಕಾಗ್ರಚಿತ್ತತೆ ಇತ್ತೆಂದು ಅವರೇ ಹೇಳಿಕೊಳ್ಳುತ್ತಾರೆ. ಈ ಏಕಾಗ್ರಚಿತ್ತತೆಯ ಜೊತೆಗೆ ಮತ್ತೊಂದು ವಿಶೇಷಗುಣ ಕೂಡಾ ಅವರಲ್ಲಿದ್ದಿತು. ಅದು ಅದ್ಭುತವಾದ ಸ್ಮರಣಶಕ್ತಿ. ಈ ಸ್ಮರಣಶಕ್ತಿಯ ಕಾರಣವಾಗಿಯೇ ಅವರು ಗುರುಗಳ ವಿಶೇಷ ಪ್ರೀತಿಗೆ ಪಾತ್ರರಾದರು.

### ಶಿಕ್ಷಣದ ಶಾಲೆಗಳು

ದ್ಯಾಂಪುರದಲ್ಲಿ ಪ್ರಾಥಮಿಕ ಶಿಕ್ಷಣ ಆರಂಭವಾದರೂ ಅಲ್ಲಿ ನಡೆದ ಖೂನಿಯೊಂದರ ಕಾರಣವಾಗಿ ಅಲ್ಲಿಯ ಅಭ್ಯಾಸ ಕುಂಠಿತವಾಗುವಂತೆ ಆಯಿತು. ಅವರ ತಂದೆ ಕಲ್ಲಿನಾಥಶಾಸ್ತ್ರಿಗಳು ಮಗನ ಶಿಕ್ಷಣದ ವಿಷಯದಲ್ಲಿ ಯಾವತ್ತೂ ಜಾಗರೂಕರಾಗಿಯೇ ಇದ್ದವರು. ಶಿಕ್ಷಣ ನಿಲ್ಲುವ ಸ್ಥಿತಿಗೆ ಬಂದಾಗ ತಾವೇ ಗುರುಗಳಾಗಿ ನಿಂತು ಅನಂತರ ಶಿಕ್ಷಣ ದೊರಕುವ



ಜಾಗಗಳನ್ನು ಮಗನಿಗಾಗಿ ಹುಡುಕಿದರು. ಪಕ್ಕದ ಚಿಕ್ಕೇನಕೊಪ್ಪದಲ್ಲಿ ಮುಂದಿನ ಓದಿಗೆ ಅವಕಾಶ ಮಾಡಿದರು. ಸೋದರಮಾವನ ಮಠದಲ್ಲಿಯೇ ಮಗನ ಊಟ ವಸತಿಗಳಿಗೆ ಏರ್ಪಾಟು ಮಾಡಿ ಶಿಕ್ಷಣ ಮುಂದುವರೆ ಯುವುದಕ್ಕೆ ಕಾರಣರಾದರು. ಪುರಾಣಿಕರ ದುರ್ದೈವ ಇಲ್ಲಿಯೂ ಒಂದು ತೊಡಕನ್ನು ಒಡ್ಡಿತು. ಹಳ್ಳಿಯಲ್ಲಾದ ಕೊಲೆಯೊಂದರ ಸಂದರ್ಭದಲ್ಲಿ ಹಳ್ಳಿಯ ವಾತಾವರಣವೇ ಕೆಟ್ಟುಹೋಗಿ ಮತ್ತೆ ಅಧ್ಯಯನ ನಿಲ್ಲುವಂತಾಯಿತು. ಕಲ್ಲಿನಾಥಶಾಸ್ತ್ರಿಗಳು ಧೃತಿಗೆಡಲಿಲ್ಲ, ಮನೆಯಲ್ಲಿಯೇ ಮಗನಿಗೆ ಶಿಕ್ಷಣವನ್ನು ನೀಡುವ ಜವಾಬ್ದಾರಿಯನ್ನು ಹೊತ್ತರು. ಅಲ್ಲಿಂದ ಮುಂದೆ ಮಾಧ್ಯಮಿಕ ಶಾಲೆಯ ಅಧ್ಯಯನಕ್ಕಾಗಿ ಸಿದ್ಧಯ್ಯ ಪುರಾಣಿಕರನ್ನು ಕುಕ್ಕನೂರಿನ ವಿದ್ಯಾನಂದ ಗುರುಕುಲಕ್ಕೆ ಸೇರಿಸಿದರು. ಅಲ್ಲಿ ಪ್ರವೇಶ ಅಷ್ಟು ಸುಲಭವಾಗಿರಲಿಲ್ಲ. ಮುಖ್ಯೋಪಾಧ್ಯಾಯರು ವಿದ್ಯಾರ್ಥಿಯ ಗುಣಮಟ್ಟ ತಿಳಿದುಕೊಳ್ಳಲು ಹಲವಾರು ಪರೀಕ್ಷೆಗಳನ್ನು ಏರ್ಪಡಿಸಿದ್ದರು. ಕುಶಾಗ್ರಮತಿಯೂ, ಸ್ಮರಣಶಕ್ತಿಶಾಲಿಯೂ ಏಕಾಗ್ರಚಿತ್ತವುಳ್ಳವರೂ ಆಗಿದ್ದ ಸಿದ್ಧಯ್ಯನವರಿಗೆ ಈ ಪರೀಕ್ಷೆಗಳು ಕಠಿಣವೆನಿಸಲೇ ಇಲ್ಲ. ಅದರ ಬದಲು ಮುಖ್ಯೋಪಾಧ್ಯಾಯರು ವಿದ್ಯಾರ್ಥಿಯ ಗುಣಮಟ್ಟದ ಬಗ್ಗೆ ಅಭಿಮಾನ ಗೊಳ್ಳುವಂತಾಯಿತು.ವಿದ್ಯಾರ್ಥಿಯ ಗುಣಮಟ್ಟವನ್ನು ಗಮನಿಸಿದ ಮುಖ್ಯೋಪಾಧ್ಯಾಯರು ಎರಡನೇ ತರಗತಿಗೆ ಪ್ರವೇಶವನ್ನು ದೊರಕಿಸಿ ಕೊಟ್ಟರು. ಅಧ್ಯಯನದಲ್ಲಿ ಯಾವತ್ತೂ ಆಸಕ್ತಿ ತಾಳಿದ್ದ ಸಿದ್ಧಯ್ಯನವರು 'ಅದರ ಜೊತೆಗೆ ವ್ಯಾಯಾಮದಲ್ಲಿ ಕೂಡಾ ಪಟುತ್ವವನ್ನು ಪಡೆದು ಕೊಂಡರು. ಆದರೆ ಮತ್ತೆ ಮುಖ್ಯೋಪಾಧ್ಯಾಯರ ಸಾವಿನ ಕಾರಣಕ್ಕಾಗಿ ಶಿಕ್ಷಣಕ್ಕೆ ಅಡ್ಡಿಯೊದಗಿತ್ತು. ತೀವ್ರ ಮುಂಗೋಪಿಯಾಗಿದ್ದ ಮುಖ್ಯೋಪಾಧ್ಯಾಯರು ಒಂದು ಕಡೆ ಸದಾ ಅಧ್ಯಯನಶೀಲರಾಗಿ ಇದ್ದು ಪುಸ್ತಕಗಳನ್ನೆಲ್ಲಾ ಓದಿ ಬೇರೆ ಪುಸ್ತಕಗಳು ದೊರಕದ ಕಾರಣ ಕಿಟ್ಟೆಲ್ ಕೋಶವನ್ನೇ ಓದುವುದರಲ್ಲೇ ಮಗ್ನರಾದ ಉಪಮುಖ್ಯೋಪಾಧ್ಯಾಯ ಇನ್ನೊಂದು ಕಡೆಯಾದರೆ,ವಿದ್ಯಾರ್ಥಿಗಳನ್ನು ಗುರುಕುಲದ ನಿರ್ವಹಣೆಗಾಗಿ ಮತ್ತೆ ಮತ್ತೆ ನಿಧಿ ಸಂಗ್ರಹಕ್ಕೆ ಕಳುಹಿಸುವ ಕಿರುಕುಳವನ್ನು ಮಿಕ್ಕ ಉಪಾಧ್ಯಾಯರುಗಳು ನೀಡತೊಡಗಿದರು. ಇದು ಸಾಲದೆಂದು ಜಾತಿಯ

ಮಾತುಗಳನ್ನೆತ್ತಿ ಆಡುವ ಕುಹಕದ ಮಾತು ಬೇರೆ. ಸ್ವಾಭಿಮಾನಿಯಾದ ಸಿದ್ಧಯ್ಯನವರು ಇದನ್ನು ತಾಳಿಕೊಳ್ಳಲು ಸಾಧ್ಯವಾಗಲೇ ಇಲ್ಲ. ಶಾಲೆಗೆ ಹೋಗುತ್ತೇನೆಂದು ಹೇಳಿ ಶಾಲೆ ತಪ್ಪಿಸಿ ಈಜು ಮತ್ತು ಆಟಗಳಲ್ಲಿ ಹಾಗೂ ಸ್ವಲ್ಪ ಮಟ್ಟಿನ ತುಂಟಾಟದಲ್ಲಿ ಕಾಲ ಕಳೆಯತೊಡಗಿದರು. ಕೆಲವು ತಿಂಗಳುಗಳು ಹೀಗೆ ಕಾಲಹರಣ ಮಾಡಿದ್ದು ಒಂದು ದಿನ ತಂದೆಯವರ ಗಮನಕ್ಕೆ ಬಂದೇಬಿಟ್ಟಿತು. ಮಗನ ಅಧ್ಯಯನದ ಪ್ರಗತಿಯನ್ನು ತಿಳಿಯಲು ಶಾಲೆಗೆ ಹೋದ ಅವರಿಗೆ ಮಗ ಶಾಲೆಗೆ ಗೈರು ಹಾಜರಾಗುತ್ತಿದ್ದುದು ತಿಳಿದು ನೋವಾಯಿತು. ಅದಕ್ಕೆ ಕಾರಣವಾದ ಸಂದರ್ಭವನ್ನು ಮಗನಿಂದಲೇ ತಿಳಿದ ಮೇಲೆ ಕಲ್ಲಿನಾಥಶಾಸ್ತ್ರಿಗಳು ಶಾಲೆಯ ಅಧಿಕಾರಿಗಳನ್ನು ಕಾಣಲು ಮಗನೊಂದಿಗೆ ಹೋದರು. ಪುಣ್ಯಕ್ಕೆ ಅಂದು ಮುಖ್ಯೋಪಾಧ್ಯಾಯರು ಇರಲಿಲ್ಲ. ಉಪಮುಖ್ಯೋಪಾಧ್ಯಾಯರಿದ್ದರು. ಅವರಿಗೆ ಇದ್ದ ಸಂಗತಿಯನ್ನು ಮನವರಿಕೆ ಮಾಡಿಕೊಟ್ಟ ಮೇಲೆ ಉಪಮುಖ್ಯೋಪಾಧ್ಯಾಯರು ಸಿದ್ಧಯ್ಯನವರನ್ನು ಶಾಲೆಗೆ ಸೇರಿಸಿಕೊಂಡರು. ಅದಕ್ಕೆ ಕಾರಣವಿಲ್ಲದಿರಲಿಲ್ಲ. ಸಿದ್ಧಯ್ಯ ಬುದ್ಧಿವಂತನಾದ ವಿದ್ಯಾರ್ಥಿ; ಶಾಲೆಗೆ ಕೀರ್ತಿ ತರುವವನು ಎಂಬುದು ಅವರಿಗೆ ಮನವರಿಕೆಯಾಗಿಬಿಟ್ಟಿತ್ತು. ಆದ್ದರಿಂದಲೇ 'ಸಿದ್ಧಯ್ಯ ನಿನ್ನ ಮೇಲೆ ಬಹಳ ಭರವಸೆ ಇಟ್ಟುಕೊಂಡಿದ್ದೇನೆ' ಎಂದು ಹುರಿದುಂಬಿಸಿದುದಲ್ಲದೇ ಓದುವ ಹುಚ್ಚನ್ನು ಹಿಡಿಸಿದರು. ಅವರು ಕೊಟ್ಟ ಮೊದಲ ಪುಸ್ತಕ 'ಶಿವಭಕ್ತ ಭದ್ರಾಮು'. ಪುಸ್ತಕ ಕೊಡುವಾಗ ಅವರ ನಿಯಮ ಒಂದು ಇದ್ದಿತು. ಓದಿದ ಪುಸ್ತಕದ ಸಾರಾಂಶವನ್ನು ಹೇಳಿದರೆ ಮಾತ್ರ ಹೊಸ ಪುಸ್ತಕವನ್ನು ನೀಡುತ್ತಿದ್ದರು. ಸ್ಮರಣಶಕ್ತಿಗೆ ಹೆಸರಾದ ಸಿದ್ಧಯ್ಯನವರಿಗೆ ಗುರುಗಳ ಮೆಚ್ಚುಗೆಗೆ ಪಾತ್ರವಾಗುವುದು ಕಷ್ಟವಾಗಲಿಲ್ಲ. ಹೀಗಾಗಿ ಅಧ್ಯಯನ ತುಂಬ ಸಮರ್ಥವಾಗಿಯೇ ಮುಂದುವರಿಯಿತು.

### ಮಿಡ್ಲ್ ಪರೀಕ್ಷೆ

ಆಗ ಏಳನೆಯ ತರಗತಿಯ ಪರೀಕ್ಷೆ ಸಾರ್ವಜನಿಕವಾಗಿದ್ದಿತು. ವರ್ಷಾಂತ್ಯದಲ್ಲಿ ನಡೆಯುವ ಪರೀಕ್ಷೆಗೆ ಪೂರ್ವಭಾವಿಯಾಗಿ ಗುರುಕುಲದವರು ತಾವೇ ಒಂದು ಪರೀಕ್ಷೆಯನ್ನು ನಡೆಸುತ್ತಿದ್ದರು. ಆ ಪರೀಕ್ಷೆಯಲ್ಲಿ



ಸಿದ್ಧಯ್ಯ ಎಲ್ಲಾ ವಿಷಯಗಳಲ್ಲಿಯೂ ಪ್ರಪ್ರಥಮವಾಗಿ ಗುರುಗಳೆಲ್ಲರ ಅಭಿಮಾನಕ್ಕೆ ಪಾತ್ರರಾದರು. ದುರ್ದೈವ ಎಂದರೆ ಈ ಪರೀಕ್ಷೆ ಮುಗಿಸಿ ದ್ಯಾಂಪುರಕ್ಕೆ ಹೋದ ಸಿದ್ಧಯ್ಯ ಮೇಲೇಳಲಿಲ್ಲ. ತೀರಾ ಅಸ್ವಸ್ಥರಾದ ಅವರು ಪರೀಕ್ಷೆಗಾಗಿ ಕೊಪ್ಪಳಕ್ಕೆ ಹೋಗುವ ದಿನಕ್ಕೆ ಆರೋಗ್ಯವಂತರಾಗಬಹುದು ಎಂದು ಎಲ್ಲರೂ ಆಶಿಸಿದ್ದರು. ಅದು ಸಾಧ್ಯವಾಗಲಿಲ್ಲ. ಆದರೆ ಗುರುಕುಲದ ಮುಖ್ಯೋಪಾಧ್ಯಾಯರು ತುಂಬಾ ದೊಡ್ಡವರು. ಅವರು ತಮ್ಮ ಶಾಲೆಯಲ್ಲಿ ನಡೆಸಿದ ಪರೀಕ್ಷೆಗಳ ಪತ್ರಿಕೆಗಳನ್ನೇ ಕೊಪ್ಪಳಕ್ಕೆ ಒಯ್ದು, ಅಲ್ಲಿನ ಶಿಕ್ಷಣಾಧಿಕಾರಿಗಳ ಮನವೊಲಿಸಿ ಆ ಫಲಿತಾಂಶಕ್ಕೆ ದೃಢೀಕರಣವನ್ನು ಪಡೆದು ತಂದರು. ಅನಾರೋಗ್ಯದಿಂದ ಪರೀಕ್ಷೆಗೆ ಕೂಡಲಾಗದಿದ್ದರೂ 'Middle' ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದ ವಿಶಿಷ್ಟ ವ್ಯಕ್ತಿಯಾದರು ಸಿದ್ಧಯ್ಯ.

### ಕಲಬುರ್ಗಿಯಲ್ಲಿ

ಅಲ್ಲಿಂದ ಮುಂದೆ ಪ್ರೌಢಶಾಲೆಯ ಅಧ್ಯಯನದ ವಿಷಯದಲ್ಲಿಯೂ ಕಲ್ಲಿನಾಥಶಾಸ್ತ್ರಿಗಳು ವಹಿಸಿದ ಎಚ್ಚರ ಗಮನಾರ್ಹವಾದುದು. ಉಸ್ಮಾನಿಯಾ ವಿಶ್ವವಿದ್ಯಾಲಯದ ಪಠ್ಯಕ್ಕೆ ಸೇರಿದ ಸಂಸ್ಥೆಯಲ್ಲಿ ತಮ್ಮ ಮಗನ ಶಿಕ್ಷಣವಾಗಬೇಕೆಂದು ಕಲ್ಬುರ್ಗಿಗೆ ಸಿದ್ಧಯ್ಯ ಪುರಾಣಿಕರನ್ನು ಕರೆದುಕೊಂಡು ಹೋದರು. ಕಲ್ಬುರ್ಗಿಯ ವಿಶ್ವವಿದ್ಯಾಲಯದಲ್ಲಿ ಪ್ರೌಢಶಾಲೆ ಮತ್ತು ಕಾಲೇಜುಗಳು ಒಂದೇ ಕಡೆ ಇದ್ದು ಅವುಗಳ ಪ್ರಾಂಶುಪಾಲರು ಮೌಲ್ವಿ ಜುಲ್ಫಿಕಾರ್ ಅಲಿ ಹಕ್ಕಾನಿ ಸಾಹೇಬರು ಆಗಿದ್ದರು. ಅಲ್ಲಿಗೆ ವಿದ್ಯಾರ್ಥಿಯನ್ನು ಕರೆದೊಯ್ಯುತ್ತಿದ್ದಂತೆ ಪ್ರವೇಶ ದೊರಕಿಸುವುದು ಕಷ್ಟವಾಗಲಿಲ್ಲ. ಸಿದ್ಧಯ್ಯನವರು ಗುರುಕುಲದಲ್ಲಿದ್ದ ಕಾರಣವಾಗಿ ಖಾದಿ ಧರಿಸುತ್ತಿದ್ದರಿಂದ ಹಕ್ಕಾನಿ ಸಾಹೇಬರು ಸ್ವಲ್ಪ ಸಂದೇಹಕ್ಕೆ ಒಳಗಾಗಿದ್ದು ನಿಜ. ಗುರುಕುಲದ ಪಠ್ಯ ವಿಶ್ವವಿದ್ಯಾಲಯದ ಪಠ್ಯವೇ ಆಗಿದ್ದುದರಿಂದ ವಿದ್ಯಾರ್ಥಿಯ ಗುಣಮಟ್ಟವನ್ನು ಪರೀಕ್ಷಿಸಬೇಕೆಂದು ಕೆಲವು ಪರೀಕ್ಷೆಗಳನ್ನು ನಡೆಸಿದರು. ಇಂಗ್ಲೀಷ್, ವ್ಯಾಕರಣ ಮತ್ತು ಗಣಿತಗಳಲ್ಲಿ ನಡೆಸಿದ ಪರೀಕ್ಷೆಗಳಲ್ಲಿ ಸಿದ್ಧಯ್ಯ ಶಿಕ್ಷಕರ ಗಮನವನ್ನು ಸೆಳೆದು ಯಶಸ್ವಿಯಾದರು.ಅಲ್ಲಿ ತಮ್ಮ ಮಗನನ್ನು

ಉಚಿತ ಪ್ರಸಾದನಿಲಯದಲ್ಲಿ ಬಿಟ್ಟು ಕಲ್ಲಿನಾಥಶಾಸ್ತ್ರಿಗಳು ಊರಿಗೆ ಹೋದರು.

## ಗಣಿತದಿಂದ ಕನ್ನಡಕ್ಕೆ

ಇಲ್ಲಿಯ ಶಿಕ್ಷಣ ಆರಂಭವಾಗುತ್ತಿದ್ದಂತೆ ಮತ್ತೊಂದು ತೊಡಕು ಸಿದ್ಧಯ್ಯನವರಿಗೆ ಎದುರಾಯಿತು. ಗಣಿತದ ಅಧ್ಯಾಪಕರಾದ ರಹಮತ್ ಉಲ್ಲಾಖಾನ ತುಂಬಾ ಶಿಸ್ತಿನವರು. ಅವರು ಮನೆಯಲ್ಲಿ ಬರೆಯಲು ಕೊಟ್ಟ ಪ್ರಶ್ನೆಗಳಿಗೆ ಮಾರನೆಯ ದಿನ ಉತ್ತರಗಳನ್ನು ವಿದ್ಯಾರ್ಥಿಗಳು ಕಡ್ಡಾಯವಾಗಿ ತರಲೇಬೇಕಾಗಿತ್ತು. ಯಂತ್ರಜ್ಞನಾಗುವ ಬಯಕೆಯನ್ನು ಇಟ್ಟುಕೊಂಡು ಉನ್ನತ ಗಣಿತವನ್ನು ಅಧ್ಯಯನ ವಿಷಯವನ್ನಾಗಿ ಪಡೆದಿದ್ದ ಸಿದ್ಧಯ್ಯ ಒಂದು ದಿನ 'ಹೋಮ್‌ವರ್ಕ್' ಅನ್ನು ಮಾಡುವುದರಲ್ಲಿ ತಪ್ಪಿದ್ದರು. ಅಧ್ಯಾಪಕರು ಕೋಪಗೊಂಡಿದ್ದು ಅಲ್ಲದೇ ನೀನಿನ್ನು ಬೇರೆ ವಿಷಯವನ್ನು ಮತ್ತು ಬೇರೆ ಉಪಾಧ್ಯಾಯರನ್ನು ಆರಿಸಿಕೋ ಹೋಗು ಎಂದು ಸಿಟ್ಟುಗೊಂಡು ಆದೇಶಿಸಿದರು. ಸ್ವಾಭಿಮಾನಿಯಾದ ಸಿದ್ಧಯ್ಯ ಏನು ಮಾಡಬೇಕೆಂದು ತೋಚದೇ ಇದ್ದಾಗ ವಿಷಯಗಳನ್ನು ಬದಲಿಸಿಕೊಳ್ಳಲು ಇನ್ನೂ ಸಮಯವಿದೆ ಎಂಬುದು ತಿಳಿದು, ತವಗ ಕನ್ನಡ ಕಲಿಸುತ್ತಿದ್ದ ಭೀಮಸೇನರಾವ್ ಅವರ ಬಳಿಗೆ ಹೋದರು. ಕನ್ನಡ ತೆಗೆದುಕೊಳ್ಳಲು ಅನುಮತಿ ಬೇಡಿದರು. ಕನ್ನಡದ ಪುನರುತ್ಥಾನಕ್ಕೆ ಭೀಮಸೇನರಾಯರು ಶ್ರಮಿಸುತ್ತಿದ್ದ ಕಾಲವದು. ಗಮಕ ಕಲೆ–ಹಾಸ್ಯವೃತ್ತಿಗಳಲ್ಲಿ ಪರಿಣಿತರು ಅವರು. ಕನ್ನಡಕ್ಕೆ ಸಿದ್ಧಯ್ಯನವರನ್ನು ಸೇರಿಸಿಕೊಂಡರು. ಯಂತ್ರಜ್ಞನಾಗುವ ಸಿದ್ಧಯ್ಯ ಕನ್ನಡದ ಕಡೆಗೆ ಹೊರಳುವಂತಾದದ್ದು ಹೀಗೆ. ಅಲ್ಲಿ ಇದ್ದ ಕನ್ನಡದ ಪುಸ್ತಕಗಳ ಭಂಡಾರವನ್ನು ಸಿದ್ಧಯ್ಯ ಚನ್ನಾಗಿಯೇ ಬಳಸಿಕೊಂಡು ತಾವು ಬೆಳೆದರು. ಈ ಅವಧಿಯಲ್ಲಿ ಕವನ ಸ್ಪರ್ಧೆಯೊಂದರಲ್ಲಿ ಬೆಳಗನ್ನು ಕುರಿತು ಕವಿತೆ ಬರೆದು ಪ್ರಥಮ ಬಹುಮಾನವನ್ನು ಗಿಟ್ಟಿಸಿದರು. ಷಟ್ಪದಿಯಲ್ಲಿ ಬರೆದ ಇವರ ಕವನವೊಂದು 'ಜಯ ಕರ್ನಾಟಕ'ಪತ್ರಿಕೆಯಲ್ಲಿ ಅಚ್ಚಾದದ್ದು ಇದೇ ಅವಧಿಯಲ್ಲಿಯೇ.



## ಮೆಟ್ರಿಕ್ ಪರೀಕ್ಷೆ

ಸ್ವಾಭಿಮಾನಿಯಾದ ಸಿದ್ಧಯ್ಯ ಉಚಿತ ಪ್ರಸಾದನಿಯಲಯದ ಅವ್ಯವಸ್ಥೆಯ ಬಗೆಗೆ ಮಾಡಿದ ಟೀಕೆ ಹಾಗೂ ಅದರ ಪರಿಣಾಮವಾಗಿ ಆದ ಅವಮಾನಗಳ ಕಾರಣವಾಗಿ ಉಚಿತ ಪ್ರಸಾದ ನಿಲಯವನ್ನು ಬಿಟ್ಟು ಗುರುಬಸವ ಮಠಕ್ಕೆ ಸೇರಬೇಕಾಯಿತು. ಈ ವೇಳೆಗೆ ತಂದೆ ಕಲ್ಲಿನಾಥಶಾಸ್ತ್ರಿಗಳ ಪುರಾಣ, ಪ್ರವಚನ, ಕಾರ್ಯಕ್ರಮಗಳ ಹಿಂದೆ ಬಿದ್ದು ಉದರಂಭರಣಕ್ಕಾಗಿ ವೈದ್ಯ ಪ್ರವೃತ್ತಿಯನ್ನು ಅವಲಂಬಿಸಬೇಕಾಗಿ ಬಂದಿದ್ದರಿಂದ ವಾರದಮನೆಗಳಲ್ಲಿ ಊಟ ಮಾಡುತ್ತ ಪುಸ್ತಕಗಳನ್ನೇ ಸಹಪಾಠಿಗಳಾಗಿ ಮಾಡಿಕೊಂಡು ಅಧ್ಯಯನವನ್ನು ಮುಂದುವರಿಸಿದರು. ಆ ವೇಳೆಯಲ್ಲಿ ನ್ಯಾಯಮೂರ್ತಿ ತುಕೋಳರ ಭಾಷಣದಿಂದ ವಚನ ಸಾಹಿತ್ಯದ ಕಡೆಗೆ ವಿಶೇಷವಾಗಿ ಆಕರ್ಷಿತರಾದರು. ಬೇಂದ್ರೆ, ಮುಗಳಿ, ಗೋಕಾಕ ಅವರು ಮಾಡಿದ ಭಾಷಣಗಳಿಂದ ಪ್ರಭಾವಿತರಾದರು. ವರ್ಷದ ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದರು. ಈ ಅವಧಿಯಲ್ಲಿ ಲಿಂಗಾಯತ ತರುಣ ಸಂಘದ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದರು. ಪರೀಕ್ಷೆಯಲ್ಲಿ ಪ್ರಥಮಸ್ಥಾನವನ್ನು ಉಳಿಸಿಕೊಂಡರು. ಸಿದ್ಧಯ್ಯನವರ ಕುಶಾಗ್ರಮತಿಯನ್ನು ಗಮನಿಸಿದ ಹಕ್ಕಾನಿ ಸಾಹೇಬರು ಸಿದ್ಧಯ್ಯ ಇಂಗ್ಲೀಷಿನಲ್ಲಿ ತಮ್ಮ ವಿದ್ಯಾಸಂಸ್ಥೆಗೆ ಪ್ರಥಮಸ್ಥಾನದ ಗೌರವವನ್ನು ತರಬೇಕೆಂದು ಹುರಿದುಂಬಿಸಿದರು. ಆಜೀಜ್‌ಖಾನ್ ಸಾಹೇಬರು ಒತ್ತಾಸೆಯಾಗಿ ನಿಂತರು. ವಿದ್ಯಾರ್ಥಿಗಳ ಅಭ್ಯುದಯದ ಮೂಲಕ ಸಂಸ್ಥೆಯ ಹೆಸರನ್ನು ಉಳಿಸುವ ಹಕ್ಕಾನಿ ಸಾಹೇಬರ ವ್ಯಕ್ತಿತ್ವ ನಿಜವಾಗಿಯೂ ಗಮನಾರ್ಹವಾದುದು. ಸಿದ್ಧಯ್ಯನವರಲ್ಲಿ ಅವರು ತೋರಿದ ಆಸ್ಥೆ, ಇಟ್ಟ ಭರವಸೆ, ಸ್ಮರಣೀಯವಾದದ್ದು. ಸಿದ್ಧಯ್ಯ ಮೆಟ್ರಿಕ್ ಪರೀಕ್ಷೆಯಲ್ಲಿ ಮೂರನೆಯ ಸ್ಥಾನವನ್ನು ಪಡೆದದ್ದಲ್ಲದೇ ಕನ್ನಡ ಮತ್ತು ಇಂಗ್ಲೀಷ್ ಎರಡರಲ್ಲೂ ಪ್ರಥಮ ಸ್ಥಾನವನ್ನುಳಿಸಿಕೊಂಡು ಪ್ರಿನ್ಸಿಪಾಲ್ ಮತ್ತು ಅಧ್ಯಾಪಕರ ಹೆಮ್ಮೆಗೆ ಪಾತ್ರರಾದರು.

ಈ ಸಂದರ್ಭದಲ್ಲಿ ಸಿದ್ಧಯ್ಯನವರ ಬದುಕಿನಲ್ಲಿ ನಡೆದ ಈ ಒಂದು ಘಟನೆ ಗಮನಾರ್ಹವಾದದ್ದು.

ಉದಗಿರಿಯ ಹಾವಗಿಮಠದ ಸ್ವಾಮಿಗಳ ಮಠಕ್ಕೆ ಅನೇಕ ಶಾಖಾ ಮಠಗಳಿದ್ದು ಅಲ್ಲಿ ಸಿದ್ಧಯ್ಯ ಸ್ವಾಮಿಯಾಗಲಿ ಎಂದು ಕಲ್ಲಿನಾಥಶಾಸ್ತ್ರಿಗಳಿಗೆ ಸ್ವಾಮೀಜಿಗಳು ಪತ್ರ ಬರೆದರು. ಆದರೆ ಕಲ್ಲಿನಾಥಶಾಸ್ತ್ರಿಗಳು ತೀರ್ಮಾನವನ್ನು ಮಗನ ಆಯ್ಕೆಗೆ ಬಿಟ್ಟುಕೊಟ್ಟರು. ಸಿದ್ಧಯ್ಯ ವೈರಾಗ್ಯ ಒಲ್ಲೆನೆಂದು ದೃಢವಾಗಿ ನಿರಾಕರಿಸಿದರು.

## ಇಂಟರ್ ಪರೀಕ್ಷೆ ಮತ್ತು ಗಂಡಾಂತರ

ಹಕ್ಕಾನಿ ಸಾಹೇಬರು ಸಿದ್ಧಯ್ಯನವರ ಮೇಲಿಟ್ಟ ಅಪಾರ ಪ್ರೇಮ ಉಲ್ಲೇಖನಾರ್ಹ. ಸಿದ್ಧಯ್ಯ ರಜೆ ಮುಗಿಸಿ ಹಿಂತಿರುಗಿದಾಗ ಮಿಠಾಯಿ ತಿನ್ನಿಸಿ 'Intermediate' ಪರೀಕ್ಷೆಯಲ್ಲಿ ಪ್ರಥಮಸ್ಥಾನವನ್ನು ಯಾರಿಗೂ ಬಿಟ್ಟು ಕೊಡಬಾರದೆಂದು ಹುರಿದುಂಬಿಸಿದರು. ಮಠ ಬಿಡಿಸಿ ಕಾಲೇಜಿನ ವಿದ್ಯಾರ್ಥಿನಿಲಯಕ್ಕೆ ಸೇರಿಸಿದರು; ವಿದ್ಯಾರ್ಥಿವೇತನ ದೊರೆಯುವಂತೆ ಮಾಡಿದರು. ಸಿದ್ಧಯ್ಯ ಗುರುಹಿರಿಯರ ಆಶೋತ್ತರಗಳಿಗೆ ಧಕ್ಕೆ ಬರಬಾರದೆಂದು ಅಧ್ಯಯನ ವ್ಯಾಯಾಮಗಳಲ್ಲಿ ಪೂರ್ಣವಾಗಿ ಮಗ್ನರಾಗಿಬಿಟ್ಟರು. ಪ್ರಾಂಶುಪಾಲರ ಮೆಚ್ಚಿನ ವಿದ್ಯಾರ್ಥಿ ಎಂದು ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯೂ ಆದರು.ಆದರೆ ಅನಾರೋಗ್ಯದ ತೊಡಕು ಮತ್ತೆ ಸಿದ್ಧಯ್ಯನವರನ್ನು ಕಾಡಿತ್ತು. 'Intermediate' ಪರೀಕ್ಷೆಗಾಗಿ ಹಣ ಕಟ್ಟಿದ್ದರು. ಅದಕ್ಕಾಗಿ ಪರೀಕ್ಷೆ ತೆಗೆದುಕೊಳ್ಳಲು ಹೈದರಾಬಾದಿಗೆ ಹೋಗಬೇಕಾಗಿತ್ತು. ಆದರೆ ಅನಾರೋಗ್ಯ ಮತ್ತೆ ಅವರನ್ನು ಕಾಡಿತು. ಹಕ್ಕಾನಿ ಸಾಹೇಬರು ಕೊಟ್ಟ ವಿದ್ಯಾರ್ಥಿವೇತನದ ಹಣವನ್ನು ಮತ್ತು ಆಶೀರ್ವಾದವನ್ನು ಹೊತ್ತ ಸಿದ್ಧಯ್ಯ ತೀವ್ರವಾದ ಅನಾರೋಗ್ಯಕ್ಕೆ ತುತ್ತಾದರು.ಕಾಲೇಜಿಗೆ ಸೇರುವ ಅವಧಿ ಮುಗಿದ ಕಾರಣವಾಗಿ ಖಾಸಗಿಯಾಗಿಯೇ ಓದಲು ಮನಸ್ಸು ಮಾಡಿದರು. ಪರೀಕ್ಷೆಗಾಗಿ ಶುಲ್ಕವನ್ನು ಈಗಾಗಲೇ ಕಟ್ಟಿಯಾಗಿತ್ತು. ತಮ್ಮ ಆರೋಗ್ಯದ ಪರೀಕ್ಷೆಗಾಗಿ ಮದನಪಲ್ಲಿಗೆ ಹೋಗಿ ಹಲವಾರು ಪರೀಕ್ಷೆಗೆ ಒಳಗಾದರು. ಆ ಪರೀಕ್ಷೆಗಳಿಗೆ ಶುಲ್ಕವನ್ನು ಪಾವತಿ ಮಾಡಿಯಾದ ಮೇಲೆ ಜೇಬಿನಲ್ಲಿ ಉಳಿದದ್ದು ಚಿಲ್ಲರೆ ಹಣವಷ್ಟೆ. ಹಸಿವೆಯಿಂದ ಬಳಲಿದ್ದ ಸಿದ್ಧಯ್ಯ ಎದುರಿಗೆ



ಕಾಣಿಸಿದ ಹೋಟೆಲ್ ಪ್ರವೇಶಿಸಿದರು; ಊಟಕ್ಕೆ ಆದೇಶ ನೀಡಿದರು. ತಟ್ಟೆಗೆ ಕೈ ಇಟ್ಟಾಗ ಸಾರಿನಲ್ಲಿ ತೇಲುತ್ತಿರುವ ಮೀನು ಕಾಣಿಸಿತು; ಏಕೆಂದರೆ ಅದು ನಾಯರ್ ಹೋಟೆಲ್. ಬೇರೆ ಊಟ ತರಿಸಬೇಕೆಂದರೆ ಜೇಬಿನಲ್ಲಿ ಬಸ್ಸಿನ ಚಾರ್ಜ್ ಬಿಟ್ಟು ಬೇರೆ ಹಣ ಉಳಿದಿರಲಿಲ್ಲ. ತನ್ನ ಕರ್ಮವೆಂದು ಮೀನನ್ನು ತೆಗೆದು ಪಕ್ಕದಲ್ಲಿಟ್ಟು ಅದೇ ಸಾರಿನಲ್ಲಿ ಉಂಡು ಎದ್ದರು.

## ಆಲಮಟ್ಟಿ ಆಶ್ರಮಕ್ಕೆ

ಇದೇ ಸಂದರ್ಭದಲ್ಲಿ ಸಿದ್ಧಯ್ಯ ಮತ್ತೊಂದು ಬಿಕ್ಕಟ್ಟಿಗೆ ಸಿಕ್ಕಿದರು. ಈ ಅವಸ್ಥೆಯಲ್ಲಿಯೂ ಇವರ ಸೋದರಮಾವ ಇವರನ್ನು ತಮ್ಮ ಮಗಳನ್ನು ಮದುವೆಯಾಗಬೇಕೆಂದು ಒತ್ತಾಯಿಸಿದ. ತಂದೆ ತಾಯಿಗಳು ಅದೇ ಮಾತನ್ನು ಆಡಿದರು. ಬದುಕಿನಲ್ಲಿ ಧ್ಯೇಯವೊಂದನ್ನು ಇಟ್ಟುಕೊಂಡಿದ್ದ ಸಿದ್ಧಯ್ಯ ಇದಕ್ಕೆ ಒಪ್ಪಲು ಸಿದ್ಧವಿರಲಿಲ್ಲ. ಆದರೆ ಹಿರಿಯರ ಮಾತನ್ನು ಮೀರುವುದು ಹೇಗೆಂದು ತೋಚದೆ ತನ್ನ ತಮ್ಮನ ನೆರವಿನಿಂದ Trunk ಒಂದನ್ನು ತೆಗೆದುಕೊಂಡು ಆಲಮಟ್ಟಿ ಆಶ್ರಮಕ್ಕೆ ಹೋಗಿಬಿಟ್ಟರು. ಆಲಮಟ್ಟಿ ಆಶ್ರಮಕ್ಕೆ ಹೋದದ್ದರಿಂದ ಒಂದು ಶೈಕ್ಷಣಿಕ ವರ್ಷ ವ್ಯರ್ಥವಾದದ್ದು ನಿಜ. ಆದರೆ ಅದರಿಂದ ಆದ ಲಾಭ ಮಾತ್ರ ಅಪಾರ. ಕರ್ನಾಟಕದ ಗಾಂಧಿ ಎಂದು ಹೆಸರಾಗಿದ್ದ ಹರ್ಡೇಕರ್ ಮಂಜಪ್ಪನವರ ವ್ಯಕ್ತಿತ್ವದ ಗಾಢವಾದ ಪ್ರಭಾವಕ್ಕೆ ಒಳಗಾದರು. ಅಲ್ಲಿದ್ದ ಅದ್ಭುತ ಪುಸ್ತಕ ಭಂಡಾರದ ನೆರವನ್ನು ಪಡೆದುಕೊಂಡರು. ಮಿಲ್, ಎಮರ್ಸನ್, ರಸ್ಕಿನ್, ಟಾಲ್‌ಸ್ಟಾಯ್, ಕಾರ್ಲಾಯ್ಲ ಮೊದಲಾದವರ ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿದರು. ವಚನ ಸಾಹಿತ್ಯವಂತೂ ಸಿದ್ಧಯ್ಯನವರ ಹೃದಯವನ್ನು ಸೂರೆಮಾಡಿಬಿಟ್ಟಿತ್ತು. ಆದ್ದರಿಂದಲೇ ಸಿದ್ಧಯ್ಯ ಅಲ್ಲಿ ಪಡೆದ ಜ್ಞಾನ ಬದುಕಿಗೆ ಬುತ್ತಿಯಾಯಿತು ಎಂದಿರುವುದು. ಆಲಮಟ್ಟಿಯ ಅವಧಿ ಇನ್ನೊಂದು ಕಾರಣಕ್ಕೂ ಸಿದ್ಧಯ್ಯನವರ ಬದುಕಿನಲ್ಲಿ ಪ್ರಮುಖವಾಗಿದೆ. ಕಾವ್ಯದೇವಿ ಎಂದು ಬರೆದ ನೀಳ್ಗವಿತೆ ಶರಣ ಸಂದೇಶದಲ್ಲಿ ಪ್ರಕಟವಾಗಿದ್ದು ಅದರ ಕೊನೆಯ ಎರಡು ಸಾಲುಗಳು ಹೀಗಿವೆ– 'ನಿನ್ನಾತ್ಮವಾನಂದ, ನನ್ನಾತ್ಮ ಕಾವ್ಯ ಇಂತು ಕಾವ್ಯಾನಂದನಾಮಸುಶ್ರಾವ್ಯ' ಸಿದ್ಧಯ್ಯ ಪುರಾಣಿಕರ

ಕಾವ್ಯನಾಮ ಹುಟ್ಟಿಕೊಂಡಿದ್ದು ಹೀಗೆ. ಆಶ್ರಮದಲ್ಲಿದ್ದಂತೆಯೇ ಸಿದ್ಧಯ್ಯ ತಂದೆಯವರಿಗೊಂದು ಕಾಗದ ಬರೆದು ಅಲ್ಲಿಗೆ ಬಂದದ್ದಕ್ಕೆ ಕಾರಣವನ್ನು ವಿವರಿಸಿದರು. ಕಲ್ಲಿನಾಥಶಾಸ್ತ್ರಿಗಳು ಕೋಪಿಸಿಕೊಳ್ಳಲಿಲ್ಲ. ಅದಕ್ಕೆ ಬದಲಾಗಿ ಮದುವೆಗೆ ನನ್ನ ಒಪ್ಪಿಗೆಯಿಲ್ಲವೆಂದು ನೀನೇ ಸೂಚಿಸಬಹುದಾಗಿತ್ತಲ್ಲಾ ಎಂದು ತಿಳಿಸಿ ''ನಿನ್ನ ಜೀವನವನ್ನು ರೂಪಿಸಿಕೊಳ್ಳುವ ಜವಾಬ್ದಾರಿ ನಿನ್ನದೆ'' ಎಂದು ಮುಕ್ತ ಮನಸ್ಸಿನಿಂದ ಆಶೀರ್ವದಿಸಿದರು.

## ಹಕ್ಕಾನಿ ಸಾಹೇಬರ ಪ್ರೋತ್ಸಾಹ

ಸಿದ್ಧಯ್ಯ ಪರೀಕ್ಷೆಗೆ ಶುಲ್ಕ ಕಟ್ಟಿದ್ದರಿಂದ ಖಾಸಗಿಯಾಗಿಯೇ ಅಧ್ಯಯನ ಮಾಡಿ ಹೈದರಾಬಾದಿಗೆ ಹೋಗಿ ಪರೀಕ್ಷೆ ಬರೆದರು. ಅಲ್ಲಿ ಪರೀಕ್ಷೆಗೆ ಬರೆಯುವಾಗ ನೆರವಾದವರು ಏತೀರಿ ಅನ್ನಪೂರ್ಣಯ್ಯನವರು ಮಾಡಿದ ಸಹಾಯ ಅಷ್ಟಿಷ್ಟಲ್ಲ. ಪರೀಕ್ಷೆಯಲ್ಲಿ ಬರೆದು ಊರು ಸೇರಿದರು. ಆಮೇಲೆ ಪರೀಕ್ಷೆಯ ಫಲಿತಾಂಶ ಪ್ರಕಟವಾಯಿತು. ತೇರ್ಗಡೆ ಯಾಗುವುದೇ ಅನುಮಾನ ಎಂದುಕೊಂಡಿದ್ದವರಿಗೂ, ಸ್ವತಃ ಸಿದ್ಧಯ್ಯನವರಿಗೂ ಆಶ್ಚರ್ಯ ಹುಟ್ಟಿಸುವ ಸಂತೋಷದ ಫಲಿತಾಂಶವದು. ಒಟ್ಟು ಅಂಕಗಳ ಆಧಾರದಲ್ಲಿ ಅವರು ವಿಶ್ವವಿದ್ಯಾನಿಲಯಕ್ಕೆ ಮೂರನೆಯವರಾಗಿದ್ದರು. ಕನ್ನಡ ಮತ್ತು ಸಂಸ್ಕೃತದಲ್ಲಿ ಪ್ರಥಮಸ್ಥಾನ ಪಡೆದಿದ್ದರು. ಅತ್ಯಂತ ಹರುಷದಿಂದ ಸಿದ್ಧಯ್ಯ ಹಕ್ಕಾನಿ ಸಾಹೇಬರನ್ನು ಕಂಡು ತಮ್ಮ ಗೌರವ ಹಾಗೂ ಕೃತಜ್ಞತೆಗಳನ್ನು ಅರ್ಪಿಸಿದರು. ಅವರ ವಾತ್ಸಲ್ಯ ಈಗ ಇನ್ನಷ್ಟು ಹೆಚ್ಚಿತ್ತು. ಇಷ್ಟು ಕಾಯಿಲೆ ಸಹಿಸಿಯೂ ಖಾಸಗಿಯಾಗಿ ಪರೀಕ್ಷೆ ಕಟ್ಟಿಯೂ ನೀನು ವಿಶ್ವವಿದ್ಯಾಲಯಕ್ಕೆ ಮೂರನೆಯ ಸ್ಥಾನ ಪಡೆದೆ. ಎಲ್ಲರಂತೆ ಕ್ರಮಬದ್ಧವಾಗಿ ಓದಿ ಪರೀಕ್ಷೆಗೆ ಕುಳಿತಿದ್ದರೆ ಖಂಡಿತವಾಗಿ ನೀನು ಮೊದಲನೆಯ ಸ್ಥಾನ ಪಡೆಯುತ್ತಿದ್ದೆ. ಆ ಸುದೈವ ನಿನಗೂ ಇಲ್ಲವಾಯಿತು. ನನ್ನ ಕಾಲೇಜಿಗೂ ಇಲ್ಲವಾಯಿತು. ಚಿಂತೆಯಿಲ್ಲ ಪದವಿ ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದರೆ ಕೊನೆತನಕ ಹೆಸರು ಉಳಿಯುತ್ತದೆ. ಅದಕ್ಕಾಗಿ ಪೂರ್ಣ ಪ್ರಯತ್ನಮಾಡು. ಹೇಗೂ ಹದಿನೆಂಟು ರೂಪಾಯಿಗಳ ವಿದ್ಯಾರ್ಥಿವೇತನ ದೊರೆಯುವುದು. ಆದುದರಿಂದ



ವಿಶ್ವವಿದ್ಯಾಲಯದ ವಿದ್ಯಾರ್ಥಿನಿಲಯವನ್ನೇ ಸೇರಿಬಿಡು. ಎಲ್ಲಿಯಾದರೂ ಇದ್ದು ನಿನ್ನ ಭವಿಷ್ಯವನ್ನು ಹಾಳು ಮಾಡಿಕೊಳ್ಳಬೇಡ. ವಿದ್ಯಾರ್ಥಿನಿಲಯಕ್ಕೆ ಹದಿನಾಲ್ಕು ರೂಪಾಯಿ ಕೊಟ್ಟರೆ ಕಾಲೇಜು ಶುಲ್ಕಕ್ಕೆ ನಾಲ್ಕು ರೂಪಾಯಿಗಳು ಉಳಿಯುತ್ತವೆ. ಮೇಲಿನ ವೆಚ್ಚ ಹೆಚ್ಚಾಗಲಾರದು. ವಿಶ್ವವಿದ್ಯಾನಿಲಯಕ್ಕೆ ಕೊಡುವ ಹಣದಲ್ಲಿ ಬೆಳಗಿನ ಉಪಹಾರ, ಮಧ್ಯಾಹ್ನದ ಊಟ, ಸಂಜೆಯ ಹಾಲು, ರಾತ್ರಿ ಮಲಗುವ ವ್ಯವಸ್ಥೆ ಮಾಡುವುದಲ್ಲದೆ ಅಗಸ-ಕ್ಷೌರಿಕರ ವೆಚ್ಚವನ್ನು ಅವರೇ ವಹಿಸುತ್ತಾರೆ. ಆದುದರಿಂದ ಅಲ್ಲಿಯೇ ಇದ್ದು ಕಿಂಚಿತ್ ಹಣದ ಕೊರತೆ ಬಿದ್ದರೆ ನನಗೆ ಕಾಗದ ಬರೆ ಎಂದು ಮಾರ್ಗದರ್ಶನವನ್ನೂ ನೆರವನ್ನೂ ನೀಡಿದರು. ಅಷ್ಟೇ ಅಲ್ಲ ನಿರ್ಗಮನ ಪತ್ರಿಕೆಯನ್ನು ತಾವೇ ತರಿಸಿಕೊಟ್ಟು ವಿಶ್ವವಿದ್ಯಾಲಯದ ಕಲಾ ಕಾಲೇಜಿನ ಪ್ರೊಫೆಸರ್ ಆಗಿದ್ದ ಶ್ರೀ ಹುಸೇನ್ ಅಲಿಖಾನ್ ಸಾಹೇಬರಿಗೆ ಶಿಫಾರಸ್ಸು ಪತ್ರವನ್ನು ಕೊಟ್ಟರು. ''ಈ ವಿದ್ಯಾರ್ಥಿ ನನ್ನ ಕಾಲೇಜಿನ ಹೆಮ್ಮೆಯ ಕೊಡುಗೆ, ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಮುಂದೆ ಇವನು ನಿಮಗೂ ಕೀರ್ತಿ ತರುವನು'' ಎಂದು ಬರೆದರು. ಹಕ್ಕಾನಿ ಸಾಹೇಬರು ಸಿದ್ಧಯ್ಯನವರ ಬದುಕಿನ ದೃಷ್ಟಿಯಿಂದ ಮಾತ್ರವಲ್ಲ ಸಂಸ್ಕೃತಿಯ ದೃಷ್ಟಿಯಿಂದ ಕೂಡ ಮಹತ್ವಪಡೆದ ವ್ಯಕ್ತಿ. ಇಂತಹ ಗುರುಗಳು ಹೆಚ್ಚಿದಷ್ಟೂ, ಯಾವುದೇ ನಾಡಿನ ಸಂಸ್ಕೃತಿ, ಸಂವರ್ಧನೆಗೊಳ್ಳುತ್ತದೆ.

## ಹೈದರಾಬಾದಿನಲ್ಲಿ

ಈ ಪತ್ರ ನೋಡಿದ ಹುಸೇನ್ ಸಾಹೇಬರು ತುಂಬಾ ಅಭಿಮಾನ ಗೊಂಡರು. ಅಷ್ಟೇ ಅಲ್ಲ ಹಕ್ಕಾನಿ ಸಾಹೇಬರ ಮಾತು ಎಂದೂ ಹುಸಿಯಾದುದಲ್ಲ ಎಂದು ಅರಿತ ಹುಸೇನ್ ಸಾಹೇಬರು, ನನ್ನ ಸಂಪೂರ್ಣ ಸಹಾಯ ನಿನಗಿದೆ ಇನ್ನೇನು ಬೇಕು ಹೇಳು? ಎಂದರು. 'ಶುಲ್ಕ ಮಾಫಿ ಬೇಕೆಂದಾಗ' ಅದನ್ನು ಮಾಡಿಕೊಟ್ಟರು.

ಹೈದರಾಬಾದಿನ ಇವರ ಅಧ್ಯಯನದ ಅವಧಿ ಬಹಳ ಕಾರಣಗಳಿಂದ ಮುಖ್ಯವಾದದ್ದು. ಜಿ.ಪಿ.ರಾಜರತ್ನಂ, ತೀ.ನಂ.ಶ್ರೀ., ಬಿ.ಎಂ.ಶ್ರೀ, ಮಾಸ್ತಿ ಎಂ.ಆರ್.ಶ್ರೀ ಇವರೆಲ್ಲರ ಭಾಷಣ ಕೇಳುವ ಮತ್ತು ಅವರ ಪ್ರಭಾವಕ್ಕೆ

ಒಳಗಾಗುವ ಅವಕಾಶ ಇವರಿಗೆ ದೊರೆಯಿತು. ಪ್ರೊ. ಡಿ.ಕೆ.ಭೀಮಸೇನ ರಾವ್ ಅವರ ಅಚ್ಚುಮೆಚ್ಚಿನ ಶಿಷ್ಯರಾಗಿ, ಮಾಸ್ತಿ ನರಸಿಂಗರಾವ್ ಇವರೆಲ್ಲರಿಗೂ ಸಮೀಪವಾದರು. ಧಾರವಾಡದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಂಡು ಕುವೆಂಪು, ಗೋಕಾಕ್, ಮುಗಳಿ ಅವರ ಕವಿತೆಗಳನ್ನು ಅವರ ಬಾಯಿಂದಲೇ ಕೇಳುವ ಸೌಭಾಗ್ಯ ಇವರದಾಯಿತು.

ಈ ಅವಧಿಯಲ್ಲಿ ಜಿ.ಪಿ.ರಾಜರತ್ನಂ, ಬಿ.ಎಂ.ಶ್ರೀ., ತೀ.ನಂ.ಶ್ರೀ. ಹಾಗೂ ಮಾಸ್ತಿ ಇವರುಗಳ ಅಭಿಮಾನವನ್ನು ಗಳಿಸುವ ಅವಕಾಶ ಕೂಡ ಪ್ರಾಪ್ತವಾಯಿತು. ಸ್ವಾಗತ ಮತ್ತು ವಂದನಾರ್ಪಣೆಗಳಲ್ಲಿ ಇವರು ಪ್ರಕಟಿಸಿದ ಪ್ರತಿಭೆಯಿಂದ. ಒಟ್ಟಾರೆ ಇದು ಸಿದ್ಧಯ್ಯನವರ ಬದುಕಿನ ಉಲ್ಲಾಸಮಯವಾದ ಅವಧಿ ಎಂದೇ ಹೇಳಬೇಕು. ಹೀಗೆ ಸಾಹಿತಿಗಳ ಅಭಿಮಾನಕ್ಕೆ ಪಾತ್ರರಾದ ಹಾಗೆ ಗುರುಗಳ ಪ್ರೀತಿಗೂ ಅವರು ಪಾತ್ರರಾದರು. ವಿಶ್ವವಿದ್ಯಾಲಯದ ಇಂಗ್ಲೀಷ್ ಪತ್ರಿಕೆಗೆ ಬಸವಣ್ಣ ಮತ್ತು ರವೀಂದ್ರರನ್ನು ಕುರಿತು ಲೇಖನಗಳನ್ನು ಬರೆದರು. ಸಾಹಿತ್ಯವನ್ನು ಕುರಿತು ಹೆಚ್ಚಿನ ಅಧ್ಯಯನಕ್ಕೆ ಸಿದ್ಧಯ್ಯನವರು ಮನಸ್ಸು ಮಾಡಿ ಕಾಳಿದಾಸ, ರನ್ನ, ರುದ್ರಭಟ್ಟ, ಮುದ್ದಣ್ಣ, ಜನ್ನ, ಹರಿಹರ, ರಾಘವಾಂಕರನ್ನು ಆಳವಾಗಿ ಅಧ್ಯಯನ ಮಾಡಿದರು. ಕುಮಾರವ್ಯಾಸನ ಕಾವ್ಯದ ಮೋಡಿಗೆ ಸಿಲುಕಿದರು. ಇಷ್ಟಾದರೂ ಪಠ್ಯಗಳ ಅಧ್ಯಯನವನ್ನು ಕಡೆಗಣಿಸಲಿಲ್ಲ ಸಿದ್ಧಯ್ಯನವರು. ಇದು ಇವರು ಗುರಿಸಾಧನೆಯಲ್ಲಿಟ್ಟಿದ್ದ ಶ್ರದ್ಧೆ ಶ್ರಮಗಳಿಗೆ ದ್ಯೋತಕವಾಗಿದೆ. ಬಿ.ಎ. ಪರೀಕ್ಷೆಯಲ್ಲಿ ಮತ್ತೆ ವಿಶ್ವವಿದ್ಯಾಲಯಕ್ಕೆ ಮೊದಲ ಸ್ಥಾನವನ್ನು ಪಡೆದ ಹೆಮ್ಮೆ ಇವರದು. ದುರ್ದೈವವೆಂದರೆ ಎರಡೇ ಎರಡು ಅಂಕಗಳಿಂದ ಪ್ರಥಮ ದರ್ಜೆಯನ್ನು ಕಳೆದುಕೊಂಡರು. ಇದರಿಂದಾಗಿ ಇವರಿಗೆ 'ಸರ್ ಅಕ್ಬರ್ ಹೈದರಿ' ಸುವರ್ಣ ಪದಕವೂ ತಪ್ಪಿತು. ಹುಸೇನ್ ಅಲಿ ಖಾನ್ ಸಾಹೇಬರು ಸಿದ್ಧಯ್ಯನವರ ಶೈಕ್ಷಣಿಕ ಪ್ರಗತಿ ಪ್ರತಿಭೆಗಳನ್ನು ಗುರುತಿಸಿ ವಿಶ್ವವಿದ್ಯಾಲಯಕ್ಕೆ ವಿಶೇಷ ಸಂದರ್ಭವೆಂದು ವಿನಾಯಿತಿ ನೀಡಿ ಬಂಗಾರದ ಪದಕವನ್ನು ಸಿದ್ಧಯ್ಯನವರಿಗೆ ನೀಡಬೇಕೆಂದು ಮಾಡಿದ ಪ್ರಯತ್ನ ಫಲ ನೀಡಲಿಲ್ಲ.



ಸಿದ್ಧಯ್ಯನವರು ಈ ವೇಳೆಗಾಗಲೇ 'ಸಲಾಮ್ ಸಾಬ್' 'ಕನ್ನಡದ ದೀಪವದು ಕುಂದಿಹುದು' ಇಂಥ ಕವಿತೆಗಳಿಂದ ಸಾಕಷ್ಟು ಖ್ಯಾತಿಯನ್ನು ಪಡೆದಿದ್ದರು. ಜೊತೆಗೆ ಒಳ್ಳೆಯ ವಾಗ್ಮಿ ಎನ್ನುವ ಅಭಿಮಾನಕ್ಕೂ ಪಾತ್ರರಾಗಿದ್ದರು. ಗುರುಗಳಾಗಿದ್ದ ಹುಸೇನ್ ಅಲಿಖಾನ್ ಸಿದ್ಧಯ್ಯನವರು ಎಂ.ಎ. ಓದಲಿ ಎಂದು ಅಪೇಕ್ಷಿಪಟ್ಟರು. ಆದರೆ ಇವರ ತಂದೆಯವರ ಆಸೆ ವಕೀಲ ಅಥವಾ ಅಧಿಕಾರಿಯಾಗಲಿ ಎಂದು. ಕೊನೆಗೆ ಕಾನೂನು ಕಾಲೇಜು ಸೇರಿದರು. ಆಶ್ಚರ್ಯದ ಸಂಗತಿಯೆಂದರೆ ಪ್ರಥಮಬಾರಿಗೆ ಸಿದ್ಧಯ್ಯನವರು ಕಾನೂನು ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದರು. ಅಧ್ಯಯನದ ವಿಷಯದಲ್ಲಿ ಜೀವಮಾನದುದ್ದಕ್ಕೂ ಯಾವುದೇ ಅಪಜಯವನ್ನು ಕಾಣದ ಸಿದ್ಧಯ್ಯನವರು ಇಲ್ಲಿ ಮಾತ್ರ ಮೊದಲ ಸಲ ಸೋಲನ್ನಪ್ಪಿದರು. ಇದು ಅವರಲ್ಲಿ ವಿಶೇಷವಾದ ಹುರುಪನ್ನು ಮೂಡಿಸಿತು. ಖಾಸಗಿಯಾಗಿ ಕುಳಿತು ಕಾನೂನು ಪರೀಕ್ಷೆಯಲ್ಲಿ ತೇರ್ಗಡೆಯಾದರು. ಈ ಅವಧಿಯಲ್ಲಿ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸಿದಾಗ, ಉಸ್ಮಾನಿಯಾ ವಿಶ್ವವಿದ್ಯಾಲಯದ ಬಿ.ಎ. ಪರೀಕ್ಷೆಯಲ್ಲಿ ಇಂಗ್ಲೀಷ್‌ನಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದರೂ ಕ್ಷುಲ್ಲಕ ಧಾರ್ಮಿಕ ಭಾವನೆಯೊಂದರ ಕಾರಣಕ್ಕಾಗಿ ಅಧ್ಯಾಪಕ ಹುದ್ದೆ ಇವರಿಗೆ ದೊರಕದಿದ್ದುದು ಒಂದು ದುರ್ದೈವದ ಸಂಗತಿಯೆಂದೇ ಹೇಳಬೇಕು.

## ಪ್ರೊಬೇಷನರ್ ಹುದ್ದೆ

ಇದೇ ಅವಧಿಯಲ್ಲಿ ತಹಶೀಲ್ದಾರರ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಯಿತು. ಸಿದ್ಧಯ್ಯ ಪುರಾಣಿಕರು ಇದಕ್ಕೆ ಅರ್ಜಿಯನ್ನು ಹಾಕಬೇಕೆಂದು ಬಯಸಿದರು. ಪ್ರೊ. ಹುಸೇನ್ ಅಲಿಖಾನ್‌ರವರು ತುಂಬ ಅಭಿಮಾನದಿಂದ ಶಿಫಾರಸ್ಸು ಪತ್ರವೊಂದನ್ನು ಸಿದ್ಧಯ್ಯನವರಿಗೆ ಕೊಟ್ಟರು. ಖಾಜಿ ಸಾಹೇಬರೂ ಶಿಪಾರಸ್ಸು ಪತ್ರವನ್ನು ನೀಡಿದರು. ಅರ್ಜಿ ಹಾಕುವ ಮೊದಲು ಮುಲ್ಕಿ ಪರೀಕ್ಷೆಯ ದೃಢೀಕರಣ ಪತ್ರ ಪಡೆಯುವುದಕ್ಕೆ ಇವರು ಪಟ್ಟಪಾಡು, ಅಧಿಕಾರಿಗಳಾದ ಅಬ್ದುಲ್ ಸತ್ತಾರ್ ಸಾಹೇಬರು ತೋರಿಸಿದ ಔದಾರ್ಯ; ಅರ್ಜಿಯನ್ನು ಸ್ವೀಕರಿಸುವ ಮೌಲ್ವಿಯ ಔದಾರ್ಯ

ಇವುಗಳಿಂದಾಗಿ ಅನಾಯಾಸವಾಗಿ ಹುದ್ದೆಗೆ ಅರ್ಜಿಯನ್ನು ಸಲ್ಲಿಸಿದರು. ಸಂದರ್ಶನಕ್ಕೆ ಕರೆಯೂ ಬಂದಿತು. ಸಂದರ್ಶನದ ಅವಧಿಯಲ್ಲಿ ಸಿದ್ಧಯ್ಯನವರ ನೆರವಿಗೆ ಬಂದವುಗಳು ಮುಖ್ಯವಾಗಿ ಮೂರು ಅಂಶಗಳು. ಒಂದು ಅವರ ಪ್ರತಿಭೆ; ಎರಡನೆಯದು ಸಂದರ್ಶನ ಸಮಿತಿಯ ಅಧ್ಯಕ್ಷರಾದ ಗ್ರಿಗ್ಸನ್ನರಿಗೆ ಹುಸೇನ್ ಅಲಿಖಾನ್‌ರವರು ಬರೆದಿದ್ದ ಅದ್ಭುತವಾದ ಶಿಫಾರಸ್ಸು ಪತ್ರ. ಮೂರನೆಯದು ಖಾಯಿಲೆ ಹಾಗೂ ಆಲಮಟ್ಟಿ ಆಶ್ರಮಕ್ಕೆ ಹೋದ ಕಾರಣವಾಗಿ ಎರಡು ಶೈಕ್ಷಣಿಕ ವರ್ಷಗಳನ್ನು ಕಳೆದುಕೊಂಡ ಕಾರಣದಿಂದ ಈ ಹುದ್ದೆಗೆ ಇದೇ ಕೊನೆಯ ಅವಕಾಶವಾಗಿಬಿಟ್ಟಿದ್ದು. ಅಂದರೆ ೨೪ ವರ್ಷಗಳು ಆಗಿದ್ದ ಸಿದ್ಧಯ್ಯನವರು ಈ ಹುದ್ದೆಗೆ ಮತ್ತೆ ಅರ್ಜಿ ಹಾಕಲು ಅರ್ಹರಾಗುತ್ತಿರಲಿಲ್ಲ. ವಯಸ್ಸನ್ನು ಕುರಿತು ಸಂದರ್ಶನ ಸಮಿತಿ ಅಧ್ಯಕ್ಷರು ಕೇಳಿದ ಪ್ರಶ್ನೆ ಹಾಗೂ ಸಿದ್ಧಯ್ಯನವರು ಸಂದರ್ಶನದಲ್ಲಿ ತೋರಿಸಿದ ಪ್ರತಿಭೆ ಜೊತೆಜೊತೆಗೆ ಅವರ ಕೈಯಲ್ಲಿದ್ದ ಹುಸೇನ್ ಅಲಿಖಾನ್ ಅವರ ಶಿಫಾರಸ್ಸು ಪತ್ರ ಇವುಗಳಿಂದಾಗಿ ಸಿದ್ಧಯ್ಯನವರು ೧೯೪೩ರಲ್ಲಿ ತಹಶೀಲ್ದಾರ ಹುದ್ದೆಗೆ ಆಯ್ಕೆಯಾದರು. ಸಿದ್ಧಯ್ಯನವರು ಈ ಬಗ್ಗೆ ನೀಡಿರುವ ವಿವರಗಳು ಅವರ ವ್ಯಕ್ತಿತ್ವದ ನಮ್ರತೆಗೆ ಹಾಗೂ ಉಪಕಾರ ಮಾಡಿದ ಹಿರಿಯರನ್ನು ಕುರಿತ ಕೃತಜ್ಞತಾ ಮನೋಭಾವಕ್ಕೆ ಉದಾಹರಣೆಯಾಗಿದೆ.

## ತರಬೇತಿ

ಹುದ್ದೆಯನ್ನು ನಿರ್ವಹಿಸಲು ಒಂದು ತಿಂಗಳ ತರಬೇತಿಯನ್ನು ಇವರು ಪಡೆಯಬೇಕಾಗಿತ್ತು. ಅದಕ್ಕಾಗಿ ರೇವನಿಗೆ ಹೊರಟಾಗ ಇವರ ಬಳಿಯಲ್ಲಿದ್ದದ್ದು ಕೇವಲ ೧೦ ರೂಪಾಯಿ ಮಾತ್ರ. ರೈಲು ವಿಕಾರಾಬಾದ್ ನಿಲ್ದಾಣದಲ್ಲಿ ನಿಂತು ತನ್ನ ಜೊತೆಯವರು ಕಾಫಿ ತರಿಸಿದಾಗ ತಾವು ಬಿಸ್ಕತ್ತನ್ನು ತರಿಸಿ ತಮ್ಮ ೧೦ ರೂಪಾಯಿ ನೋಟನ್ನು ಮಾಣಿಯ ಕೈಗೆ ಇಟ್ಟರು. ಇದ್ದಕ್ಕಿದ್ದಂತೆ ರೈಲು ಹೊರಟೇ ಬಿಟ್ಟಿತು. ಓಡಿ ಬಂದು ಮಾಣಿ ಚಿಲ್ಲರೆ ಹಣವನ್ನು ಕೊಟ್ಟ. ವೇಗವಾಗಿ ಚಲಿಸುತ್ತಿದ್ದ ರೈಲಿನಲ್ಲಿ ಮುಷ್ಟಿ ತೆರೆದು ನೋಡಿದಾಗ ಸಿದ್ಧಯ್ಯನವರಿಗೆ ಒಂದು ಆಶ್ಚರ್ಯ ಕಾದಿತ್ತು.೧೦



ರೂಪಾಯಿಗೆ ಬದಲು ಆತ ೧೦೦ ರೂಪಾಯಿಗಳಿಗೆ ಚಿಲ್ಲರೆಯನ್ನು ಅಂದರೆ ೯೯ ರೂಪಾಯಿಗಳನ್ನು ನೀಡಿದ್ದ. ಇದನ್ನು ಹಿಂತಿರುಗಿಸಬೇಕೆಂದು ಸಿದ್ಧಯ್ಯನವರು ಮತ್ತೆ ವಿಕಾರಾಬಾದಿಗೆ ಹೋದದ್ದು ಉಂಟು. ಆದರೆ ಆ ಮಾಣಿ ಯಾರೆಂಬುದು ತಿಳಿಯದೆ ಆ ಬಡ ಮಾಣಿಗೆ ಆದ ತೊಂದರೆಯ ಬಗೆಗೆ ಬದುಕಿನುದ್ದಕ್ಕೂ ಸಿದ್ಧಯ್ಯ ಪರಿತಪಿಸುತ್ತಿದ್ದುದು ಉಂಟು.

## ವಿವಿಧ ಹುದ್ದೆಗಳಲ್ಲಿ

೩೦ ದಿನಗಳ ತರಬೇತಿ ಮುಗಿಸಿ ಮತ್ತೆ ೨ ತಿಂಗಳ ಕಾರ್ಯಕ್ಷೇತ್ರದ ಅನುಭವ ಪಡೆಯಲು ಸಿದ್ಧರಾದ ಸಿದ್ಧಯ್ಯ ಪುರಾಣಿಕರು ತಂದೆ-ತಾಯಿಗಳ ಒತ್ತಾಯಕ್ಕೆ ಮಣಿದು ಮದುವೆಯಾಗಬೇಕಾಯಿತು. ೫-೧೨-೧೯೪೨ರಲ್ಲಿ ಗಿರಿಜಾದೇವಿಯವರೊಡನೆ ಇವರ ವಿವಾಹವಾಯಿತು.೧೯೪೩ರಲ್ಲಿ ನೌಕರಿಗೆ ಸೇರಿದ ಸಿದ್ಧಯ್ಯನವರು ೨-೮-೧೯೪೪ರಲ್ಲಿ ನಾಂದೇಡದ Assistant Collector ಅನಂತರ ೨೨-೮-೧೯೪೫ರಿಂದ ಗುಲ್ಬರ್ಗಾದ Land Records ವಿಭಾಗದ Assistant Collector ಆಗಿ ನಂತರ ಜಾಹೀರಾತ್ ವಿಭಾಗದ Assistant Commisioner ಆಗಿ ಕಾರ್ಯನಿರ್ವಹಿಸಿದರು. ೨೫-೧-೫೧ ರಲ್ಲಿ Assistant Revenue Secretary ಆಗಿ ವರ್ಗವಾದರು. ೭-೨-೧೯೫೨ ರಲ್ಲಿ ಸ್ಥಾನಿಕ ಸ್ವರಾಜ್ಯ ಆಡಳಿತ ಸಚಿವರ ಕಾರ್ಯದರ್ಶಿ, ೧೯೫೩ರಲ್ಲಿ ಕೃಷಿಯೋಜನೆ ಹಾಗೂ ಪೂರೈಕೆ ಇಲಾಖೆ ಸಚಿವರ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು. ೧೯೫೫ರಲ್ಲಿ ತೌಂಡೂರಿನಲ್ಲಿ Deputy Collector ಆಗಿ ನಿಯೋಜಿತರಾದರು. ೧೯೫೭ರಲ್ಲಿ ಯಾದಗಿರಿಗೆ ವರ್ಗವಾದರು. ಅನಂತರ ರಾಜ್ಯ ಪುನರ್ವಿಂಗಡಣೆಯಾದ ಮೇಲೆ ಕರ್ನಾಟಕ ಸೇವೆಗೆ ವರ್ಗಾಯಿಸಿಕೊಂಡು ೧೯೫೮ರಲ್ಲಿ ಭಾರತೀಯ ನಾಗರಿಕ ಸೇವೆಗೆ ಸೇರ್ಪಡೆಯಾದರು. ೧೯೬೦ರಲ್ಲಿ ವಿದ್ಯಾ ಇಲಾಖೆಯ Deputy Secretary ಯಾದರು.೧೯೬೨ರಲ್ಲಿ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು. ೧೯೬೪ರಲ್ಲಿ ಅರ್ಥಶಾಖೆಯ Deputy Secretary ಮತ್ತು ಸ್ವರ್ಣ ನಿಯಂತ್ರಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ೧೯೬೫ರಲ್ಲಿ ನಿಜಲಿಂಗಪ್ಪನವರ ಆದೇಶದ ಮೇಲೆ

ಮಡಿಕೇರಿ ಜಿಲ್ಲೆಯ Deputy Commisioner ಆಗಿ ಸೇವೆ ಸಲ್ಲಿಸಿದರು. ಅಲ್ಲಿಂದ ಮುಂದೆ ಸಾರಿಗೆ Commisioner ಬೆಳಗಾವಿ ಜಿಲ್ಲೆಯ Deputy Commisioner ಮತ್ತೆ Labour Commisioner ಆಗಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದರು.

## ಕನ್ನಡದ ಸೆಳೆತ

ಸಿದ್ಧಯ್ಯ ಪುರಾಣಿಕರು ಹೈದರಾಬಾದ್ ಸೇವೆಯಲ್ಲಿದ್ದಾಗ ಅದರಲ್ಲಿಯೂ ನಾಂದೇಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಕನ್ನಡ ಮತ್ತು ಕನ್ನಡಿಗರ ಸಮಸ್ಯೆಗಳನ್ನು ತುಂಬ ಆಳವಾಗಿ ಅರಿಯುವ ಅವಕಾಶವಾಯಿತು. ಅಲ್ಲಿ ಅನೇಕ ಕಡೆ ಕನ್ನಡದ ಶಾಸನಗಳು ಇರುವುದನ್ನು ಗಮನಿಸಿದರು. ದೇಗಲೂರು ತಾಲ್ಲೂಕಿನಲ್ಲಂತೂ ಶುದ್ಧ ಕನ್ನಡದ ಹಳ್ಳಿಗಳಿದ್ದವು. ಆ ತಾಲ್ಲೂಕಿನ ಹೆಸರು ಅಚ್ಚಗನ್ನಡದ್ದು. ಇನ್ನೂ ಆಶ್ಚರ್ಯದ ಸಂಗತಿಯೆಂದರೆ ಅಚ್ಚಗನ್ನಡದಲ್ಲಿ ಮಾತನಾಡುವ ಮಹಮದೀಯ ಪಟವಾರಿಗಳನ್ನು ಇವರು ಕಂಡರು. ಈ ಎಲ್ಲ ಕಾರಣಗಳಿಂದ ಕನ್ನಡದ ಸಮಸ್ಯೆಗಳ ಕಡೆಗೆ ಅವರ ಗಮನ ತಮ್ಮ ಕರ್ತವ್ಯದ ಜೊತೆ ಜೊತೆಗೆ ಆಕರ್ಷಿತವಾಯಿತು. ಈ ಸಂದರ್ಭದಲ್ಲಿ ಬಸವಕಲ್ಯಾಣವು ಮರಾಠವಾಡಾ ಉಸ್ಮಾನಾಬಾದಿಗೆ ಹೋಗುವ ಸ್ಥಿತಿ ಇದ್ದದ್ದು ಸಿದ್ಧಯ್ಯನವರ ಮನಸ್ಸನ್ನು ನೋಯಿಸಿತು. ಅವರು ಬಸವಕಲ್ಯಾಣದ ಪ್ರಮುಖರಿಗೆ ಪತ್ರವನ್ನು ಬರೆದು ಕರೆಸಿಕೊಂಡು ಅವರಿಂದಲೇ ಮನವಿಯನ್ನು ಬರೆಸಿ ಬೀದರ್ ಜಿಲ್ಲೆ ಕರ್ನಾಟಕದಲ್ಲಿ ಉಳಿಯುವಂತಾಗಲು ನೆರವು ನೀಡಿದರು. ಅಷ್ಟೇ ಅಲ್ಲ ಹಿರಿಯರಾದ ಮಾನ್ವಿ ನರಸಿಂಗರಾವ್, ಮಾನ್ವಿ ಭೀಮಸೇನರಾವ್ ಮುಂತಾದವರ ಜೊತೆಗೆ ಹೈದರಾಬಾದ್ ಕನ್ನಡ ಸಾಹಿತ್ಯ ಪರಿಷತ್ತನ್ನು ಕಟ್ಟಿ ಕನ್ನಡದ ಕೆಲಸಕ್ಕೆ ಕಂಕಣಬದ್ಧರಾಗಿ ನಿಂತರು. ಬೀದರ್‌ನಲ್ಲಿ ನಡೆದ ನಾಡಹಬ್ಬಕ್ಕೆ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯ ಮುಂತಾದವರನ್ನು ಕರೆಸಿ ಅಲ್ಲಿ ಕನ್ನಡಿಗರ ಅಭಿಮಾನ ಇಮ್ಮಡಿಗೊಳ್ಳುವುದಕ್ಕೆ ಕಾರಣವಾದರು. ಈ ಅವಧಿಯಲ್ಲಿ ಬೀದರ್ ರಾಯಚೂರು ಹಾಗೂ ಗುಲ್ಬರ್ಗ ಜಿಲ್ಲೆಗಳಲ್ಲಿ ಕನ್ನಡದ ವಾತಾವರಣ ಉತ್ತಮಗೊಳ್ಳುವುದಕ್ಕೆ ಇವರು ಮಾಡಿದ



ಕಾರ್ಯಗಳು ಸ್ಮರಣೀಯವಾದವು. ಗುಲ್ಬರ್ಗಾದಲ್ಲಿ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲು ಪೂರ್ಣವಾಗಿ ಶ್ರಮಿಸಿದರು. ಅದಕ್ಕಿಂತ ಮುಖ್ಯವಾದುದು ಅ.ನ.ಕೃಷ್ಣರಾಯರು, ಎ.ಎಂ.ಮೂರ್ತಿಯವರು, ಎಸ್.ಕೆ.ಕರೀಂಖಾನ್‌ರವರು, ಮಾಸ್ತಿ ವೆಂಕಟೇಶ್ ಅಯ್ಯಂಗಾರರು, ಚೋಳದರಾಶಿ ದೊಡ್ಡನಗೌಡರು, ವಿ.ಸೀತಾರಾಮಯ್ಯನವರು ಮೊದಲಾದ ಸಾಹಿತ್ಯ ದಿಗ್ಗಜಗಳು ಬಂದು ಭಾಷಣ ಮಾಡುವಂತೆ ಯೋಜಿಸಿ ಈ ಪ್ರದೇಶದಲ್ಲಿ ಕನ್ನಡದ ಧ್ವಜವನ್ನು ಎತ್ತಿ ಹಿಡಿಯುವುದರಲ್ಲಿ ಸಿದ್ಧಯ್ಯನವರ ಪಾತ್ರ ಹಿರಿದಾದದ್ದು.

## ವೃತ್ತಿ-ಪ್ರವೃತ್ತಿ

ವೃತ್ತಿಯ ಜೊತೆಗೆ ಸಹಜ ಪ್ರವೃತ್ತಿಯಾಗಿ ಬಂದಿದ್ದ ಸಾಹಿತ್ಯಾಭಿರುಚಿ ಸಿದ್ಧಯ್ಯನವರನ್ನು ಜನಪ್ರಿಯ ಅಧಿಕಾರಿಯನ್ನಾಗಿ ಮಾಡಲು ನೆರವಾದಂತೆಯೇ ಆ ವಲಯದಲ್ಲಿ ಕನ್ನಡ ಜಾಗೃತಿಗೂ ಕಾರಣವಾಯಿತು. ಆದುದರಿಂದಲೇ ಸಿದ್ಧಯ್ಯನವರು ತಹಶೀಲ್ದಾರರಾಗಿ ಆಯ್ಕೆಯಾದಾಗ ಮಾಸ್ತಿಯವರು ಇದು ಕನ್ನಡಕ್ಕಾದ ನಷ್ಟ ಎಂದು ಹೇಳಿದ್ದು. ಆಗಲೇ ಸಿದ್ಧಯ್ಯನವರು ನಾನು ನಿಮ್ಮಷ್ಟಲ್ಲದಿದ್ದರೂ ಕೈಲಾಗುವಷ್ಟು ಖಂಡಿತ ಮಾಡುತ್ತೇನೆ ಎಂದು ಮಾತುಕೊಟ್ಟಿದ್ದರು. ಸಿದ್ಧಯ್ಯನವರು ಜೀವನದುದ್ದಕ್ಕೂ ಈ ಮಾತನ್ನು ಮರೆಯಲಿಲ್ಲ. ಅಷ್ಟೇ ಅಲ್ಲ ಕನ್ನಡದ ಕೆಲಸಗಳನ್ನು ಎರಡು ಹಂತಗಳಲ್ಲಿ ಹೆಮ್ಮೆ ಪಡುವಂತೆ ಮಾಡುತ್ತಲೇ ಬಂದರು.

೧. ಕನ್ನಡದ ಹಾಗೂ ಕನ್ನಡಿಗರ ಸಮಸ್ಯೆಗಳಿಗೆ ಸ್ಪಂದಿಸಿ ಕನ್ನಡದ ಹಿತಕ್ಕಾಗಿ ಹಾಗೂ ಕನ್ನಡಿಗರ ಹಿತಕ್ಕಾಗಿ ಹೋರಾಡುವುದು.

೨. ಸೃಜನಶೀಲ ವ್ಯಕ್ತಿಯಾಗಿ ಸಾಹಿತ್ಯ ಸೃಷ್ಟಿಮಾಡುವುದು.

ಈ ಎರಡಕ್ಕೂ ಪೂರಕವಾಗಿ ಅವರ ವಾಗ್ಮಿತೆ ಕನ್ನಡಿಗರ ಹಿತವನ್ನು ಕಾಪಾಡುವಲ್ಲಿ ಸದಾ ಕ್ರಿಯಾಶೀಲವಾಗಿಯೇ ಇದ್ದದ್ದು ಮುಖ್ಯವಾದ ವಿಷಯ.

## ವೃತ್ತಿಯ ಸಾಫಲ್ಯ

ಸಿದ್ಧಯ್ಯನವರು ತಮ್ಮ ವೃತ್ತಿಯ ಅವಧಿಯಲ್ಲಿ ಮಾಡಿದ ಕಾರ್ಯಗಳಲ್ಲಿ ಪ್ರಮುಖವಾದವು, ಕೊಡಗು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಅವರು ಮಾಡಿದ ಜನಪರವಾದ ಕಾರ್ಯಕ್ರಮಗಳು. ಮಡಿಕೇರಿಯಲ್ಲಿ ಅವರು ಸಲ್ಲಿಸಿದ ಸೇವೆ ಅವರನ್ನು ತುಂಬಾ ಸ್ಮರಣೀಯವನ್ನಾಗಿ ಮಾಡಿತು. Indian Express ಪತ್ರಿಕೆಯಲ್ಲಿ ಪ್ರಕಟವಾದ Profice In Efficiency ಎಂಬ ಲೇಖನ ಸಿದ್ಧಯ್ಯನವರ ಕರ್ತವ್ಯ ಕ್ಷಮತೆಯನ್ನು ಕೊಂಡಾಡಿ ಬರೆದ ಲೇಖನವಾಗಿದೆ. ಟಿ.ಎಂ.ಎ.ಪೈಯವರು ದಕ್ಷಿಣ ಕನ್ನಡ ಜಿಲ್ಲೆಯ ಸಭೆಯೊಂದರಲ್ಲಿ ಇದನ್ನು ಉಲ್ಲೇಖಿಸಿ ಸಿದ್ಧಯ್ಯನವರ ಸೇವಾದಕ್ಷತೆಯನ್ನು ಪ್ರಶಂಸಿಸಿದ್ದಾರೆ. ಬೆಳಗಾಂ ಸೇವೆಯಲ್ಲಿ ಇವರನ್ನು ಮುಖ್ಯಮಂತ್ರಿಗಳೆ ಪ್ರಶಂಸಿಸಿ ಬರೆದದ್ದು ಉಂಟು. ಸಾರಿಗೆ Commisioner ಆಗಿ ಇವರು ಮಾಡಿದ ಸಾಧನೆಯ ಬಗ್ಗೆ ಹಿಂದೂ ಪತ್ರಿಕೆಯಲ್ಲಿ ವರದನ್ ಎಂಬುವರು Blazing a new trail in individual Relations ಎಂಬ ಲೇಖನ ಬರೆದದ್ದು ಉಂಟು. ಡಾ|| ಸಿದ್ಧಯ್ಯ ಪುರಾಣಿಕರು Deputy Collector ಆಗೇ ಆಗಲಿ, Deputy Secretary ಆಗಿ ಆಗಲಿ, Commisionerಆಗಿ ಆಗಲಿ ಕಾರ್ಯನಿರ್ವಹಿಸುವಾಗ ದಕ್ಷತೆಗೆ ಹೆಸರಾದವರು. ವೃತ್ತಿಯ ವಿಷಯದಲ್ಲಿ ಸಿದ್ಧಯ್ಯನವರು ಕೆಲವು ತೊಡಕುಗಳನ್ನು ಎದುರಿಸಬೇಕಾಗಿ ಬಂದದ್ದು ನಿಜ. ಹೈದರಾಬಾದ್ ಪ್ರಾಂತ್ಯದಲ್ಲಿ ಉದ್ಯೋಗ ಮಾಡುತ್ತಿದ್ದಾಗ ಎರಡು ಬಗೆಯ ತೊಡಕುಗಳನ್ನು ಅವರು ಎದುರಿಸಿದ್ದುಂಟು. ಮೊದಲನೆಯದು ಸ್ವಾತಂತ್ರ್ಯಾನಂತರ ಹೈದರಾಬಾದಿನಲ್ಲಿ ರಜಾಕಾರರ ಹಾವಳಿಯಾದಾಗ ಸಿದ್ಧಯ್ಯನವರು ನೌಕರಿಯನ್ನು ಬಿಡುವಂತಹ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದದ್ದು; ಅಧಿಕಾರಿಯಾಗಿದ್ದರೂ ಸಿದ್ಧಯ್ಯನವರು ರಜಾಕಾರರ ಹಾವಳಿಯಿಂದ ಪ್ರಜೆಗಳನ್ನು ರಕ್ಷಿಸಲು ಸಾಧ್ಯವಿಲ್ಲದಂತಹ ಅಸಹಾಯಕ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದದ್ದು. ಈ ಬಗ್ಗೆ ರಜಾಕಾರರ ಹಾವಳಿ ಮುಗಿದ ಮೇಲೆ ಸಿದ್ಧಯ್ಯ ಪುರಾಣಿಕರೆ ತಮ್ಮ ಆ ಆಡಳಿತಾವಧಿಯ ಅಪಮಾನಕಾರಿಯಾದ ಬಿಕ್ಕಟ್ಟುಗಳ ಬಗ್ಗೆ ವಿಫುಲವಾಗಿ ನೊಂದು ಕೊಳ್ಳುತ್ತಾರೆ.



## ಹೈದರಾಬಾದಿನಿಂದ ಕರ್ನಾಟಕದ ಸೇವೆಗೆ

ಎರಡನೆಯದಾಗಿ ಹೈದರಾಬಾದ್ ಭಾರತದ ಒಕ್ಕೂಟಕ್ಕೆ ಸೇರುತ್ತಿದ್ದಂತೆಯೇ ಇವರ ಮಿತ್ರರೆಲ್ಲಾ ಹೈದರಾಬಾದಿಗೆ ಹೋಗಿ ತಮ ತಮಗೆ ಅನುಕೂಲಕರವಾದ ಹುದ್ದೆಯನ್ನು ಪಡೆದುಕೊಂಡಿದ್ದು. ಇದರಿಂದಾಗಿ ಸಿದ್ಧಯ್ಯನವರು ಹೈದರಾಬಾದ್ ಸೇವೆಯ ಜ್ಯೇಷ್ಠತೆಯಲ್ಲಿ ಕಷ್ಟಕ್ಕೆ ಗುರಿಯಾಗಲೇಬೇಕಾಯಿತು. ಇದರಿಂದ ಸಿದ್ಧಯ್ಯ ಧೃತಿಗೆಡಲಿಲ್ಲ. ರಾಜ್ಯ ಪುನರ್ ವಿಂಗಡಣೆ ಆದ ಮೇಲೆ ಸಿದ್ಧಯ್ಯ ಕರ್ನಾಟಕದ ಸೇವೆಯನ್ನು ಆಯ್ಕೆ ಮಾಡಿಕೊಂಡರು.ಇದರಿಂದಾಗಿಯೂ ಸಿದ್ಧಯ್ಯನವರ ಸೇವಾ ಜ್ಯೇಷ್ಠತೆಗೆ ಸ್ವಲ್ಪ ತೊಡಕಾದದ್ದು ಉಂಟು. ಅವರು ಇದಾವುದನ್ನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ.

ಸಿದ್ಧಯ್ಯನವರು ಕರ್ನಾಟಕದ ಸೇವೆಗೆ ಸೇರಿಕೊಂಡದ್ದು ಅವರ ಕನ್ನಡವನ್ನು ಕುರಿತ ಅಭಿಮಾನಕ್ಕೆ ನಿದರ್ಶನವಾಗಿದೆ. ಅಷ್ಟೇ ಅಲ್ಲ ಶಿಕ್ಷಣ ಇಲಾಖೆಯಲ್ಲಿ Deputy Secretary ಯಾಗಿದ್ದಾಗ ಕನ್ನಡಪರ ಕಾರ್ಯಗಳಿಗೆ ನೆರವಾಗುವ ಯಾವ ಅವಕಾಶವನ್ನೂ ಅವರು ಕಳೆದುಕೊಳ್ಳಲಿಲ್ಲ. ಉದಾಹರಣೆಗೆ ಅವರು ಶಿಕ್ಷಣ ಇಲಾಖೆಯಲ್ಲಿದ್ದಾಗ ಕನ್ನಡದ ಎರಡು ಹೆಮ್ಮೆಯ ಯೋಜನೆಗಳಿಗೆ ಕಾರಣವಾದದ್ದು ಐತಿಹಾಸಿಕವಾಗಿದೆ. ಅವೆಂದರೆ ಮೈಸೂರು ವಿಶ್ವವಿದ್ಯಾಲಯದ ವಿಶ್ವಕೋಶ ಯೋಜನೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಬೃಹತ್ ಕನ್ನಡ–ಕನ್ನಡ ನಿಘಂಟು ಯೋಜನೆ. ಈ ಯೋಜನೆಗಳು ಕಾರ್ಯರೂಪಕ್ಕೆ ಬರಲು' ಸಿದ್ಧಯ್ಯನವರು ಕಾರಣವಾದಂತೆಯೇ ರವೀಂದ್ರ ಕಲಾಕ್ಷೇತ್ರ ರೂಪಗೊಳ್ಳುವುದರಲ್ಲಿಯೂ ಇವರ ಪಾತ್ರವಿದೆ. ಸರ್ಕಾರ ಆಗ ಸುಲಭ ಬೆಲೆಯಲ್ಲಿ ಪ್ರಕಟಿಸಿದ ವಚನಸಾಹಿತ್ಯ ಸಂಗ್ರಹ, ಹರಿಶ್ಚಂದ್ರಕಾವ್ಯ, ಸರ್ವಜ್ಞನ ವಚನಗಳು, ಜೈಮಿನಿಭಾರತ ಮೊದಲಾದ ಗ್ರಂಥಗಳ ಪ್ರಕಟನೆಯ ಹಿಂದೆಯೂ ಇವರ ಕೈ ಇರುವುದು ಗಮನಾರ್ಹವಾದುದು. ಕರ್ನಾಟಕ ಏಕೀಕರಣವಾದ ಮೇಲೆ ಹೈದರಾಬಾದ್ ಕನ್ನಡ ಸಾಹಿತ್ಯ ಪರಿಷತ್ತನ್ನು ವಿಸರ್ಜಿಸಿ ಅದರಲ್ಲಿ ಉಳಿದಿದ್ದ ಮೊಬಲಗನ್ನು ಮಾಸ್ತಿ ನರಸಿಂಹರಾಯರ ಹೆಸರಿನಲ್ಲೇ ದತ್ತಿಯಾಗಿ ಇಟ್ಟರು.

ಈ ಎಲ್ಲವನ್ನೂ ಗಮನಿಸಿದರೆ ಕನ್ನಡದ ವಿಷಯದಲ್ಲಿ ಸಿದ್ಧಯ್ಯನವರಿಗಿದ್ದ ಅಕ್ಕರೆ ಸುಸ್ಪಷ್ಟವಾಗುತ್ತದೆ.

## ವೃತ್ತಿಯಲ್ಲಿದ್ದಾಗಿನ ಕೆಲವು ಘಟನೆಗಳು

ವೃತ್ತಿಯಲ್ಲಿ ಸಿದ್ಧಯ್ಯನವರು ಹಲವಾರು ಇಕ್ಕಟ್ಟುಗಳಿಗೆ ಗುರಿಯಾದದ್ದುಂಟು. ಕೆಲವೊಮ್ಮೆ ಸೇವಾಜ್ಯೇಷ್ಠತೆಯನ್ನು ಕಳೆದುಕೊಂಡಿದ್ದೂ ಉಂಟು. ಆದರೆ ಅದಾವುದನ್ನು ಗಮನಕ್ಕೆ ತಂದುಕೊಳ್ಳದ ಸಮಚಿತ್ತ ಸಿದ್ಧಯ್ಯನವರದು. ಆಡಳಿತದ ಅವಧಿಯಲ್ಲಿ ಅವರು ಪಡೆದ ಅನುಭವ ಸ್ಮರಣೀಯವಾದದ್ದು.

ವಿನೋಬಾರವರ ಭೂದಾನ ಚಳುವಳಿಯ ಪ್ರಸಂಗ ಅತ್ಯಂತ ಮಹತ್ವದ ಘಟನೆ ಎಂದು ಅವರೇ ಹೇಳಿಕೊಂಡಿದ್ದಾರೆ. ಆತ್ಮಚರಿತ್ರೆಯ ಪುಟ ೨೫೪ ರಿಂದ ೨೫೯ರವರೆಗೆ ಇವುಗಳ ವಿವರವಿದೆ. ಆರಂಭದಲ್ಲಿ ಅವರ ಯೋಜನೆಗೆ ಆಕರ್ಷಿತರಾದ ಜನಸಮುದಾಯವನ್ನು ಅದರಲ್ಲೂ ವಿನೋಬಾ ಅವರ ಸುತ್ತ ಇದ್ದ ಜನರ ಡೋಂಗಿತನವನ್ನು ವಿಡಂಬಿಸಿದ್ದಾರೆ. ಕೊನೆಗೆ ಆ ಯೋಜನೆಯ ಬಗೆಗೆ ನಿರ್ಭೀತರಾಗಿ ವಿನೋಬಾ ಅವರನ್ನೇ ಪ್ರಶ್ನಿಸುತ್ತಾರೆ. ''ಬಾಬೂಜಿ, ಭೂಮಿ ಸಂಗ್ರಹಿಸುವುದು ಕಠಿಣ. ಹಂಚುವುದು ಕಠಿಣವಲ್ಲ. ಹೀಗಿದ್ದೂ ಭೂದಾನವಾಗಿ ಬಂದಿರುವ ೪೪ಲಕ್ಷ ಎಕರೆಗಳನ್ನು ಕೇವಲ ೪ ಲಕ್ಷ ಎಕೆರಗಳು ಮಾತ್ರ ಏಕೆ ಹಂಚಿಕೆಗೊಂಡು ಉಳಿದವು ಯಾಕೆ ಆಗಿಲ್ಲ?'' ಅವರ ಪ್ರಶ್ನೆಗೆ ವಿನೊಬಾ ಅವರ ಉತ್ತರ: ''ಅದಾವ ಘನ ವಿಷಯ? ಒಂದೇ ದಿನದಲ್ಲಿ ಹಂಚಿಬಿಡುವೆ'' ಆಡಳಿತಗಾರರಾದ ಸಿದ್ಧಯ್ಯ ಮತ್ತೆ ಪ್ರಶ್ನಿಸಿದ್ದು ಹೀಗೆ: ಅದು ಹೇಗೆ ಸಾಧ್ಯ ಬಾಬಾಜಿ?'' ಸಹಜವಾಗಿಯೇ ಸಂಶಯಸ್ವರದಲ್ಲಿದ್ದ ಪ್ರಶ್ನೆಗೆ ''ದೇಶದಾದ್ಯಂತ ಭೂಮಿ ಹಂಚಲೆಂದೇ ಒಂದು ದಿನ ಗೊತ್ತು ಮಾಡಿಬಿಡುವೆನು. ಆ ದಿನ ಎಲ್ಲ ಭೂಮಿಯನ್ನು

★ ವಿನೋಬಾ ಅವರನ್ನು ಕಂಡರೆ ಸಿದಯ್ಯ ಪುರಾಣಿಕರಿಗೆ ಅಪೂರ್ವವಾದ ಗೌರವ. ಮೊದಲು ಕಂಡಾಗ ಅವರೇ ಹೇಳುವ ಮಾತುಗಳನ್ನು ಗಮನಿಸಿ: ''ಅದೇ ಅಲ್ಲೊಂದು ಇಲ್ಲೊಂದು ನರೆಗೂದಲು ಮೂಡಿದ್ದ ಜ್ಞಾನಯೋಗಿಯನ್ನು ನೋಡಿ ನವಿರಾದಂತೆ.'' ಸಿದ್ಧಯ್ಯನವರು ಭೂದಾನ ಚಳುವಳಿಯ ಬಗ್ಗೆ ವಿಮರ್ಶೆ ಮಾಡುತ್ತಾರೆಯೇ ಹೊರತು ವಿನೋಬಾ ಅವರ ವ್ಯಕ್ತಿತ್ವದ ಬಗೆಗೆ ಅಲ್ಲ.



ಹಂಚಿಬಿಡುವೆನು'' ಎಂದು ಸಾಂತ್ವನ ನೀಡಿದವರು. ''ಒಂದೇ ದಿನದಲ್ಲಿ ಎಲ್ಲ ಕಡೆ ತಕ್ಕವರಿಗೆ ಹೇಗೆ ಹಂಚುವುದು?'' ಎಂದು ಮತ್ತೆ ಕೇಳಿದ ಪ್ರಶ್ನೆಗೆ ''ಒಂದೇ ದಿನ ದಸರೆ ದೀಪಾವಳಿಗಳನ್ನು ಆಚರಿಸುವುದಿಲ್ಲವೇ?'' ಎಂದು ಶಂಕಾ ಸಮಾಧಾನ ಮಾಡಲು ಯತ್ನಿಸಿದರವರು. ಸಿದ್ಧಯ್ಯನವರಿಗೆ ಸಮಾಧಾನವಾಗದಿದ್ದರೂ ದೊಡ್ಡವರೊಡನೆ ಬಹಳ ವಾದಿಸುವುದು ವಿಹಿತವಲ್ಲವೆಂದು ಸುಮ್ಮನಾದರು. ಅಷ್ಟೇ ಅಲ್ಲ, ಆ ಬಗ್ಗೆ ಅವರದೇ ವ್ಯಾಖ್ಯಾನ ಗಮನಿಸಿ: ಬಹಳ ಕ್ರಾಂತಿಕಾರಕ ಕ್ರಮವೊಂದು ಅವಾಂಛನೀಯ ಜನಗಳ ಪ್ರವೇಶ, ಅನಾವಶ್ಯಕ ಅವಸರ, ಖೊಟ್ಟಿ ಭೂದಾನ ಪತ್ರಗಳು, ಆಡಳಿತ ಯಂತ್ರದ ಅನುಚಿತ ಉಪಯೋಗಗಳಿಂದ ಸಫಲವಾಗದೆ ಹೋಗಬಹುದಾದ ಸಂಭವವನ್ನು ನೆನೆದು ಹೊರಟಿದ್ದಿತು ನಿಟ್ಟುಸಿರು. ಇದರ ಜೊತೆಗೆ ಬಹುಶಃ ಸಿದ್ಧಯ್ಯನವರು ಸಂಕೋಚದಿಂದ ಎತ್ತಿದ ಮತ್ತೊಂದು ಪ್ರಶ್ನೆಯೂ ಏಳುತ್ತದೆ–ಅದೆಂದರೆ ಭೂದಾನ ಚಳುವಳಿಯ ಗ್ರಹಿಕೆಯ ಮೂಲವೇ ಬುಡಮೇಲಾಗುವಂಥದ್ದು. ಏಕೆಂದರೆ ಭೂಹೀನರನ್ನು ಗುರುತಿಸದೆ, ಭೂಮಿಯ ಯೋಗ್ಯತೆಯನ್ನು ಅರಿಯದೆ, ದಾನಾನಂತರ ಯೋಜಿತವಾಗಬೇಕಾದ ಕಾರ್ಯವಿಧಾನಗಳನ್ನು ಯೋಚಿಸದೆಯೇ ಕೈಹಾಕಿದ ದೊಡ್ಡ ಆದರ್ಶದ ಕನಸು ಮಾತ್ರ ಅದಾಗಿತ್ತು. ಸಾಲದ್ದಕ್ಕೆ ಬಡತನ ನಿರ್ಮೂಲನದಂಥ ಯೋಜನೆ ಬಡಜನರ ಕನಸುಗಳನ್ನು ಕೆರಳಿಸುವುದರಲ್ಲೂ ಇದು ಸಾಕಷ್ಟು ಫಲಕಾರಿಯಾಗಿಬಿಟ್ಟಿತ್ತೋ ಏನೋ! ಇನ್ನೊಂದು ಇಂಥದ್ದೇ ಒಂದು ಘಟನೆ ಗಡಿನಾಡಿನ ಗಾಂಧಿ ಎಂದು ಖ್ಯಾತರಾದ ಖಾನ್ ಅಬ್ದುಲ್ ಗಫಾರ್‌ಖಾನ್ ಅವರಿಗೆ ಸಂಬಂಧಿಸಿದ್ದು. ಅವರ ಭಾಷಣವನ್ನು ಅನುವಾದಿಸುವ ಜವಾಬ್ದಾರಿ ಸಿದ್ಧಯ್ಯನವರದಾಗಿತ್ತು. ಪ್ರವಾಸದ ಅವಧಿಯಲ್ಲಿ ಅವರು ಬೆಂಗಳೂರಿನಲ್ಲಿ ನಡೆದ ಬೃಹತ್ ಸಭೆಯಾದ ಮೇಲೆ ರಾಮನಗರ, ಮದ್ದೂರು, ಮಂಡ್ಯ ಮತ್ತು ಮೈಸೂರುಗಳಲ್ಲಿ ಅವರು ಹುರುಪೇರಿ ಮಾತನಾಡಿದರು. ಒಮ್ಮೆಯಂತೂ ಖಾನ್ ಅಬ್ದುಲ್‌ಗಫರ್ ಖಾನ್‌ಸಾಹೇಬರು ತಮ್ಮ ಮಾತಿನ ಮಧ್ಯ ಒಂದು ವಾಕ್ಯದಲ್ಲಿ ಹೇಳಿದ್ದು: ಪಾಕಿಸ್ತಾನದಲ್ಲಿರುವ ಹಿಂದುಗಳು ಹಿಂದೂಸ್ತಾನದಲ್ಲಿರುವ ಮುಸಲ್ಮಾನರಿಗಿಂತ ಹೆಚ್ಚು ಸುಖಿಗಳಾಗಿದ್ದಾರೆ.

ಇಂಥ ಘಟನೆಗಳಿಂದ ಸಿದ್ಧಯ್ಯನವರ ಆತ್ಮಚರಿತ್ರೆಗೆ ಐತಿಹಾಸಿಕತೆ ಕೂಡ ಪ್ರಾಪ್ತವಾಗುವುದುಂಟು. ಇದೇ ರೀತಿ ತಮ್ಮ ಗ್ರಾಮದ ಜನರು ಗ್ರಾಮದ ಯಾವುದೇ ಒಂದು ಉತ್ಸವವನ್ನಾಗಲಿ, ಒಂದು ಮನೆಯ ಜನರಂತೆ ಕೂಡಿ ಸಂಭ್ರಮ ಸಡಗರಗಳಿಂದ ಪಾಲ್ಗೊಳ್ಳುವ ವಿವರವಾಗಲಿ, ತಮ್ಮ ಊರಲ್ಲಿ ನಡೆದ ಖೂನಿಯೊಂದರ ಕಾರಣವಾಗಿ ನಿರಪರಾಧಿಗಳಾದ ಸಜ್ಜನರು ತಾವೆಲ್ಲಿ ಸಾಕ್ಷಿ ಹೇಳಬೇಕಾದೀತೋ ಎಂದು ಪೊಲೀಸರಿಂದಲೇ ತಪ್ಪಿಸಿಕೊಳ್ಳುವ ಮುಗ್ಧತೆಯಾಗಲಿ, ಕೀರ್ತನೆ ಮಾಡುವವರನ್ನು ಹಾಗೆಯೇ ಶಿಕ್ಷಕರನ್ನು ಊರಿಗೂರೇ ರಕ್ಷಿಸಿ ಪಾಲಿಸಬೇಕಾದ ಹೊಣೆ ತಮ್ಮದೆಂದು ನಡೆದುಕೊಳ್ಳುವ ರೀತಿಯಾಗಲಿ ಕಳೆದು ಹೋದ ನಮ್ಮ ಹಳ್ಳಿಗಳ ಮುಗ್ಧತೆ ಸಂಸ್ಕೃತಿಗಳನ್ನು ನೆನಪಿಸುವಂಥವಾಗಿವೆ. ಅಷ್ಟೇ ಏಕೆ, ಮುಖ್ಯಮಂತ್ರಿಯೊಬ್ಬರು ಪ್ರವಾಸ ಕಾಲದಲ್ಲಿ ತಮ್ಮ ಹಾಸಿಗೆಯನ್ನು ತಾವೇ ವಾಹನದಲ್ಲಿ ಒಯ್ಯುತ್ತಿದ್ದರೆಂಬ ವಿಚಾರ ಇಂದು ನಂಬುವುದಕ್ಕೆ ಸಾಧ್ಯವಿಲ್ಲದಂಥದ್ದು. ಅಂಥ ಹಾಸಿಗೆ ಪ್ರಯಾಣ ಕಾಲದಲ್ಲಿ ಕಾರಿನ ಮೇಲ್ಭಾಗದಿಂದ ಬಿದ್ದು ಹೋದಾಗ ಮುಖ್ಯಮಂತ್ರಿ ಪಟ್ಟ ಆತಂಕ, ಅದನ್ನು ಸಿದ್ಧಯ್ಯನವರು ಹುಡುಕಿದ ರೀತಿಗಳು ಕುತೂಹಲ ಕೆರಳಿಸುತ್ತವೆ. ಆದರೆ ಅಂಥ ಹಾಸಿಗೆಯೊಂದು ಹಾದಿಯಲ್ಲಿ ಬಿದ್ದಿದ್ದಾಗ ಇದು ಯಾರಿಗೆ ಸೇರಿದ್ದೋ ಏನೋ ಎಂದು ಚಿಂತಿಸುತ್ತಿದ್ದ ಅಣ್ಣತಂಗಿಯರು, ಇದಕ್ಕಾಗಿ ಹುಡುಕಾಟ ನಡೆಸುತ್ತ ಬಂದಿದ್ದ ಸಿದ್ಧಯ್ಯನವರನ್ನು ಕುರಿತು ''ನೀವು ಹಾಸಿಗೆ ಹುಡುಕುತ್ತ ಹೊರಟಿರುವಿರಾ?'' ಎಂದು ಪ್ರಶ್ನಿಸಿ ಹೌದೆಂದು ಹೇಳಲು ಓಡಿ ಹೋಗಿ ಬೆಳೆ ಸಾಲುಗಳ ಮರೆಗೆ ಇಟ್ಟಿದ್ದ ಹಾಸುಗೆ ಗಂಟು ತಂದು ಕೊಟ್ಟಿದ್ದು ಅಲ್ಲದೇ ಐದು ರೂಪಾಯಿಗಳ ಇನಾಮು ಕೊಡಲು ಹೋದಾಗ ಅದನ್ನವರು ತೆಗೆದುಕೊಳ್ಳಲಿಲ್ಲ. ಅಷ್ಟೇ ಅಲ್ಲ ನಿಮ್ಮ ಸಾಮಾನು ನಿಮಗೆ ಮುಟ್ಟಿಸಿದ್ದೇವೆ, ಇದಕ್ಕೇಕೆ ಇನಾಮು? ಎಂದು ಓಡಿ ಹೋದ ಚಿತ್ರ ಕೂಡ ಅವರ ಕಳೆದು ಹೋದ ಪ್ರಾಮಾಣಿಕತೆಯ ಮೌಲ್ಯಗಳನ್ನು ಎತ್ತಿ ಹಿಡಿಯುವಂಥದ್ದು.

ಅಷ್ಟೇ ಅಲ್ಲದೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಸಂಬಂಧಿಸಿದಂತೆ ಬರುವ ಡಾ.ನಂದಿಮಠರ ಪ್ರಸಂಗ ಕೂಡಾ ಗಮನಾರ್ಹವಾದದ್ದು.



ಕಲಬುರ್ಗಿಯ ಸಾಹಿತ್ಯ ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿದ್ದರು ಸಿದ್ಧಯ್ಯ ಪುರಾಣಿಕರು. ಕಪಟರಾಳಕೃಷ್ಣರಾಯರು, ಪ್ರೊ. ತವಗ ಭೀಮಸೇನರಾಯರಾದಿಯಾಗಿ ಎಲ್ಲರೂ ಒಪ್ಪಿ ವಹಿಸಿದ್ದ ಜವಾಬ್ದಾರಿಯದು. ಆ ಸಾಹಿತ್ಯ ಸಮ್ಮೇಳನಕ್ಕೆ ಉತ್ತಂಗಿ ಚನ್ನಪ್ಪನವರ ಹೆಸರು ಸೂಚಿತವಾಯಿತು. ಕಪಟರಾಳ ಕೃಷ್ಣರಾಯರು ಉತ್ತಂಗಿ ಚನ್ನಪ್ಪನವರ ಅನುಭವ ಮಂಟಪದ ಐತಿಹಾಸಿಕತೆಯನ್ನು ಪ್ರಶ್ನಿಸಿ ವಿರೋಧಿಸಿದ್ದವರಲ್ಲವೆ? ಉತ್ತಂಗಿ ಚನ್ನಪ್ಪನವರ ಅಧ್ಯಕ್ಷತೆಯನ್ನವರು  ಒಪ್ಪಿಯಾರೆ? ಮತ್ತೊಬ್ಬ ವಿದ್ವಾಂಸರಾದ ಡಾ. ನಂದಿಮಠರ ಹೆಸರನ್ನವರು ಸೂಚಿಸಿದರು. ಇಬ್ಬರಲ್ಲಿ ಒಬ್ಬರು ಮಾತ್ರ ಅಧ್ಯಕ್ಷರಾಗಬಹುದಲ್ಲವೇ? ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ತಿ.ತಾ.ಶರ್ಮ ಮತ್ತು ಸಿದ್ಧಯ್ಯ ಪುರಾಣಿಕರಿಬ್ಬರೂ ನಂದಿಮಠರ ಬಳಿಗೆ ಹೋದರು. ಡಾ. ನಂದಿಮಠರು ದೊಡ್ಡ ವಿದ್ವಾಂಸರಷ್ಟೇ ಅಲ್ಲ ದೊಡ್ಡ ವ್ಯಕ್ತಿಯೂ ಆದವರು. ಅಷ್ಟೇ ಅಲ್ಲ ಹಿಂದೆ ತಮ್ಮ ವಿದ್ಯಾಗುರುಗಳಾದ ಪ್ರೊ. ಬಸವನಾಳರ ಹೆಸರು ಸಮ್ಮೇಳನಾಧ್ಯಕ್ಷತೆಗೆ ಸೂಚಿತವಾದಾಗ ತಮ್ಮ ಹೆಸರನ್ನು ಹಿಂದೆ ಪಡೆದಿದ್ದವರು. ಈಗಲೂ ಅಷ್ಟೇ ಉತ್ತಂಗಿ ಚನ್ನಪ್ಪನವರ ಪರವಾಗಿ ತಮ್ಮ ಹೆಸರನ್ನು ಹಿಂದೆಗೆದುಕೊಂಡು ಸಮಸ್ಯೆಯನ್ನು ಬಗೆಹರಿಸಿದರು. ಆಶ್ಚರ್ಯವೆಂದರೆ ಈ ಇಬ್ಬರೂ ಹೋಗಿರುವುದು ನಂದಿಮಠರನ್ನು ಸಾಹಿತ್ಯ ಸಮ್ಮೇಳನಾಧ್ಯಕ್ಷತೆಗೆ ಒಪ್ಪಿಸಲೆಂದು. ಆದರೆ ಅಲ್ಲಿ ಆದದ್ದೇ ಬೇರೆ. ಇಂಥ ಪ್ರಸಂಗಗಳು  ಈ ಗ್ರಂಥದ ಸಾಂಸ್ಕೃತಿಕ ಮಹತ್ವವನ್ನು ಹೆಚ್ಚಿಸುತ್ತವೆ.

## ಆತ್ಮವೃತ್ತದ ಬಗೆಗೆ

ಸಿದ್ಧಯ್ಯ ಪುರಾಣಿಕರ 'ನನ್ನ ನಿನ್ನೆಗಳೊಡನೆ ಕಣ್ಣುಮುಚ್ಚಾಲೆ' ೩೬೩ ಪುಟಗಳ ಆತ್ಮವೃತ್ತವಾಗಿದೆ. ಆತ್ಮಕಥೆಯನ್ನು ಬರೆಯುವ ಸಿದ್ಧಯ್ಯನವರು ಹೇಳುವುದು ಹೀಗೆ: ''ಮುಂದಿನವರು ಗಾಂಧೀಜಿಯ ಸತ್ಯಶೋಧನೆ, ಪಂಡಿತಜಿಯ ಆತ್ಮಚರಿತ್ರೆ,ರಾಷ್ಟ್ರಕವಿ ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' ಮಾನ್ಯ ಮಾಸ್ತಿಯವರ 'ಭಾವ', ಡಾ. ಶಿವರಾಮ ಕಾರಂತರ ''ಸ್ಮೃತಿಪಟಲ''ದಿಂದ ಇತ್ಯಾದಿಗಳನ್ನು ಓದಿದ್ದರೂ ಸಾಕು. ನನ್ನಂಥವನ ಆತ್ಮಕಥನ ಯಾವ ಗಿಡದ ತೊಪ್ಪಲು?''

ಸಿದ್ಧಯ್ಯನವರು ಏನೇ ಹೇಳಲಿ, ೧೯೮೧ರ ವರೆಗಿನ ಅವರ ಆತ್ಮವೃತ್ತ ಹಲವಾರು ಸಾಂಸ್ಕೃತಿಕ ದಾಖಲೆಗಳನ್ನೂ ಮೌಲಿಕ ವೈಯಕ್ತಿಕ ಸಂಗತಿಗಳನ್ನು ಒಳಗೊಂಡ ಗಮನಾರ್ಹವಾದ ಕೃತಿಯಾಗಿದೆ ಎನ್ನುವುದನ್ನು ಮರೆಯಲಾಗದು. ಅನ್ನದಾನಯ್ಯ ಪುರಾಣಿಕ ಹಾಗೂ ಬಸವರಾಜ ಎಂಬ ಇಬ್ಬರೂ ತಮ್ಮಂದಿರೂ, ವೀರಾಂಬೆ (೧೯೪೬ರಲ್ಲಿ ನಿಧನರಾದರು) ಹಾಗೂ ಶರಣಮ್ಮ ಎಂಬ ತಂಗಿಯನ್ನೊಳಗೊಂಡ ಸಿದ್ಧಯ್ಯನವರ ಕುಟುಂಬ ಇಂದು ಹಿರಿದಾಗಿದೆ.

## ಪುರಾಣಿಕರ ಕುಟುಂಬ

ಸಿದ್ಧಯ್ಯ ಪುರಾಣಿಕರಿಗೆ ನಾಲ್ವರು ಮಕ್ಕಳು. ಅವರಲ್ಲಿ ಹಿರಿಯಾಕೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್, ಅವರ ಪತಿ ಶ್ರೀ ಕೆ.ಎಸ್.ಎಂ. ನಂದೀಶ್ವರ. ಇವರಿಗೆ ಒಂದು ಗಂಡು ಮತ್ತು ಒಂದು ಹೆಣ್ಣು ಮಗುವಿದೆ. ಎರಡನೆಯ ಮಗಳು ಶ್ರೀಮತಿ ಶಿವಗೀತಾ, ಶ್ರೀ ಗಂಗಾಧರ್ ಪೂಜಾರಿ ಯವರನ್ನು ವಿವಾಹವಾಗಿರುವ ಇವರಿಗೆ ಒಂದು ಗಂಡು ಒಂದು ಹೆಣ್ಣು ಮಗುವಿದೆ. ಮೂರನೆಯವರು ಶ್ರೀ ಪ್ರಸನ್ನಕುಮಾರ್. ಇವರ ಶ್ರೀಮತಿಯವರೇ ಲತಾದೇವಿ ಪುರಾಣಿಕರು. ಇವರಿಗೆ ಇಬ್ಬರು ಗಂಡು ಮಕ್ಕಳು. ನಾಲ್ಕನೆಯ ಮಗಳು ಶ್ರೀಮತಿ ಭಾರತಿ ಜ್ಯೋತಿ. ಶ್ರೀ ಎಸ್.ಎಂ.ಮೃತ್ಯುಂಜಯಪ್ಪನವರನ್ನು ವಿವಾಹವಾಗಿರುವ ಇವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ.

ಕನ್ನಡ ಹಾಗೂ ಸಾಹಿತ್ಯದ ಬಗೆಗಿರುವಂಥದೇ ಕಾಳಜಿ ಕುಟುಂಬವರ್ಗದ ಮೇಲೆಯೂ ಡಾ. ಸಿದ್ಧಯ್ಯ ಪುರಾಣಿಕರಿಗಿದೆ.

ಡಾ. ಪುರಾಣಿಕರನ್ನು ಕುರಿತ ಅವರ ೫೫ನೇ ಹುಟ್ಟುಹಬ್ಬದಂದು ಮಿರ್ಜಿ ಅಣ್ಣಾರಾವ್, ಕೃಷ್ಣಕೊಲ್ಹಾರ ಕುಲಕರ್ಣಿ ಇವರ ಸಂಪಾದಕತ್ವದಲ್ಲಿ ಕಾವ್ಯಾನಂದ ಎಂಬ ಅಭಿನಂದನಾ ಗ್ರಂಥವನ್ನು ಅರ್ಪಿಸಿದರು. ಅದಕ್ಕೆ ಮೊದಲೇ ಬಿಜಾಪುರ ಗೆಳೆಯರು ಕಾವ್ಯಶ್ರೀ ಎಂಬ ಚಿಕ್ಕ ಚೊಕ್ಕ ಅಭಿನಂದನಾ ಗ್ರಂಥವನ್ನು ತಂದಿದ್ದರು. ಕಲಬುರ್ಗಿಯ ಚೇತನ ಗೆಳೆಯರು ಜೀವನ ವಿಕಾಸ ಎಂಬ ವಿಶೇಷ ಸಂಚಿಕೆ ಹೊರಡಿಸಿದ್ದರು. ೧೯೮೧ರಲ್ಲಿ



'ಕಾವ್ಯಾನಂದ' ಹೆಸರಿನಲ್ಲಿ ಡಾ. ಮರುಳಯ್ಯ ಮತ್ತೊಂದು ಅಭಿನಂದನ ಗ್ರಂಥವನ್ನು ಪ್ರಕಟಿಸಿದರು.

## ಮನೆಯಲ್ಲೇ ಅಧ್ಯಯನ ಶಾಲೆ

೧೯೭೬ರಲ್ಲಿ ಸಿದ್ಧಯ್ಯ ಪುರಾಣಿಕರು ನಿವೃತ್ತರಾದರು. ಆದರೆ ಕನ್ನಡದ ಅಭಿಮಾನ ಶೂನ್ಯತೆಗೆ ಕಾರಣವಾದ ಅಂಶಗಳನ್ನು ಕುರಿತ ಅಧ್ಯಯನ, ಕನ್ನಡ ಪರವಾದ ಚಟುವಟಿಕೆಗಳು ಹಾಗೂ ಸೃಜನಶೀಲತೆ ಮಾತ್ರ ಬತ್ತಲಿಲ್ಲ. ಪುರಾಣಿಕರು ತಮ್ಮ ಮನೆಯನ್ನೆ ಒಂದು ಅಧ್ಯಯನ ಕೇಂದ್ರವಾಗಿ ಮಾಡಿಕೊಂಡವರು. ಈ ಉದ್ದೇಶದಿಂದ ಡಾ. ವಿ.ಕೃ.ಗೋಕಾಕರ ಅಧ್ಯಕ್ಷತೆಯಲ್ಲಿ ಒಂದು ವ್ಯಾಸಂಗ ಗೋಷ್ಠಿಯನ್ನು ಕಟ್ಟಿಕೊಂಡು ತಿಂಗಳಿಗೊಮ್ಮೆ ಮಹಾಕವಿಗಳ ಬಗೆಗೆ ಪರಿಣತರಿಂದ ವಿಶೇಷ ಉಪನ್ಯಾಸಗಳನ್ನು ಕೇಳುವ ವ್ಯವಸ್ಥೆ ಮಾಡಿಕೊಂಡರು. ಡಾ. ಕೆ.ಮುದ್ದಣ್ಣ ಶ್ರೀ ಜಯತೀರ್ಥ ರಾಜಪುರೋಹಿತ ಮೊದಲಾದ ಮಿತ್ರರೊಡನೆ ಅರವಿಂದ ರವೀಂದ್ರ, ಹೋಮರ್,ಮಿಲ್ಟನ್, ಇಕ್ಬಾಲ್, ಡಾಂಟೆ, ವರ್ಜಿಲ್, ವಾಲ್ಟ್ ವಿಟ್‌ಮನ್ ಮೊದಲಾದವರ ಬಗ್ಗೆ ಬಹುಕಾಲ ನೆನಪಿನಲ್ಲಿ ಉಳಿಯುವಂತ ಭಾಷಣಗಳನ್ನು ಕೇಳಿದರು.

ಎಂ.ವಿ.ಚಕ್ರವರ್ತಿಯವರು ಪಂಪಭಾರತವನ್ನು ಕುರಿತು, ಕೆ. ನರಸಿಂಹಮೂರ್ತಿಯವರು ನವ್ಯಕಾವ್ಯವನ್ನು ಕುರಿತು, ಜೋಳದರಾಶಿ ದೊಡ್ಡನಗೌಡರು ಶೂನ್ಯಸಂಪಾದನೆಯನ್ನು ಕುರಿತು ವಿಸ್ತಾರವಾಗಿ ವ್ಯಾಖ್ಯಾನ ಮಾಡಿದ್ದು ಇವರ ಮನೆಯಲ್ಲಿ ಕೆ.ಎಸ್.ನಿಸಾರ್ ಅಹ್ಮದ್, ಸುಮತೀಂದ್ರ ನಾಡಿಗ್ ಮೊದಲಾದವರು ಇಲ್ಲಿ ತಮ್ಮ ಕೃತಿಗಳನ್ನು ಓದಿದ್ದು ಉಂಟು. ಅಷ್ಟೇಕೆ ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಪು.ತಿ.ನ.ರವರು ತಮ್ಮ ಕವಿತೆಗಳನ್ನು ವಾಚನ ಮಾಡಿದ್ದೂ ಉಂಟು. ಅವರ ಜೀವನ ಚರಿತ್ರೆಯಲ್ಲಿ ಅವರೇ ಹೇಳಿಕೊಳ್ಳುವ ಮಾತು ಹೀಗಿದೆ: 'ಹಳ್ಳಿಗನು ಹೋಗಿ ನಾಗರಿಕನಾಗಿದ್ದೇನೆ. ಹೃದಯವಿನ್ನೂ ಹಳ್ಳಿಯಲ್ಲಿದೆ. ದೇಹ ಮಹಾನಗರ ದಲ್ಲಿದೆ. ಆದಷ್ಟು ಹಿರಿಯ ಸಾಹಿತಿಗಳ ಕವಿಗಳ ಸಂಗದಲ್ಲಿ ದಿನ ಕಳೆಯುವ ಬಯಕೆ' ಪುರಾಣಿಕರು ಇಷ್ಟನ್ನು ಮಾಡಿ ತೋರಿಸಿದ್ದಾರೆ.

೧೯೮೮ರಲ್ಲಿ ಅವರು ತಾವು ಮಾಡಲೇಬೇಕಾದುದನ್ನು ಕುರಿತು ಹೇಳಿದ್ದು ಹೀಗೆ–''ಇನ್ನೊಂದು ವಚನ ಸಂಕಲನ, ಇನ್ನೊಂದು ಕವಿತೆ ಸಂಗ್ರಹ, ಮರುಳಸಿದ್ಧನ ಕಂತೆ ಇವಿಷ್ಟನ್ನು ಮುಗಿಸಬೇಕೆಂದಿದ್ದೇನೆ. ಇಷ್ಟೇ ಅಲ್ಲ ಇದರ ಜೊತೆಗೆ ಇನ್ನೊಂದು ಕವನ ಸಂಕಲನವನ್ನು ಪ್ರಕಟಿಸಬೇಕೆಂದಿದ್ದೇನೆ. ಪ್ರವಾಸ ಸಾಹಿತ್ಯವನ್ನು ಕುರಿತು ಬರೆಯಬೇಕಾದ್ದು ಸಾಧ್ಯವಾಗಲೇ ಇಲ್ಲ ಎಂದು ಅವರು ಪರಿತಪಿಸಿದರು. ಅಮೆರಿಕ ಪ್ರವಾಸದ ಅವರ ಅನುಭವದ ಕೆಲವು ತುಣುಕುಗಳು ಮಕ್ಕಳ ಸಾಹಿತ್ಯವನ್ನು ಕುರಿತು ಬರೆದ ಅವರ ಲೇಖನಗಳಲ್ಲಿವೆ.

## ಚಟುವಟಿಕೆಗಳು

ಡಾ. ಪುರಾಣಿಕರು ಇಂತಹ ಸಾಂಸ್ಕೃತಿಕ ವಾತಾವರಣವನ್ನು ನಿವೃತ್ತರಾದ ಮೇಲೂ ನಿರಂತರವಾಗಿ ಉಳಿಸಿಕೊಂಡು ಬಂದದ್ದು ಕನ್ನಡಿಗರ ಭಾಗ್ಯವೆನ್ನಬೇಕು. ನಿವೃತ್ತಿಯ ನಂತರ ಸೃಜನಶೀಲತೆಗೆ ಬಾಧಕವಾಗದಂತೆ ತಮ್ಮ ಕಾಲವನ್ನು ಕನ್ನಡದ ಸಮಸ್ಯೆಗಳ ಅಧ್ಯಯನಕ್ಕೆ ಮೀಸಲಾಗಿಟ್ಟಿದ್ದರು. ಅವರಿಗೆ ಕನ್ನಡಿಗರ ಸಮಸ್ಯೆಗಳ ಬಗ್ಗೆ ಖಚಿತವಾದ ಅರಿವು ಇತ್ತು. ಆದ್ದರಿಂದಲೇ ಅವರು ಕನ್ನಡಿಗರ ಸಮಸ್ಯೆಗಳಿಗೆ ಮೂರು ಮುಖ್ಯ ಕಾರಣಗಳನ್ನು ಹೇಳುತ್ತಿದ್ದರು.

೧) ಕನ್ನಡಿಗರ ಅಭಿಮಾನ ಶೂನ್ಯತೆ ೨) ರಾಜಕಾರಣಿಗಳ ನಪುಂಸಕತೆ ಮತ್ತು ೩) ಅನ್ಯಭಾಷೆಗಳ ಜನರ ಸಮಯಸಾಧಕತನ ಹಾಗೂ ಆಕ್ರಮಣಶೀಲತೆ. ಅದರಿಂದಾಗಿಯೇ ಕನ್ನಡಕ್ಕಾಗಿ ಹೋರಾಟ ಮಾಡದೆ ಗತ್ಯಂತರವಿಲ್ಲ ಎಂಬುದನ್ನು ಅವರು ಮನಗಂಡಿದ್ದರು. ಗೋಕಾಕ್ ಚಳುವಳಿ ಆರಂಭವಾದಾಗ ನಿಸ್ಸಂಕೋಚವಾಗಿ ಅದರಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಡಿ.ದರ್ಜೆ ನೌಕರಿಗೆ ಸೇರಲು ಕನ್ನಡ ಪರೀಕ್ಷೆ ಕಡ್ಡಾಯವಾಗ ಬೇಕೆಂಬ ವಿಷಯದಲ್ಲಿ ಡಾ.ದೇ.ಜ.ಗೌ.ಅವರೊಂದಿಗೆ ತಾವು ಲೋಕಸೇವಾ ಆಯೋಗದ ಕಛೇರಿಯ ಮುಂದೆ ನಿರಶನವ್ರತವನ್ನು ಮಾಡಿ ಜಯಶೀಲರೂ ಆದರು. ಕರ್ನಾಟಕ ಸರ್ಕಾರ ಹಾಗೂ ಕೇಂದ್ರ ಆಡಳಿತದ ಕಾರ್ಖಾನೆಗಳಲ್ಲಿ ಹಾಗೂ ಖಾಸಗಿ ಕಾರ್ಖಾನೆಗಳಲ್ಲಿ ಕನ್ನಡಿಗರು ಎದುರಿಸುತ್ತಿರುವ



ಸಮಸ್ಯೆಗಳನ್ನು ಅವರು ತೀವ್ರ ಹತ್ತಿರದಿಂದ ಬಲ್ಲವರಾಗಿದ್ದರು. ಅನೇಕ ವೇಳೆ ಅವರಿಗೆ ಮಾರ್ಗದರ್ಶನ ನೀಡುತ್ತಿದ್ದುದೇ ಅಲ್ಲದೇ ಚಳುವಳಿಗಳಲ್ಲಿಯೂ ಭಾಗವಹಿಸುತ್ತಿದ್ದರು. ಕನ್ನಡ ಪರವಾದ ಇವರ ಈ ಶಕ್ತಿಯನ್ನು ಅರಿತಿದ್ದರಿಂದಲೇ ಕರ್ನಾಟಕ ಸರ್ಕಾರ ಇವರನ್ನು ಸರೋಜಿನಿ ಮಹಿಷಿ ಸಮಿತಿ, ಕನ್ನಡ ಪ್ರಾಧಿಕಾರ, ಕನ್ನಡ ಕನ್ನಡ ನಿಘಂಟು ಸಮಿತಿ, ಗಡಿ ಸಮಿತಿ ಮೊದಲಾದವುಗಳ ಸದಸ್ಯರನ್ನಾಗಿ ನೇಮಿಸಿತು. ಆ ಕ್ಷೇತ್ರಗಳಲ್ಲಿ ಸಿದ್ಧಯ್ಯನವರು ಮಾಡಿದ ಕಾರ್ಯ ಬಹಳ ಗಮನಾರ್ಹವಾದದ್ದು.

## ವಾಗ್ಮಿತೆ

ಸಿದ್ಧಯ್ಯನವರು ಕನ್ನಡ, ಇಂಗ್ಲೀಷ್, ಹಿಂದಿ ಮತ್ತು ಉರ್ದು ಭಾಷೆಗಳಲ್ಲಿ ಪ್ರಚಂಡ ವಾಗ್ಮಿಯಾಗಿದ್ದರು. ಅವರ ಕವಿಮನೋಧರ್ಮ ಅವರ ವಾಗ್ಮಿತೆಗೆ ವಿಶೇಷವಾದ ಪರಿಣಾಮ ರಮಣೀಯತೆಯನ್ನು ನೀಡುತ್ತಿದ್ದರೆ ಅಧ್ಯಯನ ಅವರ ಭಾಷಣಗಳನ್ನು ಅತ್ಯಂತ ಅಧಿಕೃತವಾಗುವಂತೆ ಮಾಡುತ್ತಿತ್ತು. ಭಾಷಣದ ವೇಳೆಯಲ್ಲಿ ಅವರು ನೀಡುತ್ತಿದ್ದ ಅಂಕಿಅಂಶಗಳು ಅವರ ವಿಸ್ತಾರವೂ ಆಳವೂ ಆದ ಅಧ್ಯಯನದ ಕುರುಹಾಗಿರುತ್ತಿದ್ದವು. ಸಮಸ್ಯೆಗಳನ್ನು ವಿಶ್ಲೇಷಿಸುವ ರೀತಿಯಂತೂ ಯಾರಾದರೂ ತಲೆದೂಗುವಂಥದ್ದು.

## ಕನ್ನಡದ ಕೈಂಕರ್ಯ

ಹೀಗೆ ಕನ್ನಡದ ಕೈಂಕರ್ಯವನ್ನು ಮಾಡಿದ್ದ ಸಿದ್ಧಯ್ಯ ಪುರಾಣಿಕರು ಕನ್ನಡ ಹೋರಾಟಗಾರರಿಗೆ ಆಶಾಕಿರಣವಾಗಿದ್ದರು. ಅವರ ಮನೆ ಕನ್ನಡ ಸಮಸ್ಯೆಗಳನ್ನು ಕುರಿತವರಿಗೆ ಸದಾ ಮಾರ್ಗದರ್ಶನ ರೂಪದಲ್ಲಿರುತ್ತಿತ್ತು. ಪುರಾಣಿಕರು ಕಾವೇರಿ ಜಲವಿವಾದದ ಸಂದರ್ಭದಲ್ಲಿ ಮಾನ್ಯ ಬಾಳೆಕುಂದ್ರಿಯವರೊಂದಿಗೆ ಸೇರಿ ಕೃಷ್ಣಾ ಮೇಲ್ದಂಡೆ ಯೋಜನೆಯ ಅಗತ್ಯತೆಗಳನ್ನು ಪ್ರತಿಪಾದಿಸಿದರು. ಅಷ್ಟೇ ಅಲ್ಲ ಕರ್ನಾಟಕಕ್ಕೆ ರೈಲ್ವೆ ಹೆದ್ದಾರಿಗಳ ನಿರ್ಮಾಣ, ಆರ್ಥಿಕ ನೆರವು ಮೊದಲಾದ ವಿಷಯಗಳಲ್ಲಿ ಆಗಿರುವ ಅನ್ಯಾಯ ಪರಂಪರೆಗಳನ್ನು ಎಳೆಯೆಳೆಯಾಗಿ ಬಿಡಿಸಿ ಹೇಳಬಲ್ಲವರಾಗಿದ್ದರು. ಬಹುಶಃ ಇದೇ ಕಾರಣಕ್ಕಾಗಿಯೇ ಕನ್ನಡಿಗರ ಹಿತ

ಸಂರಕ್ಷಣೆಗೆಂದೇ ಆರಂಭವಾಯಿತೆನ್ನಲಾದ ಕರ್ನಾಟಕ ವಿಕಾಸ ವೇದಿಕೆಯ ಅಧ್ಯಕ್ಷರೂ ಆಗಿ ಕೊನೆಯುಸಿರು ಇರುವವರೆಗೆ ಕಾರ್ಯನಿರ್ವಹಿಸಿದರು.

ಡಾ. ಪುರಾಣಿಕರು ಆಡಳಿತಗಾರರಾಗಿ, ಕನ್ನಡಕ್ಕಾಗಿ ಮಾಡಿದ ಕೆಲಸ ಅತ್ಯಮೂಲ್ಯವಾದುದು. ಅಷ್ಟೇ ಅಲ್ಲದೆ ಆಡಳಿತಗಾರರಾಗಿದ್ದು ಸಾಹಿತಿಗಳಾದವರ ಸಾಲಿನಲ್ಲಿಯೂ ಪುರಾಣಿಕರು ಗಮನಾರ್ಹರಾಗಿದ್ದಾರೆ. ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಹೆಚ್.ಎಲ್.ನಾಗೇಗೌಡ, ನವರತ್ನ ರಾಮರಾಯರಂತೆಯೇ ಪುರಾಣಿಕರೂ ಸಾಹಿತ್ಯಸೇವೆ ಮಾಡಿದರು.

## ಮೊದಲ ಕವನ ಸಂಕಲನ

ಕನ್ನಡ ಸಾಹಿತ್ಯಕ್ಕೆ ಪುರಾಣಿಕರು ಸಲ್ಲಿಸಿರುವ ಸೇವೆ ಸಾಮಾನ್ಯವಲ್ಲ. ಅವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಸಿದ್ಧಯ್ಯ ಪುರಾಣಿಕರು ಸಾಹಿತ್ಯ ಸೇವೆಯನ್ನು ಆರಂಭಿಸಿದ್ದೇ ಕವಿತೆಗಳ ಮೂಲಕವಾಗಿ ಸ್ವತಃ ನಾಟಕವನ್ನು ಬರೆದು ಅಭಿನಯದಲ್ಲಿ ಪಾಲ್ಗೊಂಡಿದ್ದರೂ ಅವರದು ಪ್ರಧಾನತಃ ಕವಿ ಹೃದಯವಾಗಿದೆ. 'ಕಾವ್ಯಾನಂದ' ಎಂಬ ಕಾವ್ಯನಾಮ ದೊಂದಿಗೆ ಪ್ರಕಟವಾದ ಅವರ ಮೊದಲ ಕವನ ಸಂಕಲನ 'ಜಲಪಾತ'. ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಇದಕ್ಕೆ ಮುನ್ನುಡಿಯನ್ನು ಬರೆದಿದ್ದಾರೆ: ''ಕನ್ನಡ ಕಂದ ಕಾವ್ಯಾನಂದರು ಇಪ್ಪತ್ತನೆಯ ಶತಮಾನದ ವಿಶ್ವಗ್ರಾಸಿಯಾದ ಜ್ವಾಲಾಮಾಲೆಯಲ್ಲಿ ಕಂಡ ಕಾಲದ ಘೋರ ರೂಪವನ್ನು ಅನೇಕ ಮುಖವಾಗಿ ವರ್ಣಿಸಿದ್ದಾರೆ....ಕಾವ್ಯಾನಂದರ ಕಾವ್ಯರಚನೆಯ ಅಸ್ಥಿಭಾರಕ್ಕೆ ತತ್ವಗಳ ತೂಕವಿರುವುದರಿಂದಲೇ ಅವರ ರಾಗದ ತ್ವೇಷದ (ದ್ವೇಷದ ಅಲ್ಲ) ನುಡಿಗಳಲ್ಲಿ ಬೆಂಕಿಯ ಜೊತೆಗೆ ಬೆಳಕೂ ನುಗ್ಗುತ್ತದೆ.'' ಬೇಂದ್ರೆಯವರು ಕೈವಾರಿಸಿರುವ ಈ ಸಂಕಲನದಲ್ಲಿ ಕನ್ನಡದ ಅಭಿಮಾನ ಮತ್ತು ಆದರ್ಶ ಭಾವನೆಗಳು ತುಂಬಿಕೊಂಡಿವೆ. ಉದಾಹರಣೆಗೆ ಈ ನಾಲ್ಕು ಸಾಲುಗಳನ್ನು ಗಮನಿಸುವುದು.

ಕನ್ನಡದ ಬತ್ತಿಯೆಳೆಗಿಡಿದ ಮಂಕನು ತೆಗೆಯೆ
ನನ್ನ ಕಾಯವು ಚಾಚು ಕಡ್ಡಿಯಾಗಿರಲಿ
ಭಾರತದ ದೀವಳಿಗೆಯಲ್ಲಿ ಶಿವಗನ್ನಡದ
ಜ್ಯೋತಿಯಿದು ತೇಜಸ್ಸಿನೊಡ್ಡಿಯಾಗಿರಲಿ



ಸಿದ್ಧಯ್ಯ ಪುರಾಣಿಕರ ಕನ್ನಡಾಭಿಮಾನ ಈ ಸಾಲುಗಳಲ್ಲಿ ಹೆಪ್ಪುಗಟ್ಟಿ ರುವುದನ್ನು ಕಾಣಬಹುದು. ಅಷ್ಟೇ ಅಲ್ಲ ಆಶ್ಚರ್ಯವಾಗುವ ಇನ್ನೊಂದು ಸಂಗತಿಯೆಂದರೆ ಸಿದ್ಧಯ್ಯ ಪುರಾಣಿಕರ ಕನ್ನಡವನ್ನು ಕುರಿತ ಕವಿತೆಯನ್ನು ತಿ.ನಂ.ಶ್ರೀ. ಅವರು ಸ್ಮರಿಸಿ ಉಲ್ಲೇಖಿಸಿರುವುದು.★

## ಕರುಣಾ ಶ್ರಾವಣ

'ಕರುಣಾ ಶ್ರಾವಣ' ಸಿದ್ಧಯ್ಯ ಪುರಾಣಿಕರ ಎರಡನೇ ಕವನ ಸಂಕಲನವಾಗಿದೆ.

ಹಾಲಿನ ಹೊಳೆಯಲ್ಲಿ ಮೂಡಿದ ಚಂದಿರನ
ಪಡಿನೆಳಲಂತೆ ಭಾವಸುಂದರಿಯ ಮೊಗ
ಹೂಬಾಯಿ ತೆರೆದಂತೆ ಹಸುಹಾಲು ಕರೆದಂತೆ
ಮುತ್ತುಗಳು ಸುರಿದಂತೆ ಅವಳ ನಗೆ
ಯಾರೆದೆಯ ಹೊಕ್ಕರು ಯಾರೊಡನೆ ನಕ್ಕರು
ಆಕೆ ಜಾರೆಯಲ್ಲ ಹೋಗೆಂದರೆ ಹೋಗುವಳು ಆದರೆ
ಬಾರೆಂದರೆ ಬರುವವಳಲ್ಲ, ಮಿತಭಾಷಿ, ಹಿತಭಾಷಿ ಮಹಾಕೃಪಣೆ.

ಇಂತಹ ಸಾಲುಗಳಲ್ಲಿ ಕಾವ್ಯವನ್ನು ಕುರಿತು ಸಿದ್ಧಯ್ಯ ಪುರಾಣಿಕರ ಭಾವನೆಗಳು ವ್ಯಕ್ತವಾಗುವುದನ್ನು ಗಮನಿಸಬಹುದು. ಸುಂದರವಾದ ಭಾವನೆಗಳಿಂದ ಕೂಡಿದ ಈ ಕವಿತೆಗಳು ಆಕರ್ಷಕವಾಗಿವೆ.

## ಮೊದಲು ಮಾನವನಾಗು

ಮೂರನೆಯ ಕವನ ಸಂಕಲನ ''ಮೊದಲು ಮಾನವನಾಗು'' ಈ ಕವನ ಸಂಕಲನದ 'ಮೊದಲು ಮಾನವನಾಗು' ಕವಿತೆ ಇಂದು ಕನ್ನಡಿಗರ

★ ಇದಕ್ಕೆ ಕಾರಣವನ್ನು ಹುಡುಕುವುದು ಕಷ್ಟವಲ್ಲ. ಸಿದಯ್ಯ ಪುರಾಣಿಕರು ಬರೆದ ಈ ಕವಿತೆ ''ಜಯಂತಿ''ಯಲ್ಲಿ ಮೊದಲು ಪ್ರಕಟವಾಯಿತು. ಅದನ್ನು 'ಮಿಂಚಿನಬಳ್ಳಿ' ಪ್ರಕಾಶನದ ಸಂಪಾದಕರಾದ ಬುರ್ಲಿಬಿಂದು ಮಾಧವರು ಆಯ್ದು 'ನಾಡಗೀತೆಗಳ' ಸಂಕಲನದಲ್ಲಿ ಪ್ರಕಟಿಸಿದ್ದರು. ಸಹಜವಾಗಿಯೇ ಕನ್ನಡಾಭಿಮಾನಿಗಳೆಲ್ಲರ ಗಮನವನ್ನೂ ಆ ಸಂಕಲ ಸೆಳೆದಿತ್ತು. ಅದರೊಳಗಿದ್ದ ಕವಿತೆ ಅಂದಿನ ಕನ್ನಡದ ಅಭಿಮಾನದ ವಾತಾವರಣಕ್ಕೆ ತುಂಬ ಆಕರ್ಷಕವಾಗಿ ತೋರಿತ್ತು. ಅ.ನ.ಕೃ. ಸಂಪಾದಿಸಿದ 'ರಸಋಷಿ'ಯಲ್ಲೂ ಸಿದಯ್ಯ ಪುರಾಣಿಕರ ಎರಡು ಕವಿತೆಗಳು ಸೇರಿದ್ದವು.

ಮನೆಮಾತಾಗಿದೆ. ಸಾವಿರ ಹಾಡಿನ ಸರದಾರನೆಂದೇ ಖ್ಯಾತರಾಗಿದ್ದ ಬಾಳಪ್ಪ ಹುಕ್ಕೇರಿಯವರು ಈ ಕವಿತೆಯನ್ನು ನೂರಾರು ವೇದಿಕೆಗಳಲ್ಲಿ ಅತ್ಯಂತ ಹೃದಯಂಗಮವಾಗಿ ಹಾಡಿ ಕನ್ನಡಿಗರ ಹೃದಯಕ್ಕೆ ಮುಟ್ಟಿಸಿದ್ದಾರೆ.

''ರಾಜಕಾರಣಿಯಾಗು
ರಾಷ್ಟ್ರಭಕ್ತನೆ ಆಗು
ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು
ಏನಾದರೂ ಆಗು
ನೀ ಬಯಸಿದಂತಾಗು
ಏನಾದರೂ ಸರಿಯೇ ಮೊದಲು ಮಾನವನಾಗು''

ಸಮಾಜದ ಜನರನ್ನು ಗಮನಿಸಿದ ಪುರಾಣಿಕರು ಮನುಷ್ಯ ತನ್ನ ಮಾನವೀಯತೆಯನ್ನೇ ಕಳೆದುಕೊಳ್ಳುತ್ತಿರುವ ದುರಂತದ ಬಗೆಗೆ ಹಳಹಳಿಸಿದ್ದಾರೆ. ಇಲ್ಲಿಯ ಆಶಯ ಮನೋಜ್ಞವಾದುದು. ಈ ಸಂಕಲನದಲ್ಲಿ ಇರುವ 'ಅವಿಭಕ್ತಂ ವಿಭಕ್ತೇಷು' ಎಂಬ ಕವಿತೆ ಕೂಡ ಜನಪ್ರಿಯವಾದ ಗೀತೆಯಾಗಿದೆ.

''ಅವಿಭಕ್ತಂ ವಿಭಕ್ತೇಷು
ಇದರಲ್ಲಿಯೆ ನಮಗೆ ಲೇಸು
ಎಲ್ಲೆ ಇರು, ಏನೆ ಮಾಡು
ಇದೇ ಮಂತ್ರ ಜಪಿಸು
ಇದೇ ಸೂತ್ರವನ್ನು ಜಪಿಸು
ಅವಿಭಕ್ತಂ ವಿಭಕ್ತೇಷು
ಕಾಶ್ಮೀರದ ಕಣಿವೆಯಲ್ಲಿ
ಕೇರಳದ ಕುಟೀರದಲ್ಲಿ
ಭಾರತದಲ್ಲೆಲ್ಲ ಕಡೆಗೆ
ಇದೇ ಮಂತ್ರ ಕೇಳುತಿರಲಿ
ಅವಿಭಕ್ತಂ ವಿಭಕ್ತೇಷು
ಅವಿಭಕ್ತಂ ವಿಭಕ್ತೇಷು''



ಈ ಪದ್ಯದ ಈ ಸಾಲುಗಳ ಲಯ–ಲಯಕ್ಕೆ ಅನುಸಾರಿಯಾಗಿ ಹೊಮ್ಮುವ ಆಶಯ ಈ ಕವಿತೆಯನ್ನು ಜನಪ್ರಿಯವಾಗುವಂತೆ ಮಾಡಿದೆ. ಈ ಸಂಕಲನದ ಮತ್ತೊಂದು ಕವಿತೆ ಸಿದ್ಧಯ್ಯ ಪುರಾಣಿಕರಿಗೆ ಪ್ರಿಯವಾದದ್ದು. ತಾಜಮಹಲನ್ನು ಕುರಿತು ಈ ಚೌಪದಿಯನ್ನು ಗಮನಿಸಿ :

''ಶಿಲೆಯ ಹಾಲಿಗೆ ಕಲೆಯ ಹೆಪ್ಪು ಹಾಕಿ
ಕಡೆಯೆ ಕುಶಲತೆಯೆಂಬ ಕಡೆಗೋಲನಿಕ್ಕಿ
ಹರಿದುದಾಕಡೆ ತಕ್ರ ಯಮುನೆಯಾಗಿ
ಮೆರೆದುದೀ ಕಡೆ ಬೆಣ್ಣೆ ತಾಜಮಹಲಾಗಿ''

ಈ ಕವಿತೆಯನ್ನು ಸಿದ್ಧಯ್ಯ ಪುರಾಣಿಕರು ಉರ್ದುವಿಗೆ ಅನುವಾದಿಸಿ ಮುಷಾಯರದಲ್ಲಿ ಹಾಡಿದಾಗ ಅದನ್ನು ಹೃದಯತುಂಬಿ ಚಪ್ಪಾಳೆಗಳ ಮೂಲಕ ಸ್ವೀಕರಿಸಿದ ರೀತಿಯನ್ನು ಮತ್ತೆ ಮತ್ತೆ ಸ್ಮರಿಸಿಕೊಂಡು ಹೆಮ್ಮೆಪಡುತ್ತಿದ್ದುದನ್ನು ಮರೆಯಲು ಸಾಧ್ಯವೇ ಇಲ್ಲ. ಡಾ.ಗೋಕಾಕರು ''ಮಾನವಾಂತಃಕರಣವೇ ಈ ಸಂಕಲನದ ಪ್ರಧಾನ ವಸ್ತುವಾಗಿದೆ'' ಎಂದು ಹೇಳುತ್ತಾರೆ.

### ಮಾನಸ ಸರೋವರ

ಇವರ ನಾಲ್ಕನೆಯ ಕವನ ಸಂಕಲನ 'ಮಾನಸ ಸರೋವರ.'

''ಬದುಕಿರುವ ಸಂಭ್ರಮದಿ ನಗುತಿರುವ ಜೀವಿಯೇ
ಮರಣಮಸಣಗಳೆರಡು ದೂರವಿಲ್ಲ
ಈ ಜಗವ ಮೂದಲಿಸಿ ಗೋಗರೆವ ಜೀವವೇ
ಆ ಜಗದ ಮೇರೆಯೂ ದೂರವಿಲ್ಲ''

ಇಂಥ ಸಾಲುಗಳಲ್ಲಿ ಬದುಕಿನ ರಹಸ್ಯಗಳನ್ನು ಕುರಿತು ಸಂಕೀರ್ಣತೆಯ ಚಿತ್ರ ಮೂಡುವುದನ್ನು ಕಾಣಬಹುದು. ಮತ್ತೊಂದು ಕವಿತೆಯ ಸಾಲುಗಳಲ್ಲಿ ಮೂಡಿ ಬರುವ ಮೇಘಮಾಲೆ ಶೈಲಮಾಲೆಗಳ ಸಂಧ್ಯಾರುಣ ಛಾಯೆಯ ಚಿತ್ರವನ್ನು ಗಮನಿಸಬಹುದು.

‘‘ಭುವಿ ಬಾನಿನ ಭೇದವನ್ನೇ ಮರೆಸಿತು!
ಬೋಳುದಲೆ ಬೆಟ್ಟ ವ್ಯೋಮಕೇಶಿಯಾಯಿತು;
ಪ್ರಿಯನೆಲವು ಹಿಡಿಂಬೀ–ಪ್ರಿಯನಾಯಿತು!
ಮೇಘಮಾಲೆ ಕರಗಿದೊಡನೆ ಹಿಂದಣ ಸಂಧ್ಯಾರುಣ ಛಾಯೆಯಿಂದ
ಕೀಚಕಾರುಣ ರಕ್ತ ರಂಜಿತ ಭೀಮನಾಯಿತು.
ಎಲ್ಲಿಹಳು ಬೆಂಕಿ ಸೀರೆಯ, ಉರಿಯ–ರವಿಕೆಯ
ದ್ರೌಪದಿ? ಬಣ್ಣಿಸೆ ಸಾಲದೀ ಬಡ ಚೌಪದಿ’’

ಸಂಜೆಯಲ್ಲಿ ಮಳೆ ಸುರಿದಾಗ ಕುಮಾರವ್ಯಾಸನ ಕಾವ್ಯದ ಸ್ಮರಣೆಯೊಂದಿಗೆ ಅರಳಿಕೊಳ್ಳುವ ಈ ಚಿತ್ರ ಒಂದು ವಿಚಿತ್ರವಾದ ರುಚಿಯನ್ನು ತೋರುತ್ತದೆ.

## ಕಲ್ಲೋಲಮಾಲೆ

ಇವರ ‘ಕಲ್ಲೋಲಮಾಲೆ’ ಮುಕ್ತಕ ಜಾತಿಯ ಅನುಭವಗೀತೆಗಳ ಸಂಕಲನವಾಗಿದೆ. ಉದಾಹರಣೆಗೆ ಈ ಪದ್ಯಭಾಗಗಳನ್ನು ಗಮನಿಸ ಬಹುದು.

೧. ಬೆಳೆವುದದು ಭೂಮಿಗುಣ
ಬೆಳೆದು ಬೆಳಕಾಗುವುದೇ ಬಾಳಗುಣವು
ಮೊಳೆವುದದು ಬೀಜಗುಣ
ಬೆಳೆದು ಸವಿಯಾಗುವುದೇ ಕಾಳಗುಣವು
ಉರಿವುದದು ಅಗ್ನಿಗುಣ
ಉರಿದು ಬೆಳಕಾಗುವುದೆ ಜ್ಯೋತಿಗುಣವು
ಸವಿಯಹುದು ನುಡಿಯ ಗುಣ
ಸವಿಯು ಬೆಳಕಾಗುವುದೇ ಗೀತ ಗುಣವು

೨. ಈ ವನದಿ ಮಂದಾರ
ಆಗೊಮ್ಮೆ ಈಗೊಮ್ಮೆ
ಈ ಮನೆಯ ಸಿಂಗಾರ



ಆಗೊಮ್ಮೆ ಈಗೊಮ್ಮೆ
ಈಮನದ ಝೇಂಕಾರ
ಆಗೊಮ್ಮೆ ಈಗೊಮ್ಮೆ
ಆನಂದದವತಾರ
ಆಗೊಮ್ಮೆ ಈಗೊಮ್ಮೆ
ಒಳ್ಳೆಯದೆಲ್ಲವು
ಆಗೊಮ್ಮೆ ಈಗೊಮ್ಮೆ
ಜೀವನವು ಸಾಗುವುದು
ಆಗೊಮ್ಮೆ ಈಗೊಮ್ಮೆ

೩. ಮಾನವರು ಕೆಟ್ಟಾರು
ಮಾನವತೆ ಉಳಿದೀತು
ಕವಿದೇಹ ಬಿಟ್ಟಾನು
ಕವಿತೆಯುಳಿದೀತು
ಕೃತಿಗಿಳಿಯದಿದ್ದರೂ
ಕನಸೊಂದು ಉಳಿದೀತು
ಅದನ್ನುಂಡೆ ಬರಲಿರುವ
ಮನಸು ಬೆಳೆದೀತು.

ಈ ಮೂರು ಪದ್ಯಗಳೂ ಅದ್ಭುತವಾದ ಗೇಯ ಗುಣಗಳನ್ನು ಪಡೆದವುಗಳಾಗಿವೆ. ಎರಡನೆಯ ಪದ್ಯದ ಲಯವಂತೂ ಈ ಬದುಕಿನ ಅನುಭವಗಳಲ್ಲಿ ಪ್ರಾಪ್ತವಾಗುವ ಸ್ಥಿತ್ಯಂತರಗಳನ್ನು ಅದ್ಭುತವಾಗಿ ವ್ಯಕ್ತಪಡಿಸುತ್ತದೆ. ಮೂರನೆಯ ಉದಾಹರಣೆ ಅತ್ಯಂತ ಸುಂದರವಾದ ಕಾವ್ಯಾಭಿವ್ಯಕ್ತಿಯನ್ನು ಪಡೆದಿರುವ ಕವಿಯ ಆಶಯವಾಗಿದೆ. ಈ ಆಶಯ ಕೇವಲ ಆಶಯವಾಗಿಲ್ಲ ಭರವಸೆಯನ್ನು ಬಿತ್ತುವುದಾಗಿದೆ. ಈ ಭರವಸೆಯೇ ಬದುಕಿಗೆ ಬುತ್ತಿ, ಮನುಷ್ಯರು ಎಷ್ಟೇ ಹಾಳಾಗಲು ಪ್ರಯತ್ನಿಸಬಹುದು; ಆದರೆ ಆಳದಲ್ಲಿರುವ ಮಾನವೀಯತೆ ಉಳಿದೇ ಉಳಿಯುತ್ತದೆ ಎನ್ನುವುದು ನಿರಾಶೆಯ ಕತ್ತಲಿನಲ್ಲಿ ಆಶೆಯ ಕಿರಣವನ್ನು ಹೊತ್ತಿಸುತ್ತದೆ. ಕವಿ ಸತ್ತರೂ

ಕಾವ್ಯ ಉಳಿದುಕೊಳ್ಳುವ ವಿಚಿತ್ರದ ಜೊತೆಗೆ ಕೃತಿಗಿಳಿಯದ ಕವಿಯ ಕನಸು ನಮ್ಮ ಸುತ್ತ ಉಳಿದು ಸುಳಿದಾಡುತ್ತಲೇ ಇರುತ್ತದೆ ಎನ್ನುವ ಕಲ್ಪನೆ ಚೇತೋಹಾರಿಯಾಗಿದ್ದು ಬಹುಶಃ ಸಿದ್ಧಯ್ಯ ಪುರಾಣಿಕರ ವಚನ ಸೃಷ್ಟಿಯ ಮುಂಬೆಳಕು ಇಲ್ಲಿ ಚುಮುಚುಮುಗುಟ್ಟುತ್ತಿದೆ ಎಂದು ತೋರುತ್ತದೆ.

## ಚರಗ ಮತ್ತು ಹಾಲ್ದೆನೆ

'ಚರಗ ಮತ್ತು ಹಾಲ್ದೆನೆ' ಎಂಬವು ಇವರ ಇನ್ನೆರಡು ಕವನ ಸಂಕಲನಗಳು. ಚರಗದಲ್ಲಿ ಬರುವ 'ಕಾವ್ಯಾನಂದ ಕಾಣೆಯಾಗಿದ್ದಾನೆ' ಎಂಬ ಕವಿತೆ ಕುತೂಹಲಕಾರಿಯಾಗಿದೆ. ೧೯೮೧ರಲ್ಲಿ ಆತ್ಮವೃತ್ತವನ್ನು ಬರೆಯುತ್ತ ಇನ್ನೊಂದು ಕವನ  ಸಂಕಲನವನ್ನು ಬರೆಯುವ ಸೂಚನೆ ಕೊಟ್ಟಿದ್ದರು. ಬಹುಶಃ ಕವಿಯಾದ ಕಾವ್ಯಾನಂದ ಸಿದ್ಧಯ್ಯ ಪುರಾಣಿಕರಿಗೆ ಕೊನೆಗಾಲದಲ್ಲಿ ಕೈಕೊಟ್ಟಿರಬಹುದು. ಅದಕ್ಕೆ ಅವರು ಹೇಳುತ್ತಾರೆ:

''ಎಂಥ ವಿಚಿತ್ರ ವ್ಯಕ್ತಿ ಈ ಕಾವ್ಯಾನಂದ. ದಡದಡ ಬಂದ ಬಡಬಡ ಹೋದ.'' ಇದ್ದಕ್ಕಿದ್ದಂತೆ ಯಾಕೆ ಹೊರಟು ಹೋಗಿರಬಹುದು? ಈ ಸಾಲುಗಳಲ್ಲಿ ದೂರವಾಗುತ್ತಿರುವ ಕಾವ್ಯಶಕ್ತಿಯ ಬಗ್ಗೆ ಗಂಭೀರವಾಗಿ ಆದರೆ ವೈನೋದಿಕ ರೀತಿಯಲ್ಲಿ ಚಿಂತಿಸಿದ್ದಾರೆ. ಚರಗ ಹಾಗೂ ಹಾಲ್ದೆನೆಗಳು ಮೊದಲ ಕವನ ಸಂಕಲನಗಳ ಕಾವನ್ನು ಉಳಿಸಿಕೊಂಡಿಲ್ಲ ಎಂಬುದು ಒಂದು ಅಂಶವಾದರೆ, ಇನ್ನೊಂದು ಮುಖ್ಯವಾದ ಅಂಶ, ಸಿದ್ಧಯ್ಯ ಪುರಾಣಿಕರು ವಚನ ರಚನೆಯ ಕಡೆಗೆ ಸಂಪೂರ್ಣವಾಗಿ ಹೊರಳಿಬಿಟ್ಟರು.

## ಕಥಾ ಸಂಕಲನಗಳು

ಡಾ|| ಸಿದ್ಧಯ್ಯ ಪುರಾಣಿಕರು ಎರಡು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಕಥಾಮಂಜರಿ' ಮತ್ತು 'ತುಷಾರಹಾರ' ಇವು ಅವರ ಕಥಾ ಸಂಕಲನಗಳು. ತುಷಾರಹಾರ ನಲವತ್ತೊಂದು ಕಿರುಕಥೆಗಳಿಂದ ಕೂಡಿದ ಸಂಕಲನ. ಆಶ್ಚರ್ಯದ ಮಾತೆಂದರೆ ಕನ್ನಡಿಗರ ಲಕ್ಷ್ಯ ಈ ಸಂಕಲನದ ಕಡೆಗೆ ಹೊರಳದೇ ಇರುವುದು. ತಲೆಗೇರಿ ಫಲವಿಲ್ಲ, ಕಿರಿಯರ ಹಿರಿಮೆ ಕಾಣದ ಕನ್ನಡಕಗಳನ್ನು ಕಳಚಿಹಾಕಿತು. ಇಂಥ ಕಿರುಕಥೆಗಳು ಪುರಾಣ ಸೃಷ್ಟಿಯ ಪ್ರಯತ್ನದತ್ತ ಹೊರಳಿವೆ. ಒಂದರ್ಥದಲ್ಲಿ ರಾಮಕೃಷ್ಣ



ಪರಮಹಂಸರ ಹಾಗೂ ಭಗವಾನ್ ಬುದ್ಧನ ಸಾಮತಿಯ ಕಥೆಗಳನ್ನು ಇವು ಹೋಲುತ್ತವೆ. ಸಿದ್ಧಯ್ಯ ಪುರಾಣಿಕರ ಕಲ್ಪಕತೆ ಇಲ್ಲಿ ಚಿಗುರಿಟ್ಟಿದೆ.

## ಐತಿಹಾಸಿಕ ಕಾದಂಬರಿ

ಸಿದ್ಧಯ್ಯ ಪುರಾಣಿಕರು 'ತ್ರಿಭುವನ ಮಲ್ಲ' ಎಂಬ ಐತಿಹಾಸಿಕ ಕಾದಂಬರಿಯನ್ನು ಬರೆದಿದ್ದಾರೆ. ಆರನೆಯ ವಿಕ್ರಮಾದಿತ್ಯನಾದ ತ್ರಿಭುವನಮಲ್ಲನನ್ನು ಕುರಿತ ಕಾದಂಬರಿ ಇದು. ಕರ್ನಾಟಕದ ಇತಿಹಾಸದ ತ್ರಿಭುವನಮಲ್ಲನ ಬದುಕು ಬಹಳ ಪ್ರಮುಖವಾದುದಾಗಿದೆ. ಅಣ್ಣನ ನಂತರ ತಾನೇ ಸಿಂಹಾಸನವನ್ನೇರಿದ ತ್ರಿಭುವನಮಲ್ಲ ಚೋಳರು, ಲಾಟರು, ಪಾಂಡ್ಯರು ಇವರನ್ನು ಸೋಲಿಸಿದ ಕಥೆ ಇಲ್ಲಿದೆ. ಆದರೆ ಈ ಕಾದಂಬರಿಯಲ್ಲಿ ಅತಿಯಾದ ಪಾತ್ರಗಳ ದಟ್ಟಣೆಯಿದ್ದು ಅವು ಅತಿಯಾದ ಆದರ್ಶ ಅಥವಾ ಅತಿಯಾದ ವೀರತ್ವ ಗುಣಗಳನ್ನು ಪಡೆದು ಅವಾಸ್ತವವಾಗಿಬಿಡುತ್ತವೆ. ವರ್ಣನೆಗಳಲ್ಲಿ ಅತ್ಯುಕ್ತಿ ತುಂಬಿಕೊಳ್ಳುತ್ತದೆ. ಇಷ್ಟೆಲ್ಲಾ ಇದ್ದರೂ ಚಕ್ರವರ್ತಿಯ ಆಚಾರ್ಯ ವಿಜ್ಞೇಶ್ವರನ ಪಾತ್ರ ತನ್ನ ಆದರ್ಶ ಗುಣಗಳೊಂದಿಗೆ ನಮ್ಮ ಸಂಸ್ಕೃತಿಯ ಜೀವಂತ ಪರಂಪರೆಯನ್ನು ವರ್ಣಿಸುವ ಪಾತ್ರವಾಗಿ ಆಕರ್ಷಕವಾಗುತ್ತದೆ.

## ನಾಟಕಗಳು

ಡಾ|| ಸಿದ್ಧಯ್ಯ ಪುರಾಣಿಕರು ನಾಟಕ ಕ್ಷೇತ್ರದಲ್ಲಿ ಕೈಯಾಡಿಸಿದ್ದಾರೆ. ವಿದ್ಯಾರ್ಥಿ ದೆಸೆಯಲ್ಲಿಯೇ ತಮ್ಮ ತಂದೆಯವರಿಂದ ಪಡೆದ ಪ್ರೇರಣೆ ಕಾರಣವಾಗಿ ನಾಟಕಗಳಲ್ಲಿ ಅಭಿನಯಿಸಿ ಸೈ ಎನಿಸಿಕೊಂಡಿದ್ದವರು ಪುರಾಣಿಕರು. ವಿದ್ಯಾರ್ಥಿಯಾಗಿದ್ದಾಗಲೇ ೧೯೩೭ರಲ್ಲಿ 'ಆತ್ಮಾರ್ಪಣೆ' ಎಂಬ ನಾಟಕವನ್ನು ಅವರು ಬರೆದಿದ್ದರು. ಅದು ಬಸವಣ್ಣನವರ ಬದುಕಿಗೆ ಸಂಬಂಧಿಸಿದ ನಾಟಕವಾಗಿದ್ದು ಜನರ ಮನಸ್ಸನ್ನು ಸೆಳೆದಿದ್ದಿತು. ಅದಾದ ಮೇಲೆ ಪುರಾಣಿಕರು 'ರಜತರೇಖೆ' ಎಂಬ ರೂಪಕಗಳ ಸಂಕಲನವೊಂದನ್ನು ಪ್ರಕಟಿಸಿದರು. ಮಧುಮಹೋತ್ಸವ, ಮೋಹನಮಂತ್ರ, ಮಾಯಾ ಕೋಲಾಹಲ, ಷಾಗೆ ಶ್ರದ್ಧಾಂಜಲಿ, ತುಂಗಭದ್ರೆ, ಮಂಗಲೆ, ದುಃಖಸೇತು, ರಜತರೇಖೆ ಮತ್ತು ಗಿರಿಜೆಯ ಗೆಲವು ಇವು ಈ ಸಂಕಲನದಲ್ಲಿರುವ

ರೂಪಕಗಳು.ಇವು ಪ್ರಸಾರಕ್ಕೆಂದು ಬರೆದರೂ ಬಾನುಲಿ ನಾಟಕಗಳಾಗಿಯೂ ಯಶಸ್ಸನ್ನು ಪಡೆದಿದ್ದು, ಇದಾದ ಮೇಲೆ ೧೯೬೩ರಲ್ಲಿ 'ಭಾರತ ವೀರ' ಎಂಬ ಐತಿಹಾಸಿಕ ನಾಟಕವನ್ನು ಬರೆದರು. ಈ ನಾಟಕಕ್ಕೆ ಒಂದು ಐತಿಹಾಸಿಕವಾದ ಮಹತ್ವವಿದೆ. ಚೀನಾ–ಭಾರತದ ಮೇಲೆ ದಂಡೆತ್ತಿ ಬಂದು ಭಾರತದ ಬೆನ್ನಿಗೆ ಚೂರಿ ಹಾಕಿದ್ದ ಹಿನ್ನೆಲೆಯಲ್ಲಿ ರಚಿತವಾದುದು ಈ ನಾಟಕ. ಇದಕ್ಕಾಗಿ ಸಿದ್ಧಯ್ಯನವರು ತುಂಬಾ ಅರ್ಥಪೂರ್ಣವಾದ ಐತಿಹಾಸಿಕ ವಿಷಯವನ್ನು ಇಲ್ಲಿ ಆರಿಸಿಕೊಂಡಿದ್ದಾರೆ.ಬಾಣರ ಮಿಹಿರಕುಲ ಕಾಶ್ಮೀರವನ್ನು ಕಬಳಿಸಿದುದೇ ಅಲ್ಲದೇ ಬೌದ್ಧರಿಗೆ ಹಿಂಸೆಯನ್ನು ನೀಡಿದ ಕುಟಿಲ ವ್ಯಕ್ತಿ. ಈ ವಸ್ತು ಸಿದ್ಧಯ್ಯ ಪುರಾಣಿಕರಿಗೆ ತುಂಬಾ ಉಪಯುಕ್ತವಾಗಿ ಕಾಣಿಸಿತು. ಏಕೆಂದರೆ ಈ ಐತಿಹಾಸಿಕ ಸಂಗತಿಯಲ್ಲಿ ಮಿಹಿರಕುಲ ಬಾಲಾದಿತ್ಯನಿಂದ ಸೋಲನ್ನೊಪ್ಪುತ್ತಾನೆ. ಹೀಗೆ ಸೋಲೊಪ್ಪುವಾಗ ದಾಳಿ ಮಾಡಿದವನು ಮಿಹಿರಕುಲನೇ ಎಂಬುದನ್ನು ಮರೆಯಬಾರದು. ಸಿದ್ಧಯ್ಯ ಪುರಾಣಿಕರು ಬಾಂಡುಂಗ್ ಸಮ್ಮೇಳನದಲ್ಲಿ ಪಂಚಶೀಲತತ್ತ್ವಕ್ಕೆ ಒಪ್ಪಿಗೆ ನೀಡಿದ ಚೀನಿಯರು ಭಾರತಕ್ಕೆ ದ್ರೋಹ ಬಗೆದು ಭಾರತದ ಸಮೀಪದ ಟಿಬೆಟ್ಟನ್ನು ಹಾಗೂ ಭಾರತದ ಉತ್ತರದ ಗಡಿಗಳನ್ನು ಕಬಳಿಸಲು ಮುನ್ನುಗ್ಗಿದ್ದರು. ಈ ಚೀನಿಯರ ವರ್ತನೆಯನ್ನು ಹಾಗೂ ಭಾರತೀಯರ ಗೆಲುವಿನ ಧ್ವನಿಯನ್ನು ಸೂಚಿಸುವುದಕ್ಕಾಗಿಯೇ ಈ ನಾಟಕವನ್ನು ರಚಿಸಿದ್ದಾರೆ. ಮಿಹಿರಕುಲನ ದಾಳಿಯನ್ನು ಎದುರಿಸುವಲ್ಲಿ ಭಾರತೀಯರು ಪ್ರತಿಸ್ಪಂದಿಸಿದ ರೀತಿಯನ್ನು ಪುರಾಣಿಕರು ಗ್ರಹಿಸಿದ ರೀತಿ ಆಕರ್ಷಕವಾದುದು. ಚೀನಿಯರ ದಾಳಿಯ ಸಂದರ್ಭದಲ್ಲಿ ಇಡೀ ಭಾರತ ಜಾತಿ, ಮತ, ಪಕ್ಷ, ಅಂತಸ್ತುಗಳ ಭೇದವಿಲ್ಲದೆ ಒಂದಾಗಿ ನಿಂತಿದ್ದನ್ನು ಸಿದ್ಧಯ್ಯ ಪುರಾಣಿಕರು ಈ ನಾಟಕದಲ್ಲಿ ವ್ಯಂಜಿಸಲು ಬಯಸಿದ್ದಾರೆ. ಇದು ಐತಿಹಾಸಿಕ ಮಹತ್ವ ಪಡೆದ ಒಂದು ನಾಟಕವಾಗಿದೆ.

ಇದನ್ನು ರಂಗದ ಮೇಲೆ ಪ್ರಯೋಗಿಸಿದರೆ ಇದರ ಗುಣಮೌಲ್ಯವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾದೀತೇನೋ.



## ಶಿಶು ಸಾಹಿತ್ಯ

ಸಿದ್ಧಯ್ಯ ಪುರಾಣಿಕರು ಮಕ್ಕಳ ಸಾಹಿತ್ಯಕ್ಕಾಗಿ ಮಾಡಿರುವ ಸೇವೆ ಗಮನಾರ್ಹವಾದುದು. ಒಂದು ನಾಟಕ ಹಾಗೂ ನಾಲ್ಕು ಕವನ ಸಂಕಲನ, ಒಂದು ಪ್ರವಾಸವನ್ನು ಕುರಿತ ಕೃತಿ–ಹೀಗೆ ಮಕ್ಕಳಿಗಾಗಿ ಇವರು ಸಾಹಿತ್ಯ ರಚಿಸಿದ್ದಾರೆ. ಇವರ ಪ್ರಕಟಿತ ಪ್ರಥಮ ಸಂಕಲನ 'ತುಪ್ಪ ರೊಟ್ಟಿಗೆ ಗೇ' ಕವನ ಸಂಕಲನಕ್ಕೆ ಭಾರತ ಸರ್ಕಾರದ ಬಹುಮಾನ ಬಂದಿದೆ. ನನ್ನ ಕುದುರೆ ಎನ್ನುವ ಕವಿತೆ ತುಂಬ ಸೊಗಸಾದ ಶಿಶುಗೀತೆಯಾಗಿದೆ. ಅಜ್ಜನ ಕೋಲನ್ನು ಹಿಡಿದುಕೊಂಡು ಹುಡುಗ ಅದನ್ನೇ ಒಂದು ಕುದುರೆಯೆಂದು ಭಾವಿಸಿ ಕಲ್ಪನೆಯ ಲೋಕದಲ್ಲಿ ಕುಣಿದಾಡುವ ಚಿತ್ರವನ್ನೊಳಗೊಂಡ ಈ ಕವಿತೆ ಮಕ್ಕಳ ಲೋಕದ ಒಂದು ಸುಂದರ ಚಿತ್ರ. ಈ ಕುದುರೆಯನ್ನು ಹೆಜ್ಜೆ–ಹೆಜ್ಜೆಗೂ ಕುಣಿಯುವ ಕುದುರೆ ಎಂದು ಭಾವಿಸಿ ಹುಡುಗ ಕುಣಿದಾಡುವ ರೀತಿಯನ್ನು ರೀತಿಯ ಸವಿಯನ್ನು ಪದ್ಯವನ್ನೋದಿಯೇ ಸವಿಯಬೇಕು.

''ಅಜ್ಜನ ಕೋಲಿದು ನನ್ನಯ ಕುದುರೆ
ಹೆಜ್ಜೆ ಹೆಜ್ಜೆಗೆ ಕುಣಿಯುವ ಕುದುರೆ
ಕಾಲಿಲ್ಲದೆಯೇ ನಡೆಯುವ ಕುದುರೆ
ಕೂಳಿಲ್ಲದೆಯೇ ಬದುಕುವ ಕುದುರೆ
ನಾಲನು ಬಡಿಸದ ಜೂಲವ ಹೊದಿಸದ
ಲಾಲನೆ ಪಾಲನೆ ಬಯಸದ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ.

ಚಂದಪ್ಪನಿಗೆ ಚಿಗರೆಯೆ ಕುದುರೆ
ಮಾದೇವನಿಗೆ ನಂದಿಯೆ ಕುದುರೆ
ರಾಮಚಂದ್ರನಿಗೆ ಹನುಮನೆ ಕುದುರೆ
ಹೊಟ್ಟೆಯ ಗಣಪಗೆ ಇಲಿಯೇ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ

ನಿಂತರೆ ನಿಲ್ಲುವ ಒಳ್ಳೆಯ ಕುದುರೆ
ಓಡಿದರೋಡುವ ನನ್ನಿಯ ಕುದುರೆ
ಕಾಡದ ಬೇಡದ ಕರುಳಿನ ಕುದುರೆ
ನೋಡಲು ಬಿಡದಿಹ ಬೆತ್ತದ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ

ಅರಬರ ದೇಶದಿ ದೊರೆಯದ ಕುದುರೆ
ಕಾಠೇವಾಡದಿ ಕಾಣದ ಕುದುರೆ
ಅರಸುಮಕ್ಕಳಿಗು ಸಿಕ್ಕದ ಕುದುರೆ
ನನಗೇ ಸಿಕ್ಕಿದೆ ನನ್ನೀ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ.

ಕೊನೆಯ ಎರಡು ಸಾಲುಗಳಂತೂ ಈ ಶಿಶುಗೀತೆಗೆ ಸೊಗಸಾದ ಮುಕ್ತಾಯವಾಗಿವೆ. ವಾಸ್ತವವಾಗಿ ಸಿದ್ಧಯ್ಯ ಪುರಾಣಿಕರು ಈ ಕವಿತೆಯನ್ನು ಬರೆದದ್ದು ತಮ್ಮ ಗುರುಗಳು ಸಂಕಲಿಸುತ್ತಿದ್ದ ಮಕ್ಕಳ ಕೃತಿಗಾಗಿ. ಆದರೆ ಈ ಕವಿತೆಗೆ ದೊರೆತ ಮೆಚ್ಚುಗೆ ಇವರಲ್ಲಿ ಹೆಚ್ಚಿನ ಸ್ಫೂರ್ತಿಯನ್ನು ಮೂಡಿಸಿತು. ಮಗುವಿನ ಮೊರೆ, ಹೊಗೆಬಂಡಿಯ ಹಾಡು, ಇವರಬಿಟ್ಟು ಇವರ್ಯಾರು ಇಂಥ ಸೊಗಸಾದ ಹಾಡುಗಳಿಗೆ ಕಾರಣವಾಯಿತು.

ಗಿಲ್ ಗಿಲ್ ಗಿಲಿಗಟ್ಟಿ, ತಿರುಗಲೆ ತಿರುಗಲೆ ತಿರುಗುಯ್ಯಾಲೆ, ಬಣ್ಣಬಣ್ಣದ ಓಕುಳೀ ಇವು ಇನ್ನುಳಿದ ಮೂರು ಶಿಶುಗೀತ ಸಂಕಲನಗಳು. ಇವರ ಶಿಶುಗೀತಗಳನ್ನು ಗಮನಿಸುವಾಗ ಎದ್ದುಕಾಣುವ ಒಂದು ವಿಶಿಷ್ಟವಾದ ಅಂಶ ಕನ್ನಡನಾಡಿನ ಕೆಲವು ವೈಶಿಷ್ಟ್ಯಗಳನ್ನು ಕುರಿತದ್ದು. ಕರ್ನಾಟಕದ ಹಣ್ಣುಗಳು, ಕರ್ನಾಟಕದ ಭಕ್ಷ್ಯಗಳು ಹಾಗೂ ಕರ್ನಾಟಕದ ಸಿಹಿತಿಂಡಿಗಳು, ಇವುಗಳನ್ನು ಕುರಿತ ಈ ಮೂರು ಹಾಡುಗಳನ್ನು ಗಮನಿಸೋಣ.

೧. ಗೆಳೆಯರ ಊಟಕೆ ಕರೆಯುವೆನಮ್ಮ
ತರತರದಡುಗೆಯ ಮಾಡಮ್ಮ



ಒಬ್ಬರ ರುಚಿ ಇನ್ನೊಬ್ಬರಿಗಿಲ್ಲವು
ಏನ ಬೇಡಿದರ ನೀಡಮ್ಮ

ಉತ್ತರ ಕರ್ನಾಟಕದ ಗೆಳೆಯರಿಗೆ
ಹೋಳಿಗೆ ಕರಚೀಕಾಯಿ
ಎಳ್ಳು ಹಚ್ಚಿದ ಸಜ್ಜೆಯ ರೊಟ್ಟಿ
ಎಣ್ಣೆಬದನೆಕಾಯಿ
ಮೆಂತೆಯ ಪಲ್ಯ
ಸೌತೆ ಟೊಮಾಟೊ

ಮೂಲಂಗಿಯ ಪಚ್ಚಳಿ
ಅಗಸಿಯ ಚಟ್ನಿ
ಕೆನೆಕೆನೆ ಮೊಸರು
ಬಿಳಿಜೋಳದ ಕಿಚ್ಚಡಿ

ದಕ್ಷಿಣ ಕರ್ನಾಟಕದ ಗೆಳೆಯರಿಗೆ
ಪೇಣಿ–ಚಿರೋಟಿ ಕೀರು
ಇಡ್ಲಿ ಸಾಂಬಾರು ಮಸಾಲೆದೋಸೆಯು
ಮುದ್ದಿ ಅನ್ನ ತಿಳಿಸಾರು
ಪುಳಿಯೋಗರೆ ಬಿಸಿಬೇಳೆಬಾತು ಕೇ
ಸರಿಯಬಾತು ಕೀರಾನ್ನ
ಕೊತ್ತಂಬರಿ ಬೆರಸಿದ ಕೋಸಂಬರಿ
ಬಜ್ಜಿ ಗೊಜ್ಜು ಮೊಸರನ್ನ

ಕೊಡುವ ಗೆಳೆಯನಿಗೆ ತಳಿಯ ಪಟ್ಟು ಕೇ
ರಳದ ಗೆಳೆಯನಿಗೆ ಆಡು

ಯಾರು ಯಾರಿಗೆ ಏನು ಇಷ್ಟವೋ
ಅದನೆ ಅವರಿಗೆ ನೀಡು

ಎಲ್ಲರೂ ಉಂಡು ಕೈತೊಳಕೊಂಡು
ಕುಣಿವೆವು ಸುತ್ತಲು ನಿನ್ನ

ಕೊಂಡಾಡುವೆವು ಮುಂಡಾಡುವೆವು
ಹಾಡಿ ಹೊಗಳುವೆವು ನಿನ್ನ

ನನ್ನಯ ತಾಯಿ ಎಲ್ಲರ ತಾಯಿ
ಆಗಿ ಉಣಿಸುವಳು ನಾಳೆ

ಎಳೆಯರು ನಾವು ಗೆಳೆಯರು ಇಂದು
ಅಣ್ಣತಮ್ಮಂದಿರು ನಾಳೆ.

೨. ಮಿಠಾಯಿ ಮಕ್ಕಳೆ
ಕೊಳ್ಳಿರಿ ಈಗಲೆ
ಬಿಟ್ಟರೆ ಮತ್ತವು ಸಿಗಲಿಕ್ಕಿಲ್ಲ
ಇವುಗಳ ಬೆಲೆಯು ಹೆಚ್ಚಿಲ್ಲ
ಮಿಠಾಯಿ ಮಕ್ಕಳೆ
ಕೊಳ್ಳಿರಿ ಈಗಲೆ.

ಗೋಕಾಕದ ಕರಿದಂಟು
ರಾಜಧಾನಿಯ ಪೆಪ್ಪರಮೆಂಟು
ಬೆಳಗಾವಿಯ ಕುಂದ
ಹೈದರಾಬಾದಿನ ಕಲಕಂದ
ಬಾಯೊಳು ನೀರನು ಬರಿಸುವವು
ಕೈಯೊಳು ಕಾಸನು ತರಿಸುವವು

ಮಿಠಾಯಿ ಮಕ್ಕಳೆ
ಕೊಳ್ಳಿರಿ ಈಗಲೆ
ಬಿಟ್ಟರೆ ಮತ್ತವು ಸಿಗಲಿಕ್ಕಿಲ್ಲ
ಇವುಗಳ ಬೆಲೆಯೂ ಹೆಚ್ಚಿಲ್ಲ
ಧಾರವಾಡದ ಪೇಡೆ



ಬೆಂಗಳೂರಿನ ಪೇಣಿ
ಉತ್ತರದೇಶದ ಬರ್ಫಿ
ಚೌಪಾಟಿಯ ಕುಲ್ಫಿ
ಮಿಠಾಯಿ ಮಕ್ಕಳೆ
ಕೊಳ್ಳಿರಿ ಈಗಲೆ

೩. ನಂಜನಗೂಡು ರಸಬಾಳೆ
ತಂದಿಹೆ ಕೊಡಗಿನ ಕಿತ್ತೀಳೆ
ಬೀದರ್ ಜಿಲ್ಲೆಯ ಸೀಬೆಯ ಹಣ್ಣು
ಬೆಂಗಳೂರಿನ ಸೇಬಿನ ಹಣ್ಣು
ಕೊಳ್ಳಿರಿ ಹಿಗ್ಗನು ಹರಿಸುವವು
ಕಲ್ಲುಸಕ್ಕರೆಯ ಮರೆಸುವವು.

ಕೊಳ್ಳಿರಿ ಮಧುಗಿರಿ ದಾಳಿಂಬೆ
ಬೆಳವಲ ಬಯಲಿನ ಸಿಹಿಲಿಂಬೆ
ಬೆಳಗಾವಿಯ ಸವಿ ಸಪ್ಪೋಟ
ದೇವನಹಳ್ಳಿಯ ಚಕ್ಕೋತ
ನಾಲಿಗೆ ಬರುವನು ಕಳೆಯುವವು
ದೇಹದ ಬಲವನು ಬೆಳೆಸುವವು

ಗಂಜಾಮ್ ಅಂಜೀರ ತುಮಕೂರು ಹಲಸು
ಧಾರವಾಡದ ಆಪೂಸು
ಮಲೆನಾಡಿನ ಅನನ್ನಾಸು
ಕೊಳ್ಳಿರಿ ಮರೆತು ಸಿಹಿತಿನಿಸು
ಸವಿಯಿರಿ ಬಗೆಬಗೆ ಹಣ್ಣುಗಳ
ಕನ್ನಡ ನಾಡಿನ ಹಣ್ಣುಗಳ.

ಈ ಮೂರು ಕವಿತೆಗಳನ್ನು ಕನ್ನಡ ನಾಡಿನ ಭಕ್ಷ್ಯ, ಸಿಹಿ ತಿನಿಸುಗಳು ಹಾಗೂ ಹಣ್ಣುಗಳನ್ನು ನೆನೆದು ಮನಸ್ಸು ಅವುಗಳ ಸವಿಗೆ ಮೊಲಕು

ಹಾಕುವಂತೆ ಮಾಡುತ್ತವೆ. ಈ ಒಂದೊಂದು ಭಕ್ಷ್ಯ ಅಥವಾ ಹಣ್ಣು ಅಥವಾ ಸಿಹಿ ತಿಂಡಿಯ ನೆನಪು ಹಾಡಹಾಡುತ್ತಾ ಮಕ್ಕಳ ಮನಸ್ಸಿನಲ್ಲಿ ಮಧುರವಾದ ವಾತಾವರಣವೊಂದನ್ನು ನಿರ್ಮಾಣ ಮಾಡುತ್ತದೆ.

ಕೂಸುಮರಿಯಾಟ, ಬುಡಬುಡಿಕೆ, ಕರಡಿ ಕುಣಿತ ಇಂಥ ಗೀತೆಗಳನ್ನು ಸಮರ್ಪಿಸಿದುದಲ್ಲದೆ ಒಗಟಿನ ಹಾಡುಗಳನ್ನು ಬರೆದಿರುವ ಪುರಾಣಿಕರು ಶಿಶುಸಾಹಿತ್ಯಕ್ಕೆ ಕೊಟ್ಟಿರುವ ಕಾಣಿಕೆ ಅಮೂಲ್ಯವಾದುದು ಎನ್ನಬೇಕು. ನ್ಯಾಯನಿರ್ಣಯ ಎನ್ನುವ ನಾಟಕವನ್ನು ಡಾ. ಸಿದ್ಧಯ್ಯ ಪುರಾಣಿಕರು ಮಕ್ಕಳಿಗಾಗಿ ಬರೆದಿದ್ದಾರೆ. ಅರೇಬಿಯನ್ ನೈಟ್ಸ್‌ನ ಕಥೆಯೊಂದರ ಆಧಾರದಿಂದ ಬರೆದಿರುವ ನಾಟಕ ಇದು.

## ಕಿರು ಪ್ರವಾಸ ಸಾಹಿತ್ಯ

'ಮಕ್ಕಳ ಲೋಕಕ್ಕೆ ಸಂಚಾರ' ಒಂದರ್ಥದಲ್ಲಿ ಪ್ರವಾಸ ಸಾಹಿತ್ಯಕ್ಕೆ ಸೇರುವ ಕೃತಿ. ಪ್ರವಾಸ ಸಾಹಿತ್ಯವನ್ನು ಹಾಗೂ ಆಡಳಿತದ ಅನುಭವವನ್ನು ಬರೆಯಬೇಕಾಗಿತ್ತೆಂಬ ಆಸೆಯನ್ನು ತಮ್ಮ ಆತ್ಮಚರಿತ್ರೆಯಲ್ಲಿ ಅವರು ತೋಡಿಕೊಂಡಿದ್ದಾರೆ. ಒಂದರ್ಥದಲ್ಲಿ ಪ್ರವಾಸಕ್ಕೆ ಸಂಬಂಧಿಸಿದ ಕಿರು ಕೃತಿಯಾಗಿ 'ಮಕ್ಕಳ ಲೋಕಕ್ಕೆ ಸಂಚಾರ' ರಚಿತವಾಗಿದೆ. ಅಮೇರಿಕೆಯ ಪ್ರವಾಸವನ್ನು ಕೈಗೊಂಡಿದ್ದ ಪುರಾಣಿಕರು ಅಲ್ಲಿ ಅವರು ಕಂಡ ಶುಕವನ, ಸಮುದ್ರಲೋಕ, ಕಾಡುಮನೆ, ವಾಲ್ಟ್ ಡಿಸ್ನಿಲೋಕ, ಗ್ರ್ಯಾಂಡ್‌ಕ್ಯಾನ್ಯನ್, ಲೂರೇ-ಗುಹೆಗಳು ಬಹುದೊಡ್ಡ ವಿಜ್ಞಾನವ್ಯೂಹ, ನಯಾಗರ ನೀರುಬೀಳು-ಈ ವಿಷಯಗಳನ್ನು ಕುರಿತು ಪ್ರವಾಸ ಕಾಲದಲ್ಲಿ ಕಂಡ ಅವುಗಳ ವೈಶಿಷ್ಟ್ಯಗಳನ್ನು ಮಕ್ಕಳಿಗಾಗಿ ಬರೆದಿದ್ದಾರೆ. ಇಲ್ಲಿರುವ ವಿಷಯಗಳು ಮಕ್ಕಳು ಮತ್ತು ದೊಡ್ಡವರನ್ನು ಕೂಡಿಯೆ ಆಕರ್ಷಿಸುವಂತಿವೆ. ಆದರೆ ಇಲ್ಲಿ ಬರುವ ಈ ಕೆಲವು ಅದ್ಭುತ ರಮ್ಯ ನಿಸರ್ಗದ ಲೀಲಾರಂಗ, ಸರೀಸೃಪಗಳು, ನಿಸರ್ಗ ನಿರ್ಮಿತ ಗುಹೆಗಳು, ಶಿಲ್ಪಶ್ರೀ, ಸುಕುಮಾರಾಕೃತಿಗಳು, ಹೈಡ್ರೋಜಿನ್ ಅಣುವಿನ ಶಾಖಪ್ರಸಾರಣಾಂಶ-ಇಂಥ ಪದಪುಂಜಗಳು ಮಕ್ಕಳಿಗೆ ನಿಜವಾಗಿಯೂ ಭಾರವಾಗುತ್ತವೆ. ಗ್ಯಾಲಕ್ಸಿ, ಬೆಳಕಿನ ವರ್ಷ- ಈ ಪಾರಿಭಾಷಿಕ ಪದಗಳ ವಿವರಣೆಯನ್ನು ಬಯಸುತ್ತವೆ. 'ಕುಸುರಿಸಿದ



ಕಲಾಕೃತಿಗಳು ಬೆರಗಿನಿಂದ ನಿಬ್ಬೆರಗಿಗೆ ಕರೆದೊಯ್ಯುತ್ತವೆ ನೋಡುವವರನ್ನು' ಇಂಥ ಸುಂದರವಾದ ವಾಕ್ಯಗಳು ಮಕ್ಕಳ ಲೋಕಕ್ಕೆ ಸ್ವಲ್ಪ ಹೊರತಾಗಿಯೇ ಬಿಡುವಂತೆ ಭಾಸವಾಗುತ್ತವೆ.

'ಭಾರತವೆಲ್ಲಕೆ ಬಾವುಟವೊಂದೇ' ಎಂಬ ಪದ್ಯ ಸಂಕಲನವನ್ನು ಪುರಾಣಿಕರು ರಚಿಸಿದ್ದಾರೆ. ಮೂವರು ಸಂತ ಕವಿಗಳು ಸಂಕಲನವನ್ನು ಮಕ್ಕಳಿಗಾಗಿ ಭಾರತ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯ ಪ್ರಕಟಿಸಿದ್ದು, ಅದರಲ್ಲಿರುವ ಮೊದಲ ಸಂತ-ಸರ್ವಜ್ಞನ ವ್ಯಕ್ತಿಚಿತ್ರ ಡಾ. ಸಿದ್ಧಯ್ಯ ಪುರಾಣಿಕರು ಬರೆದುದು. ಉದ್ದೇಶಕ್ಕೆ ತಕ್ಕಂತೆ ಸರಳವಾಗಿದೆ ಈ ವ್ಯಕ್ತಿ ಚಿತ್ರ.

## ಜೀವನ ಚರಿತ್ರೆಗಳು

ಮಕ್ಕಳ ಸಾಹಿತ್ಯ ಆದಮೇಲೆ ಗಮನಾರ್ಹವಾದ ಕೃತಿಗಳು ಜೀವನಚರಿತ್ರೆಗೆ ಸಂಬಂಧಿಸಿದವುಗಳಾಗಿವೆ. ವಜೀರ ಅಕಬರಾಬಾದಿ ಎಂಬುದು ಅನುವಾದಿತ ಜೀವನ ಚರಿತ್ರೆ ಕೃತಿ. ಇದನ್ನುಳಿದು ಏಳು ಜೀವನ ಚರಿತ್ರೆಗಳನ್ನು ಸಿದ್ಧಯ್ಯ ಪುರಾಣಿಕರು ಬರೆದ್ದಿದಾರೆ. ಮಿರ್ಜಾ ಗಾಲಿಬ್, ಸಿದ್ಧರಾಮ, ಮಹಾದೇವಿ, ಹರಡೇಕರ್ ಮಂಜಪ್ಪ, ಬಸವಣ್ಣನವರ ಜೀವನ ಹಾಗೂ ಸಂದೇಶ, ಅಲ್ಲಮಪ್ರಭು ಹಾಗೂ ಶರಣಚರಿತಾಮೃತ ಇವು ಅವರು ಬರೆದ ಜೀವನ ಚರಿತ್ರೆಗಳು. ಸಿದ್ಧರಾಮ-ಭಾರತ ಭಾರತಿ ಪುಸ್ತಕ ಮಾಲೆಗಾಗಿ ಬರೆದ ಪುಟ್ಟ ಜೀವನ ಚರಿತ್ರೆಯ ಕೃತಿ. ಸಿದ್ಧರಾಮಯ್ಯನನ್ನು ಮಕ್ಕಳಿಗೆ ಪರಿಚಯ ಮಾಡಿಕೊಡುವುದು ಇದರ ಉದ್ದೇಶ. ಮಿರ್ಜಾ ಗಾಲಿಬ್ ಎಂಬುದು ಇದೇ ಮಾಲೆಯಲ್ಲಿಯೇ ಪ್ರಕಟವಾದ ಮತ್ತೊಂದು ಕೃತಿ. ಈ ಕೃತಿ ಗಾಲಿಬ್ ಕವಿಯ ಅತ್ಯಂತ ದಾರುಣವಾದ ವೈಯಕ್ತಿಕ ಜೀವನವನ್ನು ಮನಕರಗುವಂತೆ ಚಿತ್ರಿಸುತ್ತದೆ. ಹಾಗೆಯೇ ಈ ಕವಿಯ ವೈಶಿಷ್ಟ್ಯವನ್ನು ಮನಗಾಣಿಸುತ್ತದೆ. ಮಹಾದೇವಿ ಅಕ್ಕಮಹಾದೇವಿಯ ಜೀವನಚಿತ್ರವನ್ನು ಒಳಗೊಂಡಿದೆ. ಅಲ್ಲಮಪ್ರಭುವನ್ನು ಕುರಿತ ಜೀವನ ಚಿತ್ರವನ್ನು ಒಳಗೊಂಡಿರುವ 'ಅಲ್ಲಮಪ್ರಭುದೇವ' ಜೀವನ ಚರಿತ್ರೆಯಲ್ಲಿ ಪ್ರಭುವಿನ ವ್ಯಕ್ತಿತ್ವ ವಿಕಾಸವಾದ ರೀತಿಗಿಂತ ಹೆಚ್ಚಾಗಿ ಅಲ್ಲಮ ಪ್ರಭುವಿನ

ಸಾಧನೆಗಳ ಕಡೆಗೆ ಕಣ್ಣಾಡಿಸುತ್ತದೆ. ಅನುಭವ ಮಂಟಪದ ಪ್ರಭುವಿನ ಚಿತ್ರ ಸಂಕ್ಷೇಪವಾಗಿ ಇಲ್ಲಿ ಮೂಡಿಬರುತ್ತದೆ. ಈ ಜೀವನ ಚರಿತ್ರೆಯ ಕೊನೆಗೆ ಅನುಬಂಧದಲ್ಲಿ ಅಲ್ಲಮಪ್ರಭುಗಳ ಐವತ್ತನಾಲ್ಕು ಆಯ್ದ ವಚನಗಳನ್ನು ಕೊಡಲಾಗಿದೆ.

ಹರ್ಡೇಕರ್ ಮಂಜಪ್ಪನವರ ಜೀವನ ಚರಿತ್ರೆಯಲ್ಲಿ ಕರ್ನಾಟಕದ ಗಾಂಧಿ ಎನಿಸಿಕೊಂಡ ಮಂಜಪ್ಪನವರ ಸಾಧನೆಗಳ ಕಡೆಗೆ ಲೇಖಕರು ನಮ್ಮ ಗಮನವನ್ನು ಸೆಳೆಯುತ್ತಾರೆ. ವಾಸ್ತವವಾಗಿ ಸಿದ್ಧಯ್ಯ ಪುರಾಣಿಕರು ಇದ್ದಕ್ಕಿದ್ದಂತೆ ಬಂದ ಮದುವೆಯ ಒತ್ತಾಯದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ರಾತ್ರೋ-ರಾತ್ರಿ ಮಂಜಪ್ಪನವರ ಆಲಮಟ್ಟಿ ಆಶ್ರಮವನ್ನು ಸೇರಿದರು. ಮಂಜಪ್ಪನವರ ಆಶ್ರಮದಲ್ಲಿ ಉಳಿದುಕೊಂಡಿದ್ದಾಗ ಒಂದು ವ್ಯಾಸಂಗದ ವರ್ಷವನ್ನು ಅವರು ಕಳೆದುಕೊಂಡದ್ದು ಉಂಟು.ಆದರೆ ಅಲ್ಲಿ ಪಡೆದು ಕೊಂಡದ್ದು ಮಾತ್ರ ಜೀವನದುದ್ದಕ್ಕೂ ನೆನಪಿಸಿರುವಂಥದ್ದು. ವಚನಸಾಹಿತ್ಯ ಮತ್ತು ವಿಶ್ವದ ಶ್ರೇಷ್ಠ ಚಿಂತಕರ ಕೃತಿಗಳ ಸಮುದಾಯ-ಇವುಗಳಿಗೆ ಪುರಾಣಿಕರು ಹೃದಯ ತೆರೆದುಕೊಂಡದ್ದರಿಂದಲೇ ಗಟ್ಟಿಯಾದ ಬದುಕನ್ನು ಬದುಕಲು ಸಾಧ್ಯವಾದದ್ದು. ಪುರಾಣಿಕರ ಬದುಕನ್ನು ರೂಪಿಸಿದವರಲ್ಲಿ ಮಂಜಪ್ಪನವರು ಮುಖ್ಯರು. ವಚನ ರಚನೆಯ ಸ್ಫೂರ್ತಿಯು ಆ ದಿಕ್ಕಿನಿಂದಲೇ ಬಂದಿರಬೇಕು.

ಬಸವಣ್ಣನವರ ಜೀವನ ಹಾಗೂ ಸಂದೇಶ ಎಂಬ ಕೃತಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠ ಏರ್ಪಡಿಸಿದ್ದ ವಿಶೇಷ ಉಪನ್ಯಾಸಗಳ ಕೃತಿ. ಪುರಾಣಿಕರು ಅವರಿಗೆ ಬಂದಿದ್ದ ಬಸವಣ್ಣನವರ ಜೀವನವನ್ನು ಕುರಿತು ಎಲ್ಲ ಕೃತಿಗಳ ಸಾರವನ್ನು ಸಂಗ್ರಹಿಸಿ ಬವಣ್ಣನವರ ಜೀವನದ ಪ್ರಮುಖ ಘಟ್ಟಗಳನ್ನು ಹೆಚ್ಚು ಕಡಿಮೆ ಖಚಿತವಾಗಿ ಗುರುತಿಸಿದ್ದಾರೆ. ಜೊತೆಗೆ ಬಸವಣ್ಣನವರ ಬದುಕಿನ ಸಂದೇಶವನ್ನು ನಿಸ್ಸಂದಿಗ್ಧವಾಗುವಂತೆ ವಿಶದೀಕರಿಸಲು ಯತ್ನಿಸಿದ್ದಾರೆ. ಮಂಜಪ್ಪನವರು ಬರೆದ ಬಸವಣ್ಣನವರ ಜೀವನಚರಿತ್ರೆ, ಎಂ.ಆರ್.ಶ್ರೀಯವರ ಕೃತಿ, ಅಣ್ಣನವರ ವಚನಗಳು ಎಲ್ಲವನ್ನು ಪರಿಶೀಲಿಸಿ ಬಸವಣ್ಣನವರ ಸಂದೇಶ



ಇಂದಿಗೂ ಹೇಗೆ ಪ್ರಸ್ತುತವಾಗಿದೆ ಎಂಬುದನ್ನು ವಿವರಿಸಲು ಯತ್ನಿಸಿದ್ದಾರೆ. ಬಸವಣ್ಣನವರ ಬದುಕು ಮತ್ತು ದರ್ಶನವನ್ನು ಕುರಿತ ಒಂದು ಸಮಗ್ರ ಚಿತ್ರವನ್ನು ಸಂಕ್ಷೇಪವಾಗಿ ನೀಡುವ ಯತ್ನ ಇದಾಗಿದೆ ಎನ್ನಲೇಬೇಕು.

## ಶರಣ ಚರಿತಾಮೃತ

'ಶರಣಚರಿತಾಮೃತ' ಮಾದಾರ ಚನ್ನಯ್ಯನಿಂದ ಹಿಡಿದು ಜಯದೇವ ಜಗದ್ಗುರುಗಳವರೆಗೂ ಲಂಕ್ಕೂ ಹೆಚ್ಚು ಶರಣರನ್ನು ಪರಿಚಯ ಮಾಡಿಕೊಡುವ ಜೀವನ ಚರಿತ್ರೆಗಳ ಕೃತಿಯಾಗಿದೆ. ಈ ಕೃತಿಯನ್ನು ಆಗಿನ ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಗಾಗಿ ಬರೆದಿದ್ದರೂ ಈ ಕೃತಿ ರಚನೆಗಾಗಿ ಡಾ. ಸಿದ್ಧಯ್ಯ ಪುರಾಣಿಕರು ನಡೆಸಿದ ಅಧ್ಯಯನದ ಆಳ ಮತ್ತು ಹರಹುಗಳು ಅದ್ಭುತವಾದವು. ಈ ಚರಿತಾಮೃತದಲ್ಲಿ ಶರಣರ ಬದುಕಿನ ವೈಯಕ್ತಿಕ ಎಳೆ, ಸಾಧನೆ ಹಾಗೂ ಅವರ ವಚನಗಳನ್ನು (ವಚನಕಾರ ರಾಗಿದ್ದರೆ) ನೀಡಿ ಈ ಕೃತಿಯನ್ನು ಒಂದು ರೀತಿಯಲ್ಲಿ ಅಧಿಕೃತವೆನ್ನುವಂತೆ ಮಾಡಿದ್ದಾರೆ. ಶರಣರನ್ನು ಪರಿಚಯಿಸಿದ ರೀತಿ ಸರಳವೂ, ನೇರವೂ, ಪರಿಣಾಮಕಾರಿಯೂ ಆಗಿದ್ದು ಇದರ ವಾಚನೀಯತೆಯನ್ನು ಹೆಚ್ಚಿಸುತ್ತದೆ. ಕವಿಯಾದ ಪುರಾಣಿಕರು ಈ ಕೃತಿಯುದ್ದಕ್ಕೂ ಅಭಿವ್ಯಕ್ತಿಯಲ್ಲಿ ಒಂದು ಬಗೆಯ ಆರ್ದ್ರತೆಯನ್ನು ಉಳಿಸಿಕೊಂಡೇ ಬಂದಿದ್ದಾರೆ. ಉದಾಹರಣೆಗೆ ಮಾದರ ಚನ್ನಯ್ಯನನ್ನು ಪರಿಚಯಿಸುವಾಗ ಕಂಚಿಯಲ್ಲಿ ಕೂಡ ಕನ್ನಡದ ಕಹಳೆ ಮೊಳಗುವಂತೆ ಮಾಡಿದ ಮಹಾತ್ಮನೀತ ಎನ್ನುತ್ತಾರೆ. ಗುಂಡಯ್ಯನನ್ನು ಶಿವನಾಟದ ಸವಿಗಂಡವನು ಎಂದು ಬಣ್ಣಿಸುತ್ತಾರೆ. ಬಾಗಿದ ತಲೆಯ ಮುಗಿದ ಕೈಯ ಬಸವ ಎಂದು ಬಸವನ ವ್ಯಕ್ತಿತ್ವ ಒಳ್ಳೇ ಅಭಿವ್ಯಕ್ತಿ ಪಡೆದಿದ್ದರೆ, ಸಿದ್ಧರಾಮ ಸಮತೆಯ ಗಾರುಡಿಗನಾಗುತ್ತಾನೆ. ಅಕ್ಕಮಹಾದೇವಿ ನೀರ ತಾವರೆಯಾಗುತ್ತಾಳೆ. ವಿವಿಧ ಆಕರಗಳಿಂದ ವಿಷಯಗಳನ್ನು ಸಂಗ್ರಹಿಸಿ ಔಚಿತ್ಯಪೂರ್ಣವಾಗಿ ರೂಪಿತವಾಗಿರುವ ಈ ಕೃತಿ ಶಿವಶರಣರನ್ನು ಕುರಿತ ಒಂದು ಪುಟ್ಟ ವಿಶ್ವಕೋಶವಾಗಿದೆ. ಸಿದ್ಧಯ್ಯ ಪುರಾಣಿಕರ ಹೆಮ್ಮೆಯ ಕೃತಿಗಳಲ್ಲಿ ಇದೂ ಒಂದು. ಬರೆದ ಏಳು ಜೀವನ ಚರಿತ್ರೆಗಳಲ್ಲಿ ಒಂದನ್ನು ಬಿಟ್ಟರೆ ಉಳಿದುವೆಲ್ಲ ಶರಣರನ್ನು ಕುರಿತು ಬರೆದವುಗಳೇ ಆಗಿವೆ ಎಂಬುದು

ಗಮನಾರ್ಹವಾದ ವಿಷಯ. ಸಿದ್ಧಯ್ಯ ಪುರಾಣಿಕರ ಮನಸ್ಸು ಹೃದಯಗಳು ಶರಣರಿಗೆ ಪೂರ್ಣವಾಗಿ ಸೂರೆಹೋಗಿವೆ.

## ಮರುಳಸಿದ್ಧನ ಕಂತೆ

ಡಾ. ಸಿದ್ಧಯ್ಯ ಪುರಾಣಿಕರು ಒಂದು ಚಿಂತನಪರವಾದ ಕಗ್ಗವನ್ನು ರಚಿಸಿದ್ದಾರೆ. 'ಮರುಳಸಿದ್ಧನ ಕಂತೆ'ಯ ಸ್ವಲ್ಪ ಭಾಗ ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾಗಿದ್ದು ೧೯೯೧ರಲ್ಲಿ ೮೦೮ ಚೌಪದಿಗಳ ಸಂಕಲನವಾಗಿ ಪ್ರಕಟವಾಯಿತು. ಸಿದ್ಧಯ್ಯ ಪುರಾಣಿಕರು ಈ ಕೃತಿಯ ಆರಂಭದ 'ಅರಿಕೆ'ಯಲ್ಲಿ ಹೇಳಿರುವ ಮಾತುಗಳು ಗಮನಾರ್ಹವಾಗಿದೆ: ''ಇದು ನನ್ನ ಅನುಭವ ತರಂಗಿಣಿಯ ತೆರೆಗಳ, ಅಧ್ಯಯನ ಪಕ್ಷಿಯ ಗರಿಗಳ ಚಿಂತನಾಂಬರದ ನಿರಿಗಳ ಸಂಗ್ರಹಃ ಪ್ರೇರಣೆ; 'ಮಂಕುತಿಮ್ಮನ ಕಗ್ಗ'ದಿಂದ ಸಮರ್ಥನೆ, ಇದು ಅದರ ಪ್ರತಿಕೃತಿಯಲ್ಲ ಎಂಬುದು.''

'ಮಂಕುತಿಮ್ಮನಿಗೊಬ್ಬ ತಮ್ಮನನು ತಂದಿರುವೆ
ಶಂಕೆ ಬೇಡಿವ ಸ್ಪರ್ಧಿಯಲ್ಲವನಿಗೆ
ಸಂಕಲ್ಪವಿವಗಿಲ್ಲ ವಿಸ್ತರದ ದರ್ಶನದ,
ಡೊಂಕುಗಳೊ? ಸಾಕಷ್ಟು.........ಮರುಳಸಿದ್ಧ'

ಈ ಚೌಪದಿಯ ಜೊತೆಗೆ, ಇದನ್ನೋದಿ ಸಮಯ ವ್ಯರ್ಥವಾಯಿತೆಂಬ ಭಾವನೆ ಬರದಿದ್ದರೆ ನನ್ನ ಹತ್ತು ವರ್ಷಗಳ ಕೃಷಿ ಸಾರ್ಥಕವಾದಂತೆ ಎಂದಿದ್ದಾರೆ. ವಿಷಯಾನುಗುಣ ವರ್ಗೀಕರಣ ಮಾಡಿಲ್ಲ, ಮಾಡುವುದು ಸುಲಭವೆನಿಸಲಿಲ್ಲ ಎಂದು ಹೇಳಿ, ಪುನರುಕ್ತಿಗಳು ಇಲ್ಲವೆನ್ನಲಾರೆ ಎಂದು ನಮ್ರರಾಗಿ ನುಡಿದಿದ್ದಾರೆ. ಈ ಕೃತಿಯಲ್ಲಿ ಮಂಕುತಿಮ್ಮನಿಗೊಬ್ಬ ತಮ್ಮನನ್ನು ತರುವ ಯತ್ನವಿದೆ. ಇಲ್ಲಿಯ ರಚನೆಗಳನ್ನು ಓದುವಾಗ ಶರಣರು, ದಾಸರು ಹಾಗೂ ಡಿ.ವಿ.ಗುಂಡಪ್ಪನವರು ಅಲಲ್ಲಿ ಸುಳಿದಾಡಿದರೂ ಈ ರಚನೆಗಳ ಆತ್ಮನಿವೇದನ ಹಾಗೂ ಸ್ವಸ್ತಿವಾಚನ, ತಾಯ್ನಾಡ ಸ್ತವನದ ಭಾಗಗಳು ಅರವತ್ತಕ್ಕೂ ಮೀರಿದ ಚೌಪದಿಗಳನ್ನೊಳಗೊಂಡು ಪುರಾಣಿಕರ ಕನ್ನಾಡಾಭಿಮಾನ, ಜೀವನದರ್ಶನ ಮತ್ತು ಶುಭಾಶಂಸೆಗಳನ್ನು ಕಾವ್ಯಮಯವಾಗಿ ಅಭಿವ್ಯಕ್ತಿಸುತ್ತವೆ.



ಮರ್ತ್ಯಲೋಕವ ಬಿಟ್ಟು ಇನ್ನಾವ ಲೋಕವಿದೆ
ಮರ್ತ್ಯರ ವಿಕಾಸಕ್ಕೆ ಉಲ್ಲಾಸಕೆ?
ವ್ಯರ್ಥಪರದಾಕಾಂಕ್ಷೆ ಮರ್ತ್ಯದಲ್ಲಿಯೆ ನಿನ್ನ
ಸಾರ್ಥಕತೆಯನು ಕಾಣು ಮರುಳಸಿದ್ಧ.

ಮತ್ತೆ ಈ ಲೋಕಕ್ಕೆ ಬರುವೆಯೋ ಇಲ್ಲವೋ
ಕರ್ತವ್ಯವಾವುದನು ಉಳಿಸಬೇಡ
ಸುಪ್ತಶಕ್ತಿಯ ಬೆಳೆಸು ಲೋಕಸೇವೆಗೆ ಬೆಳೆಸು
ತೃಪ್ತಪಯಣವ ಬೆಳೆಸು ಮರುಳಸಿದ್ಧ.

ಹಿಂದಿರುಗುತಿವೆ ಪ್ರಾಣಿಗಳು ತಮ್ಮ ಹಳ್ಳಿಗೆ,
ಹಿಂದಿರುಗುತಿವೆ ಹಕ್ಕಿಗಳು ಗೂಡಿಗೆ
ಸಂಧ್ಯೆಯಲಿ ನೀನು ಸಹ ಬಾಳಸಂಜೆಯೊಳಿರುವೆ
ಹಿಂದಿರುಗು ಮೂಲಕ್ಕೆ ಮರುಳಸಿದ್ಧ.

ಮಾಗಿ ಬಸಿರಾಗಿಹಳು, ಹಡೆಯುವಳು ಸುಗ್ಗಿಯನು
ಆಗುವುದು ಸುಗ್ಗಿಗೆ ಗ್ರೀಷ್ಮಶಿಶು ಜನನ
ಹೀಗೇ ಸಾಗುವುದಿಲ್ಲಿ ಋತುಜೀವ ಚಕ್ರವು
ಭೋಗಿಸೆಲ್ಲವನಿಲ್ಲಿ ಮರುಳಸಿದ್ಧ.

ಇಂಥ ರಚನೆಗಳಲ್ಲಿ ಉದ್ದಕ್ಕೂ ಸಿದ್ಧಯ್ಯ ಪುರಾಣಿಕರ ಕವಿಮನಸ್ಸಿನ ಲೇಪ, ಮಾಗಿದ ಮನಸ್ಸಿನ ಹದ ಎರಡೂ ಇರುವುದನ್ನು ಕಾಣಬಹುದು. 'ಮಂಕುತಿಮ್ಮನ ಕಗ್ಗ' ಕ್ಕೆ ಆದಿಯಲ್ಲಿ ಬರುವ ಕಥಾಪ್ರಸಂಗ ಒಂದು ಸೂತ್ರಬದ್ಧತೆಯನ್ನು ಒದಗಿಸುವಂತೆ 'ಮರುಳಸಿದ್ಧನ ಕಂತೆ'ಗೆ ಅಂಥ ಒಂದು ಗಟ್ಟಿಯಾದ ಸೂತ್ರ ಇಲ್ಲವಾಗಿ ಅನೇಕ ಸೊಗಸಾದ ಮುಕ್ತಕಗಳನ್ನೊಳಗೊಂಡ ಕಂತೆ ಮಾತ್ರ ಆಗಿಬಿಡುತ್ತದೆ ಈ ಕೃತಿ. ತಾಯ್ನಾಡ ಸ್ತವನದಿಂದ ಮುಂದುವರೆಯುವ ಆತ್ಮನಿವೇದನೆ ಹಾಗೂ ಸ್ವಸ್ತಿವಾಚನ ಭಾಗಗಳಿಗೆ ಪ್ರಾಪ್ತವಾಗುವ ಸುಸೂತ್ರತೆ ಹಾಗೂ ಭಾವದ ಬೆಳವಣಿಗೆ ಅದೇ ಮಟ್ಟದಲ್ಲಿ ಮಿಕ್ಕಿನ ಭಾಗಗಳಲ್ಲಿ ಆಗುವುದಿಲ್ಲ. ಅಷ್ಟೇ ಅಲ್ಲ, ವಿಷಯಾನುಕ್ರಮಣಿಕೆಯ

ವರ್ಗೀಕರಣ ಕೂಡ 'ಅರಿಕೆ'ಯಲ್ಲಿ ಹೇಳಿದಂತೆ ಆಗಿಲ್ಲ.

ಇವುಗಳನ್ನು ಬೇರೆ ಬೇರೆ ಕಾಲಗಳಲ್ಲಿ ವಾತಾವರಣಗಳಲ್ಲಿ ಪುರಾಣಿಕರು ರಚಿಸಿ, ಈ ಪದ್ಯಗಳು ಈಗ ನನ್ನ ಪದ್ಯಗಳಲ್ಲ ನಿಮ್ಮ ಪದ್ಯಗಳು ಎಂದು ಹೇಳಿದ್ದಾರೆ. ಸಿದ್ಧಯ್ಯ ಪುರಾಣಿಕರು ಹತ್ತು ವರ್ಷಗಳ ದೀರ್ಘಾವಧಿಯಲ್ಲಿ ಮಾಡಿದ ಚಿಂತನೆಗಳನ್ನು ಹರಳುಗಟ್ಟಿಸುವುದಕ್ಕೆ ಮಾಡಿದ ಪ್ರಯತ್ನವಾಗಿ ಈ ಕೃತಿ ಮೂಡಿದೆ.

## ಭಾರತೀಯ ಮನ್ನಣೆ ಪಡೆದ ಹೊಸಗನ್ನಡ ವಚನಕಾರ

ಸಿದ್ಧಯ್ಯಪುರಾಣಿಕರು ಮೂರು ವಚನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಅಭಿನಂದನಾ ಗ್ರಂಥದಲ್ಲಿ ಅವರೇ ಹೇಳಿಕೊಂಡಂತೆ ಅಷ್ಟೊಂದು ವಚನಗಳನ್ನು ಬರೆಯುವ ಬಗೆಗೆ ಅವರಿಗೆ ಭರವಸೆ ಇರದಿದ್ದದು ಯೋಚಿಸಬೇಕಾದ ವಿಷಯ. ಅವರ ಮೊದಲ ವಚನ ಸಂಕಲನ ವಚನೋದ್ಯಾನ. ಇದು ಮತ್ತೊಮ್ಮೆ ಕನ್ನಡಕ್ಕೆ ಅಖಿಲಭಾರತ ಮಟ್ಟದ ಗೌರವವನ್ನು ದೊರಕಿಸಿಕೊಟ್ಟ ಕೃತಿ. ಕಲ್ಕತ್ತೆಯ ಭಾಷಾ ಪರಿಷತ್ತು 'ಬಿಲ್ವಾರಾ' ಪ್ರಶಸ್ತಿ ಪ್ರಪ್ರಥಮವಾಗಿ ಕನ್ನಡದ ಈ ಕೃತಿಗೆ ಪ್ರಾಪ್ತವಾದದ್ದು ಗಮನಾರ್ಹವಾದ ವಿಷಯ. ಪುರಾಣಿಕರು ಬರೆದ ೫೨೫ ವಚನಗಳು ಈ ಕೃತಿಯಲ್ಲಿವೆ. ಪುರಾಣಿಕರ ಅಂಕಿತ 'ಸ್ವತಂತ್ರ ಧೀರ ಸಿದ್ಧೇಶ್ವರ.'

ಸಿದ್ಧಯ್ಯ ಪುರಾಣಿಕರು ಈ ಕೃತಿಯನ್ನು ತೋಂಟದ ಸಿದ್ಧಲಿಂಗನಿಗೆ ಅರ್ಪಿಸಿರುವುದು ಧ್ವನಿಪೂರ್ಣವಾಗಿದೆ. ಹನ್ನೆರಡನೆಯ ಶತಮಾನದ ಮಹತ್ವಪೂರ್ಣ ಅನ್ವೇಷಣೆಯ ಫಲವಾಗಿ ವಚನವೆನ್ನುವ ವಿಶಿಷ್ಟ ಸಾಹಿತ್ಯ ರೂಪುಗೊಂಡಿತ್ತು. ಸೃಜನಶೀಲ ಯುಗದ ಮಹತ್ತರವಾದ ಸಿದ್ಧಿಗಳನ್ನೊಳ ಗೊಂಡ ವಚನಸಾಹಿತ್ಯ ತನ್ನ ಕಾಲದ ಬದುಕಿನೊಂದಿಗೆ ಪಡೆದಿದ್ದ ಕಳ್ಳುಬಳ್ಳಿಯ ಸಂಬಂಧ ಮಹತ್ತರವಾದುದು.

ಆದರೆ ಬಸವಣ್ಣನವರು ಕಲ್ಯಾಣವನ್ನು ಬಿಡುತ್ತಿದ್ದಂತೆ,ಕಣ್ಮರೆಯಾದಂತೆ ಹೋದ ವಚನದ ಸೃಜನಶೀಲತೆ ಮತ್ತೆ ಮೊಳಕೆಯೊಡೆದದ್ದು ತೋಂಟದ ಸಿದ್ಧಲಿಂಗನಲ್ಲಿ. ಜನರಿಗೆ ಮುಟ್ಟಿಸಬೇಕಾದ ಧರ್ಮವೊಂದರ ಸಾಧನವಾಗಿ ವಚನಗಳನ್ನು ಆತ ಸೃಜನಶೀಲವಾಗಿ ಬರೆದ. ಷಟ್‌ಸ್ಥಲಜ್ಞಾನಸಾರಾಮೃತ





ಎಂದೇ ಖ್ಯಾತವಾದ ಆ ವಚನಗಳು ಧರ್ಮದ ಅಗತ್ಯಕ್ಕೆ ಕೇವಲ ಸಾಹಿತ್ಯ ಪ್ರಕಾರವೊಂದಾಗಿ ಆ ಪ್ರಕಾರ ಮತ್ತೆ ಪ್ರಕಟಗೊಂಡದ್ದನ್ನು ಸೂಚಿಸುತ್ತವೆ. ಆಧುನಿಕರು ಬರೆಯುತ್ತಿರುವ ವಚನಗಳು ಇದೇ ಬಗೆಯವು; ಇಲ್ಲಿ ವಚನ ವೊಂದು ಸಾಹಿತ್ಯ ಪ್ರಕಾರವಾಗಿ ಮಾತ್ರ ಬಳಕೆಯಾಗುತ್ತದೆ ಎಂಬುದನ್ನು ಈ ಅರ್ಪಣೆ ಧ್ವನಿಸುತ್ತದೆಯೇನೋ ಎಂಬುದು ನನ್ನ ಭಾವನೆ. ಈ ಅಭಿಪ್ರಾಯವನ್ನು ಡಾ. ಸಿದ್ಧಯ್ಯ ಪುರಾಣಿಕರ ಮುಂದಿಟ್ಟಾಗ ಅವರ ಉತ್ತರ ಒಂದು ಮುಗುಳ್ನಗೆ ಮಾತ್ರವಾಗಿತ್ತು. ಅಂಕಿತದಲ್ಲಿರುವ ಸ್ವತಂತ್ರಧೀರ ಎಂಬುದು ಸಿದ್ಧಯ್ಯ ಪುರಾಣಿಕರ ಕಲ್ಪನೆಯಾಗಿದ್ದರೆ 'ಸಿದ್ಧೇಶ್ವರ' ಎಂಬುದು ಮತ್ತೆ ಸಿದ್ಧಲಿಂಗೇಶ್ವರರ ಹೆಸರನ್ನೇ ಸೂಚಿಸುವುದು ಅರ್ಥಪೂರ್ಣವಾಗಿದೆ.

ಆಧುನಿಕ ವಚನಕಾರರಲ್ಲಿ ಎಸ್.ವಿ.ರಂಗಣ್ಣ, ಎಸ್.ವಿ.ಪರಮೇಶ್ವರ ಭಟ್ಟ, ಮಹದೇವ ಬಣಕಾರ ಹೀಗೆ ಹೆಸರುಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಆದರೆ ಸಿದ್ಧಯ್ಯ ಪುರಾಣಿಕರ ಪ್ರತಿಭೆಗೆ ವಚನ ಒಂದು ಒಳ್ಳೆಯ ಮಾಧ್ಯಮವಾಗಿ ಅವರನ್ನು ಆಧುನಿಕ ವಚನಕಾರರಲ್ಲಿ ಪ್ರಮುಖರಾದ ಕೆಲವೇ ಗಣ್ಯರಲ್ಲಿ ಒಬ್ಬರನ್ನಾಗಿ ಮಾಡಿದೆ. ಈ ಕೆಲವು ವಚನಗಳನ್ನು ಗನಿಸಬಹುದು.

೧. ........ನನಗೆ ತೋಚಿದಂತೆ ಬರೆದರೆ ಅದು ರಚನೆ
ನೀನು ತೋರಿಸಿದಂತೆ ಬರೆದರೆ ಅದು ವಚನವಯ್ಯ
ಸ್ವತಂತ್ರಧೀರ ಸಿದ್ಧೇಶ್ವರ.

೨. ಫಲವಿತ್ತ ರೆಂಬೆ ಬಾಗುತ್ತದೆ
ಗೊನೆಹೊತ್ತ ಬಾಳೆ ಬಾಗುತ್ತದೆ
ತೆನೆ ಹೆತ್ತ ದಂಟು ಬಾಗುತ್ತದೆ
ಏನೇನೂ ಇಲ್ಲದುದು
ಬೀಗುತ್ತದೆ ನೋಡಾ
ಸ್ವತಂತ್ರಧೀರ ಸಿದ್ಧೇಶ್ವರ.

೩. ವಿದ್ಯೆ ಬಂತು ವಿನಯ ಹೋಯ್ತು
ಬುದ್ಧಿ ಬಂತು ಶ್ರದ್ಧೆ ಹೋಯ್ತು

ಶ್ರದ್ಧೆ ಬಂತು ವಿವೇಚನೆ ಹೋಯ್ತು
ಸಮೃದ್ಧಿ ಬಂತು ಸಂಸ್ಕೃತಿ ಹೋಯ್ತು
ವಿಜ್ಞಾನ ಬಂತು ಸಮಾಧಾನ ಹೋಯ್ತು
ಶರೀರ ಸ್ವಾಸ್ಥ್ಯ ಬಂತು, ಚಿತ್ತ ಸ್ವಾಸ್ಥ್ಯ, ಹೋಯ್ತು
ದೀರ್ಘಾಯುಷ್ಯ ಬಂತು ಜೀವನ ಸ್ವಾರಸ್ಯ ಹೋಯ್ತು
ಬೋಧನೆ ಬಂತು ಸಾಧನೆ ಹೋಯ್ತು
ಮಾತು ಬಂತು ಕೃತಿ ಹೋಯ್ತು
ಜಾತಿ ಬಂತು ಪ್ರೀತಿ ಹೋಯ್ತು
ಸ್ವಾತಂತ್ರ್ಯ ಬಂತು ಸೌಜನ್ಯ ಹೋಯ್ತು
ಸಿದ್ಧಯ್ಯ ಪುರಾಣಿಕ ಬಂದ ಸ್ವತಂತ್ರಧೀರ ಸಿದ್ಧೇಶ್ವರ ಹೋದ.

ಮೊದಲನೆ ವಚನ ಭಾಗಸಿದ್ಧಯ್ಯನವರ ವಚನ ದ್ರವ್ಯವನ್ನು ತುಂಬ ಕಾವ್ಯಮಯವಾಗಿ ಹರಳುಗಟ್ಟಿಸಿದ ವಚನವಾಗಿದೆ. ವಚನ ತಾನು ನಂಬಿದ ದೈವಶಕ್ತಿಯ ಆದೇಶವಾದಾಗ ಮಾತ್ರ ಮೂಡುವಂತಹದು ಎಂಬುದನ್ನು ಇದು ಧ್ವನಿಸುತ್ತದೆ.

ಎರಡನೆಯ ವಚನ ಅದ್ಭುತವಾದ ಒಂದು ಮುಕ್ತಕವಾಗಿದೆ. ಒಂದು ಕಡೆಗೆ ತುಂಬಿಕೊಂಡ ಸಮೃದ್ಧಿಯ ವಿನಮ್ರತೆಯಿದ್ದರೆ ಇನ್ನೊಂದು ತುದಿಗೆ ಟೊಳ್ಳು ಟೊಳ್ಳಾದ ದುರಹಂಕಾರದ ಬೀಗುವಿಕೆಯ ವಿಡಂಬನೆ ಇದೆ. ಬಾಗು ಬೀಗು ಎನ್ನುವ ಪದಗಳಲ್ಲಿರುವ ತದ್ವಿರುದ್ಧವಾದ ಅರ್ಥಕೇಂದ್ರಗಳು ವಚನಕ್ಕೆ ಅರ್ಥದ ಬಿಗುವನ್ನು ತಂದುಕೊಡುತ್ತದೆ. ಮೂರೂ ಸಾಲುಗಳ ಕೊನೆಗೆ ಪುನರುಕ್ತಿಯಾದಂತೆ ಕಾಣುವ 'ಬಾಗುತ್ತದೆ' ಎಂಬ ಕ್ರಿಯಾಪದ ಹಣ್ಣನ್ನು ಕೊಡುವ ಮರದ ರೆಂಬೆಗಳ ಸಮೃದ್ಧಿಯನ್ನು ಗೊನೆಹೊತ್ತ ಬಾಳೆಯ ಸಂತೃಪ್ತಿಯನ್ನು ತೆನೆಹೆತ್ತ ದಂಟಿನ ಸಾರ್ಥಕತೆಯನ್ನು ಮತ್ತೆ ಮತ್ತೆ ನಮ್ಮ ಮನಸ್ಸಿಗೆ ಮುಟ್ಟಿಸುತ್ತದೆ. ಈ ಮೂರು ಸಾಲುಗಳ ಕೊನೆಗೆ ಬರುವ ಏನೇನೂ ಇಲ್ಲದುದು ಎಂಬ ಅಭಿವ್ಯಕ್ತಿ ಕೇವಲ ಹೇಳಿಕೆಯಾಗಿ ಉಳಿಯದೆ ಮೂರು ಸಾಲುಗಳಲ್ಲಿ ತುಂಬಿಕೊಂಡಿರುವ ಸಮೃದ್ಧಿಗೆ ವಿರುದ್ಧವಾದ ಟೊಳ್ಳುತನದತ್ತ ಗಮನ ಸೆಳೆಯುತ್ತದೆ. 'ಬಾಗುತ್ತದೆ' ಎಂಬ ಪದ ಮೂರು ಸಾಲುಗಳ ಕೊನೆಗೆ ಬಳಕೆಯಾಗಿರುವುದು ಅರ್ಥದ ಅವಧಾರಣೆಗೆ, ಪದ



ದಾರಿದ್ರ್ಯದಿಂದ ಅಲ್ಲ. ಏಕೆಂದರೆ ಆರಂಭದಲ್ಲಿ ಬರುವ ಫಲವಿತ್ತ ಗೊನೆಹೊತ್ತ ತೆನೆ ಹೆತ್ತ ಪದಗಳ ಬಳಕೆಯಲ್ಲಿ ಇರುವ ಒಳಪ್ರಾಸ ಹಾಗೂ ವೈವಿಧ್ಯಗಳನ್ನು ಲಕ್ಷಿಸಬೇಕು. ತುಂಬ ಸೊಗಸಾದ ಅಭಿವ್ಯಕ್ತಿ ಇಲ್ಲಿರುವುದು. ಆಶ್ಚರ್ಯದ ಸಂಗತಿ ಎಂದರೆ ಇದು ಮೂಲತಃ ವಚನ ಪರಂಪರೆಯ ಭಾವವೇ ಆಗಿರುವುದು. ಮುಂದಿನ ವಚನ ನಿಜವಾಗಿಯೂ ಸಿದ್ಧಯ್ಯ ಪುರಾಣಿಕರು ವಚನದಲ್ಲಿ ಪಡೆದ ಸಿದ್ಧಿಗೆ ಉದಾಹರಣೆಯಾಗಿದೆ. ಜನಪದದಲ್ಲಿರುವ ತಂತ್ರವೊಂದನ್ನು ಬಳಸಿಕೊಂಡ ಈ ವಚನ ಸ್ವಲ್ಪ ಶೈಥಿಲ್ಯವನ್ನು ಹೆಚ್ಚು ಮಾತಿನ ಕಾರಣವಾಗಿ ಪಡೆದಿದ್ದರೂ ವಚನದ ಕೊನೆಗೆ ಪುರಾಣಿಕರು ಪಡೆಯುವ ಸಿದ್ಧಿ ಅಭಿನಂದನಾರ್ಹವಾದುದು. ಒಂದು ಮಾತಂತೂ ನಿಜ. ವಿದ್ಯೆ ಬರಬೇಕಾದ್ದು ವಿನಯವನ್ನು ಹೆಚ್ಚಿಸುವುದಕ್ಕೆ. ಶರೀರದ ಸ್ವಾಸ್ಥ್ಯ ಅಗತ್ಯವಾಗುವುದು ಚಿತ್ತದ ಸ್ವಾಸ್ಥ್ಯಕ್ಕೆ. ಮಾತು ಬರಬೇಕಾದ್ದು ಕೃತಿಯಾಗುವುದಕ್ಕೆ. ಸಮೃದ್ಧಿ ಅಗತ್ಯವಾದದ್ದು ಸಂಸ್ಕೃತಿಯ ಸಂವರ್ಧನೆಗೆ. ದುರ್ದೈವದ ಸಂಗತಿಯೆಂದರೆ ಅವುಗಳಾವವೂ ಫಲಿಸದ ದುರಂತ ಇಲ್ಲಿ ತೀವ್ರವಾಗುತ್ತಾ ಹೋಗಿ ಅದು ಕೊನೆಮುಟ್ಟುವುದು 'ಸಿದ್ಧಯ್ಯ ಪುರಾಣಿಕ ಬಂದ ಸ್ವತಂತ್ರಧೀರ ಸಿದ್ಧೇಶ್ವರ ಹೋದ' ಎಂಬ ಅಪೂರ್ವ ಅಭಿವ್ಯಕ್ತಿಯಲ್ಲಿ. ಗರ್ವವಿದ್ದ ಕಡೆ ಅಥವಾ ವಿಶೇಷವಾದ ಸ್ವಾಭಿಮಾನವೇ ಆಗಲಿ ಇದ್ದ ಕಡೆ ಸಿದ್ಧೇಶ್ವರ ಇರಲಾರ ಎನ್ನುವ ಧ್ವನಿ ರಮ್ಯವಾದುದು. ಈ ಬಗೆಯ ಹೊಸ ತಂತ್ರದಿಂದ ಸಿದ್ಧಯ್ಯ ಪುರಾಣಿಕರು ಪಡೆದ ಯಶಸ್ಸು ಗಮನಾರ್ಹವಾದುದು. ಇಡೀ ವಚನೋದ್ಯಾನದ ತುಂಬ ಇದೇ ಬಗೆಯ ವಚನಗಳು ಕಿಕ್ಕಿರಿದಿವೆ. ಇಲ್ಲಿ ಅವರ ಯತ್ನ ವಸ್ತುವಿನಲ್ಲಿ ಸಮಕಾಲೀನವೂ ಆಗುವುದನ್ನು ಗಮನಿಸಬಹುದು.

ಆಧುನಿಕ ವಚನ ಪ್ರಕಾರ ಸಿದ್ಧಯ್ಯ ಪುರಾಣಿಕರ ಪ್ರತಿಭೆಗೆ ಹೇಳಿಮಾಡಿಸಿದ್ದೆನ್ನಬಹುದು. ಇಲ್ಲಿಯ ಎಲ್ಲ ವಚನಗಳ ಗುಣಮಟ್ಟವು ಇದೇ ರೀತಿಯದು ಎಂದು ಹೇಳಲಾಗದಿದ್ದರೂ ಕನ್ನಡ ಭಾಷೆಯ ವಿಶಿಷ್ಟ ಸಾಹಿತ್ಯ ಪ್ರಕಾರವೊಂದನ್ನು ಭಾರತೀಯರಿಗೆ ಪರಿಚಯ ಮಾಡಿಕೊಡುವ ಹೆಗ್ಗಳಿಕೆಯನ್ನು ಈ ಕೃತಿ ಪಡೆದಿದೆ.

'ವಚನ ನಂದನ' ಇವರ ಎರಡನೆಯ ವಚನ ಸಂಕಲನವಾಗಿದೆ. ಇದರಲ್ಲಿ ಒಟ್ಟು ೪೭೫ ವಚನಗಳಿವೆ. ಈ ವಚನ ಸಂಕಲನವನ್ನು ಸಿದ್ಧಗಂಗಾ ಕ್ಷೇತ್ರದ ಮಠಾಧ್ಯಕ್ಷರಾದ ಡಾ॥ಶಿವಕುಮಾರಸ್ವಾಮಿಗಳಿಗೆಅರ್ಪಿಸಲಾಗಿದೆ. ವಚನಗಳ ಗುಣಮಟ್ಟದ ದೃಷ್ಟಿಯಿಂದ ಇಲ್ಲಿನ ವಚನಗಳು 'ವಚನೋದ್ಯಾನ'ದ ಮಟ್ಟಕ್ಕೆ ಏರುವುದಿಲ್ಲ. ಇನ್ನೂ ಆಶ್ಚರ್ಯದ ಮಾತೆಂದರೆ ಇಲ್ಲಿ ವಚನಗಳು ಛಂದೋಬದ್ಧತೆಯ ಕಡೆಗೆ ಹೊರಳಿ ವಚನ ಪ್ರಕಾರದ ವಿಶಿಷ್ಟತೆಗೆ ವಿರುದ್ಧವಾದವುಗಳಾಗುತ್ತವೆ. ಈ ವಚನ ಸಂಕಲನದ ಗುಣಮಟ್ಟದ ಉದಾಹರಣೆಗಾಗಿ ಈ ಮೂರು ವಚನಗಳನ್ನು ಗಮನಿಸಬಹುದು.

೧. ವೇದಾಂತಿಗಳೆ ಕೇಳಿ
ಸಿದ್ಧಾಂತಿಗಳೆ ಕೇಳಿ
ಘನತಂತ್ರಿಗಳೆ ಕೇಳಿ
ಎಷ್ಟು ದುರ್ಜ್ಞೇಯ ದರ್ಶನಗಳಿಗಿಂತ
ಕಂದನ ಮಂದಹಾಸ ಮನೋಜ್ಞವೆನಗೆ;
ನಿಮ್ಮ ದುರವಗ್ರಾಹ್ಯ ಬೋಧನೆಗಳಿಗಿಂತ
ಮಾತೆಯ ಮಾತುಗಳು ಮನೋಹರವೆನಗೆ!
ನಿಮ್ಮ ಅಮೂರ್ತ ಚಿಂತನೆಗಳಿಗಿಂತ
ದಾದಿಯ ನಲ್ನುಡಿಗಳು ಮೋಹಕವೆನಗೆ!
ಬದುಕಿನ ಬದಿಗೆ ನಿಲ್ಲಲು ಬೆದರುವ
ಜನತೆಗೆ ಹತ್ತಿರವಿರಲು ಹೆದರುವ
ನಿಮ್ಮ ಮುಗಿಲ ಮಾತುಗಳಿಗಿಂತ
ಸ್ವತಂತ್ರಧೀರ ಸಿದ್ಧೇಶ್ವರನಿಗೆ ಪ್ರಿಯವಾದ
ಸರ್ವಾನುಕಂಪೆಯ
ಕಂಪಿನ ಕರೆಗೆ ಓಗೊಡುವೆ.

೨. ಸವದತ್ತಿಯ ಎಲ್ಲಮ್ಮನಿಗೆ
ಜೋಗತಿಯರಾಗುವದ



ನಿಲ್ಲಿಸಬೇಕೆನ್ನುವವರು
ದಿಲ್ಲಿಯ ಎಲ್ಲಮ್ಮನಿಗೆ
ಜೋಗತಿಯರಾಗುವುದ
ಮೊದಲು ನಿಲ್ಲಿಸಲಯ್ಯ
ಸ್ವತಂತ್ರಧೀರ ಸಿದ್ಧೇಶ್ವರ.

೩. ಮನೆ ಮನೆಯ ವನಗಳಲ್ಲಿ
ಮನ–ಸುಮಗಳು ಅರಳಲಿ;
ಮನ–ಸುಮಗಳ ಎದೆಗಳಿಂದ
ಸ್ನೇಹ ಬಿಂದು ಉರುಳಲಿ;
ಸ್ನೇಹವೆ ಸಹಕಾರವಾಗಿ
ಸ್ವಪರ ಸುಗತಿ ಮರಳಲಿ;
ಸುಗತಿಯ ಸಂಸ್ಕೃತಿ ಗಳಿಸಿ
ಕಾಡುತನವು ತೆರಳಲಿ
ಸ್ವತಂತ್ರಧೀರ ಸಿದ್ಧೇಶ್ವರ,
ನರರ ಚಿತ್ತವೃತ್ತಿ ಮಾಗಿ
ನರರು ನರರಿಗೆ ನೆರವಾಗಿ
ನರೋತ್ತಮ ಕುಲವು ಅರಳಲಿ.

ಈ ಮೂರು ಉದಾಹರಣೆಗಳನ್ನು ಗಮನಿಸುತ್ತಿದ್ದಂತೆಯೇ ಇಲ್ಲಿಯ ವಚನಗಳ ಗುಣ ಕೂಡ ಮನವರಿಕೆಯಾಗುತ್ತದೆ.

ಇವರ ಮೂರನೆಯ ವಚನ ಸಂಕಲನ 'ವಚನರಾಮ' ೫೦೧ ವಚನಗಳನ್ನೊಳಗೊಂಡಿದೆ. ಪುರಾಣಿಕರು ಇದನ್ನು ಅಕ್ಕ–ಅಣ್ಣ–ಅಲ್ಲಮರಿಗೆ ಅರ್ಪಿಸಿರುವುದು ಮಹತ್ವದ ಸಂಗತಿಯಾಗಿದೆ. ಇಲ್ಲಿಯ ವಚನಗಳು ನಮ್ಮನ್ನು ೧೨ನೇಯ ಶತಮಾನದ ವಚನಗಳ ವಾತಾವರಣದಲ್ಲಿ ಸುಳಿದಾಡುವಂತೆ ಮಾಡುತ್ತವೆ. ಈ ವಚನಗಳನ್ನು ಓದುವಾಗ ರವೀಂದ್ರನಾಥ ಠಾಕೂರರ ಗೀತಾಂಜಲಿ, ಫಲಸಂಚಯ ಕೃತಿಗಳ ನೆನಪು ಅಲ್ಲಲ್ಲಿ ಮೂಡಿದರೂ ಈ ವಚನಗಳು ಸಾಧಿಸಿದ್ದು ನಿಜವಾಗಿಯೂ

ಸಾಮಾನ್ಯವಾದುದಲ್ಲ. ಸಿದ್ಧಯ್ಯ ಪುರಾಣಿಕರು ವಚನ ಪ್ರಕಾರದಲ್ಲಿ ಪಡೆದ ಸಿದ್ಧಿಗೆ ಈ ಒಂದು ಸಣ್ಣ ವಚನವನ್ನು ಗಮನಿಸಬಹುದು.

''ಇಂದು ಪತ್ರಿಕೆ ಬರಲಿಲ್ಲ;
ಸಾವುಗಳ ಸುದ್ದಿಗಳನ್ನೋದದೆ
ಜೀವಕ್ಕೆ ಬೇಸರವಾಯಿತು,
ಸ್ವತಂತ್ರಧೀರ ಸಿದ್ಧೇಶ್ವರ''

ಈ ಮೂರು ಸಾಲಿನ ವಚನದಲ್ಲಿ ಸಿದ್ಧಯ್ಯ ಪುರಾಣಿಕರು ಸಾಧಿಸಿರುವುದು ಅಪೂರ್ವವಾದುದು. ಇಂದಿನ ದೈನಂದಿನ ಬದುಕಿನ ದಾರುಣತೆಯನ್ನು ಸೂಚಿಸುವ ಈ ವಚನ ಅತ್ಯಂತ ಮುಖ್ಯವಾದ ಮತ್ತೊಂದು ಸಂಗತಿಯನ್ನು ದಾಖಲಿಸುತ್ತದೆ. ಅದೆಂದರೆ ಇಂದಿನ ಜನಕ್ಕೆ ಹಿಗ್ಗಾಗುತ್ತಿರುವುದು ಹಿಂಸೆ ಕ್ರೌರ್ಯದಿಂದ ಎಂಬುದನ್ನು ಸೂಚಿಸುವುದು. ಈ ವಚನದಲ್ಲಿ ವಿಡಂಬನೆಯ ಅಬ್ಬರವಿಲ್ಲ, ಜನರ ಅಭಿರುಚಿಯನ್ನು ಕುರಿತ ಮೊನಚಾದ ಟೀಕೆಯಿಲ್ಲ, ಇಂದಿನ ಬದುಕಿನ ಹೃದಯವಿದ್ರಾವಕವನ್ನು ಕುರಿತ ವಾಸ್ತವಕ್ಕೆ ಮುಖಮಾಡುವ ಧೀರ ಮನೋವೃತ್ತಿಯಿದೆ. ಎಲ್ಲಕ್ಕಿಂತ ಮಿಗಿಲಾಗಿ ಇದು ವಚನ ತಂತ್ರವನ್ನು ಆಧರಿಸಿ ಆತ್ಮಸಂಬೋಧನೆಯ ರೀತಿ ಇರುವುದು. ಈ ಆತ್ಮವಿಶ್ಲೇಷಣೆಯ ಕಡೆ ಹೊರಳಿರುವುದು. ಇಲ್ಲಿಯ ವಚನಗಳ ಅನುಭವದ ಶ್ರೇಣಿ ಹೆಚ್ಚು ವ್ಯಾಪಕವಾದದ್ದು. ಹಲವಾರು ಸುಂದರ ಭಾವಗೀತೆಗಳ ಜೊತೆಗೆ ಅಪರೂಪವೆನಿಸುವ ವಚನ ಸಾಹಿತ್ಯದ ಸೊಗಸನ್ನು ಮೆಲುಕು ಹಾಕುವಂತೆ ಮಾಡುವ ಆತ್ಮಶೋಧನೆಯ ವಚನಗಳು ಇಲ್ಲಿವೆ. ಉದಾಹರಣೆಗೆ ಈ ಕೆಲವು ವಚನಗಳನ್ನು ಗಮನಿಸಬಹುದು.

೧. ಮಳೆಯಾಗಿ ಇಳಿಯಲಿಲ್ಲ
ಮಿಂಚಾಗಿ ಹೊಳೆಯಲಿಲ್ಲ
ಬರಿದೇ ಕರಗಿದುದು ಬಿಳಿಮೋಡಗಳ ನಿಕರ.
ಕೆಂಪಾಗಿ ಹರಡಲಿಲ್ಲ
ಇಂಪಾಗಿ ಫಲಿಸಲಿಲ್ಲ
ಬರಿದೆ ಉದುರಿದುದಯ್ಯ ಪಲಾಶಪುಷ್ಪಪ್ರಕರ.



ರಂಜನೆಯ ನೀಡಲಿಲ್ಲ
ಮೌಢ್ಯ ಪ್ರಭಂಜನೆಯ ಮಾಡಲಿಲ್ಲ
ಬರಿದೆ ತೋರಿ ಅಡಗಿದುದಯ್ಯ
ನನ್ನ ಕೃತಿ ವಿರಸ ಸ್ವತಂತ್ರಧೀರ ಸಿದ್ಧೇಶ್ವರ.

೨. ನೂರು ಕೊಡಲಿಗಳು ಕಡಿದ
ದಾರಿಮರ ನಾನಯ್ಯ!
ರೆಂಬೆಗಳೆಲ್ಲ ಮಾಯವಾಗಿ ಬೊಡ್ಡೆ ಮಾತ್ರ ಉಳಿದಿದೆ.
ತಳಿರು,ಅಲರು, ಕಾಯಿ, ಹಣ್ಣುಗಳ
ಕಾಲ ಕಳೆದಿದೆ.
ಹೊಸ ರೆಂಬೆಗಳನ್ನು ಬೆಳೆಯಲಾರೆನು ನಾನು
ಹೊಸ ಹೂವು ಹಣ್ಣುಗಳನ್ನು ತಳೆಯಲಾರೆನೆ, ನಾನು?
ಇದಾವುದೂ ಸಾಧಿಸದಿದ್ದರೆ
ಕಡಿದ ರೆಂಬೆಗಳ ಬದಿಗೆ
ಚಿಗುರಾಗಿ ನಗಬಲ್ಲೆ!
ಸ್ವತಂತ್ರಧೀರ ಸಿದ್ಧೇಶ್ವರ
ನಗಬಲ್ಲೆ, ನಕ್ಕು ತೋರಿಸುವೆ!

ಈ ಎರಡು ವಚನಗಳ ದನಿ ವಚನ ಮನೋಧರ್ಮಕ್ಕೆ ಹತ್ತಿರವಾದುದು. ಎರಡನೆಯ ವಚನವಂತೂ ಕೊಲೆಗಡುಕತನ ಮತ್ತು ವಿನಾಶಕಾಲಗಳ ಮಧ್ಯದಲ್ಲೂ ಹೊಸ ಬದುಕನ್ನು ಕಾಣುವ ಸಂಕಲ್ಪದಿಂದ ನಳನಳಿಸುತ್ತದೆ. ಇಲ್ಲಿಯ ಭರವಸೆ ಹಾಗೂ ಆಶಾವಾದಗಳು ನೊರೆಯಂತೆ ಉಕ್ಕುವ ಮಾತುಗಳಲ್ಲ; ಬದುಕಿನ ಸಂಕಷ್ಟಗಳ ಆಳದಿಂದ ಮೂಡಿಬರುವ ಜಿಜೀವಿಷೆಯ ಕುರುಹುಗಳಾಗಿವೆ. ಇದೇ ಭಾವನೆ ಇನ್ನಷ್ಟು ಹುರಿಗೊಳ್ಳುವ ಈ ವಚನವನ್ನು ಗಮನಿಸಿ.

ಎಷ್ಟು ಸಾವಿರ ವಚನಗಳನ್ನು ಕಲಿತೆ!
ಕಲಿತೆ, ಬಳಸಿದೆ, ಬಳಸಿದೆ
ಹಳಸುವವರೆಗೆ ಬಳಸಿದೆ

ಆಗ ಕಲಿತೆ ಈಗ ಮರೆತೆ!
ಒಂದೇ ಶಬ್ದ ಸ್ಮರಣೆಯಲ್ಲೀಗ....
ಅದು...ನೀನು.....ಸ್ವತಂತ್ರಧೀರ ಸಿದ್ದೇಶ್ವರ.

ಇಂತಹ ಮಾನಸಿಕ ನೆಮ್ಮದಿ ವಚನದ ಪಾಕಕ್ಕೆ ಉದಾಹರಣೆಯಾಗುತ್ತದೆ ಎನ್ನಬಹುದು. ಇಲ್ಲಿಯ ಎಷ್ಟೋ ವಚನಗಳು ಸುಂದರವಾದ ಭಾವಗೀತೆಗಳಂತೆ ಇವೆ. ಉದಾಹರಣೆಗೆ ಈ ಕೆಲವು ವಚನಗಳನ್ನು ಗಮನಿಸಬಹುದು.

೧. ಮಿಲನದ ಕನಸು ಒಂದು ತೆರ,
ವಿರಹದ ಕನಸು ಒಂದು ತೆರ
ಒಂದೊಂದೂ ಚೇತೋಹರ
ಕನಸಿನ ಮೂಲವೇನೇ ಇರಲಿ,
ಕನಸು ನಿದ್ದೆಯ ಸಹಚರ,
ನನಗೆ ನೀನು ಕೈಸಾರು, ಬಿಡು
ನಿನ್ನ ಸವಿಗನಸುಗಳನ್ನು ಕೊಡು ಪ್ರಿಯಕರ
ಸ್ವತಂತ್ರಧೀರ ಸಿದ್ಧೇಶ್ವರ.

೨. ಎಲ್ಲಿಂದ ಬಂದುವು, ಎಲ್ಲಿಗೆ ಹೊರಟಿವೆ
ಪಕ್ಷಿಧಾಮವಿದರ ಯಾತ್ರಿಕಪಕ್ಷಿಗಳು?
ಎಲ್ಲಿಂದ ಬಂದವು ಎಲ್ಲಿಗೆ ಹೊರಟಿವೆ,
ಶರನ್ನಭದ ನೀರದ – ಪಕ್ಷಿಗಳು?
ಎಲ್ಲಿಂದ ಬಂದವು ಎಲ್ಲಿಗೆ ಹೊರಟಿವೆ
ವ್ಯೋಮಾತೀತದ ನಕ್ಷತ್ರದ ಪಕ್ಷಿಗಳು?
ಸ್ವತಂತ್ರಧೀರ ಸಿದ್ಧೇಶ್ವರ
ಎತ್ತಣಿಂದ ಬಂದು ಎತ್ತ ಹೊರಟಿವೆ
ಶೂನ್ಯಮಾರ್ಗದಿಂದ ಬಂದ ಶೂನ್ಯಪಕ್ಷಿಗಳು?

೩. ಎಲ್ಲಕ್ಕೂ ಯಾವುದೋ ತೆರೆ,
ಎಂತದೋ ಮರೆ



ಅರಿವಿಗೆ ಮರವೆಯ ತೆರೆ
ಗರ್ವದ ತೆರೆ
ದಿಟಕ್ಕೆ ಸಟೆಯ ತೆರೆ
ಚಿನ್ನದ ಘಟದ ಮರೆ
ಪ್ರೇಮಕ್ಕೆ ಪ್ರೇಮ ಸಂಶಯದ ತೆರೆ
ಜಾತಿಯ ಮರೆ
ನಿನ್ನ ನನ್ನ ನಡುವೆ
ನಾನೇ ತೆರೆ ನಾನೇ ಮರೆ
ಸ್ವತಂತ್ರಧೀರ ಸಿದ್ಧೇಶ್ವರ.

ಈ ಮೂರು ವಚನಗಳಲ್ಲಿ ೧ ಮತ್ತು ೨ನೆಯ ವಚನಗಳ ಕಾವ್ಯಮಯತೆ ಮೂರನೆಯ ವಚನದ ಆತ್ಮನಿರೀಕ್ಷಣೆಯ ಚಿತ್ರ ಅದ್ಭುತವಾದದ್ದು. ಇಲ್ಲಿಯ ಹೆಚ್ಚಿನ ವಚನಗಳಲ್ಲಿ ಇದೇ ರೀತಿಯ ಗುಣಮಟ್ಟವನ್ನು ಕಾಣುತ್ತೇವೆ. ಈ ಕಾರಣದಿಂದಾಗಿಯೇ ಈ ವಚನ ಸಂಕಲನ ಸಿದ್ಧಯ್ಯ ಪುರಾಣಿಕರ ಶ್ರೇಷ್ಠ ಸಾಹಿತ್ಯ ಕೃತಿಯಾಗಿದೆ. ಸಿದ್ಧಯ್ಯ ಪುರಾಣಿಕರು ತಮ್ಮ ವಚನಗಳ ಬಗೆಗೆ ತಾವೇ ಹೇಳಿಕೊಂಡಿದ್ದು ಹೀಗೆ: ''ಎರಡು ದಶಕಗಳ ಆಚೆಗೆ ನಾನು ಮನಸ್ಸಿಲ್ಲದ ಮನಸ್ಸಿನಿಂದ ವಚನಗಳನ್ನು ಬರೆಯಲು ಆರಂಭಿಸಿದಾಗ ನೂರು ವಚನಗಳ ಗಡುವನ್ನಾದರೂ ಮುಟ್ಟುವೆನೋ ಇಲ್ಲವೋ ಎಂಬ ಶಂಕೆ ನನಗಿದ್ದಿತು. ಅವುಗಳಿಗೆ ತಕ್ಕ ರೂಪ ಕೊಟ್ಟಿರುವೆನೆಂಬ ನಂಬಿಕೆಯು ನನಗಿಲ್ಲ. ವಸ್ತುವೈವಿಧ್ಯ ಸಾಧಿಸಿರುವಷ್ಟು ಅಭಿವ್ಯಕ್ತಿ ವೈಖರಿ ಸಾಧಿಸಿಲ್ಲ.'' ಅವರ ವಚನಗಳನ್ನು ಗಮನಿಸಿದಾಗ ಮೊದಲನೆಯ ಮಾತನ್ನು ಅವರೇ ಸುಳ್ಳಾಗಿಸಿದ್ದಾರೆ. ಒಟ್ಟು ೧೫೦೦ ವಚನಗಳನ್ನು ಪ್ರಕಟಿಸುವುದರ ಮೂಲಕ ಅವರ ಎರಡನೆಯ ಮಾತು ಅಲ್ಲಲ್ಲಿ ವಚನಗಳ ಆತ್ಮ ವಿಮರ್ಶೆಯಂತೆ ಅನ್ನಿಸಿದರೂ ವಿಶೇಷವಾಗಿ ಈ ಮಾತು ಅವರ ಎರಡನೆಯ ಸಂಕಲನಕ್ಕೆ ಹೆಚ್ಚು ಅನ್ವಯಿಸುವಂತೆ ತೋರುತ್ತದೆ. ಆದರೆ ಅವರ ವಚನೋದ್ಯಾನವನ್ನು ಕುರಿತು ಹೇಳಿರುವ ಈ ಕೆಲವು ಮಾತುಗಳನ್ನು ಗಮನಿಸಬಹುದು. ದೇ.ಜ.ಗೌ. ಅವರು ಸಿದ್ಧಯ್ಯ

ಪುರಾಣಿಕರ ವಚನೋದ್ಯಾನವಂತೂ ಈ ಶತಮಾನದ ವಚನ ಸಾಹಿತ್ಯದಲ್ಲೊಂದು ಗೌರೀಶಂಕರವೆಂದು ಹೇಳಬಹುದಾಗಿದೆ ಎಂದು ಘೋಷಿಸಿದ್ದಾರೆ.

''ಶರಣವಾಙ್ಮಯದಲ್ಲಿ ಮೊದಲಿನಿಂದಲೂ ತಮ್ಮನ್ನು ಬೇರೂರಿಸಿ ಕೊಂಡಿರುವ ಪುರಾಣಿಕರು ಆ ವಚನಮಾನಸದ ಸಾರಸರ್ವಸ್ವವನ್ನು ಹೀರಿಕೊಂಡು ಅದನ್ನು ಅರಗಿಸಿಕೊಂಡು ತಮ್ಮ ಸ್ವಾನುಭವದ ಬೀಜಗಳನ್ನಾಗಿ ಮಾಡಿಕೊಂಡು ತಮ್ಮ ಸಮಕಾಲೀನ ಪ್ರಜ್ಞೆಯನ್ನು ಬಿತ್ತಿ ಬೆಳೆದ ಉದ್ಯಾನವಾಗಿದೆ ಎನ್ನುತ್ತಾರೆ ವಚನೋದ್ಯಾನವನ್ನು ಕುರಿತು ಡಾ|| ಹಾ.ಮಾ.ನಾಯಕರು. ವಚನೋದ್ಯಾನದ ಮುನ್ನುಡಿಯಲ್ಲಿ ಪುರಾಣಿಕರ ವಚನಗಳನ್ನು ಶುದ್ಧ ಜೀವನ ಸಂಹಿತೆಗಳು ಎಂದಿದ್ದಾರೆ. ಈ ಎಲ್ಲ ಅಭಿಪ್ರಾಯಗಳನ್ನು ಗಮನಿಸಿರುವ ಡಾ|| ಸಿ.ಪಿ.ಕೆ. ಹೇಳುವ ಮಾತು ಹೀಗಿದೆ– ''ಇಲ್ಲಿನ ಮಾತು ವಚನೋದ್ಯಾನದ ಬಗೆಗಾಗಲಿ,ವಚನನಂದನ, ವಚನಾರಾಮದ ಬಗೆಗಾಗಲಿ ಅತ್ಯುಕ್ತಿಯಾಗಬಹುದು. ಅದರೆ ಅಸತ್ಯವಲ್ಲ. ಅರ್ವಾಚೀನ ವಚನ ವಾಙ್ಮಯದ ಪರಿಧಿ ಪುರಾಣಿಕರಿಂದ ನಿಸ್ಸಂದೇಹವಾಗಿ ಹಿಗ್ಗಿದೆ. ಅದು ಒಟ್ಟಿನಲ್ಲಿ ನಮ್ಮ ಸಾಹಿತ್ಯದ ಹಿಗ್ಗು'' ಬಹುಶಃ ಡಾ||ಪುರಾಣಿಕರು ಹೊಸಗನ್ನಡದ ಶ್ರೇಷ್ಠ ವಚನಕಾರರು ಎನ್ನಬಹುದೆಂದು ತೋರುತ್ತದೆ. ಕನ್ನಡಕ್ಕೆ ಅವರ ಕೊಡುಗೆಯನ್ನು ಗಮನಿಸುವಾಗ ಇವರ ವಚನ ಸಂಕಲನಗಳನ್ನು ಅತ್ಯಂತ ಗಂಭೀರವಾಗಿ ಗಮನಿಸಬೇಕಾಗುತ್ತದೆ.

## ಚಿಂತನ ಲಹರಿ

ಡಾ||ಸಿದ್ಧಯ್ಯ ಪುರಾಣಿಕರು ಬಾನುಲಿಯಲ್ಲಿ ಬಿತ್ತರಿಸಿದ ಚಿಂತನಗಳನ್ನು ಚಿಂತನಲಹರಿ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯನ್ನು ತಮ್ಮ ಮೇಲೆ ಪ್ರಭಾವ ಬೀರಿರುವವರಲ್ಲಿ ಒಬ್ಬರಾದ ಆಚಾರ್ಯ ವಿ.ಕೆ.ಗೋಕಾಕರಿಗೆ ಅರ್ಪಿಸಿದ್ದಾರೆ. ಇಲ್ಲಿಯ ಬಹುಪಾಲು ಚಿಂತನಗಳು ಅವರ ಅಧ್ಯಯನದ ಹರಹನ್ನು ಪಡೆದುಕೊಂಡಿದ್ದ ಮಟ್ಟದಲ್ಲೇ ಅನುಭವದ ವಿಶಿಷ್ಟತೆಗಳನ್ನು ಪಡೆದುಕೊಂಡಿಲ್ಲ. ಬೆಳೆಸಿ ತಂದ ಭಾಗ್ಯದಂಥ ಚಿಂತನದಲ್ಲಿ ಘಟನಾತ್ಮಕ ವಾಗಿ ಹೃದ್ಯವಾಗುವ ಇವರ ಚಿಂತನದ ಮಾದರಿಯನ್ನೇ ಉಳಿದ



ಚಿಂತನಗಳಲ್ಲಿ ಅನುಸರಿಸಿದ್ದರೆ ಈ ಕೃತಿಯ ಸಾಹಿತ್ಯಿಕ ಮೌಲ್ಯವು ಹೆಚ್ಚುತ್ತಿತ್ತು ಎಂದು ತೋರುತ್ತದೆ.

## ಸಂಪಾದಿಸಿದ ಕೃತಿಗಳು

ಡಾ|| ಸಿದ್ಧಯ್ಯ ಪುರಾಣಿಕರು ವಿಕಾಸವಾಣಿ ಎಂಬ ಕೃತಿಯನ್ನು ವಯಸ್ಕರಿಗಾಗಿ ಬರೆದಿದ್ದಾರೆ. ಗ್ರಾಮಸ್ವರಾಜ್ಯ ಎಂಬುದು ಇವರ ಮತ್ತೊಂದು ಸಾಹಿತ್ಯೇತರ ಕೃತಿಯಾಗಿದೆ. ಸ್ವತಂತ್ರ ಕೃತಿರಚನೆಗಳ ಜೊತೆಗೆ ಸಿದ್ಧಯ್ಯ ಪುರಾಣಿಕರು ಪ್ರಧಾನ ಸಂಪಾದಕರಾಗಿ ಸಿದ್ಧಗಂಗಾಶ್ರೀ, ಮಣಿಹ ಮೊದಲಾದವುಗಳನ್ನು ಸಂಪಾದಿಸಿದ್ದಾರೆ. ಇತರರೊಡನೆ ಕನ್ನಡ ಪದ್ಯ ರತ್ನಾಕರ, ಶ್ರೀಕಾರ ಹಾಗೂ ಪ್ರಬಂಧಮಾಲೆ, ಶರಣಪ್ರಸಾದ, ಸುಬೋಧಸಾರ, ಮಹಾತ್ಮಕನಕದಾಸ ಪ್ರಶಸ್ತಿ ಮೊದಲಾದವುಗಳನ್ನು ಸಂಪಾದಿಸಿದ್ದಾರೆ.

ಇವರು ಬಹುಕಾಲ ಬಸವಪಥ ಹಾಗೂ ಬಸವಜನ್ಮಗಳ ಪ್ರಧಾನ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಬಸವ ಜರ್ನಲ್‌ನಲ್ಲಿ ತಾವೇ ಇಂಗ್ಲೀಷ್‌ಗೆ ಅನುವಾದಿಸಿದ ಪ್ರಭುದೇವರ ವಚನಗಳು ಗಮನಾರ್ಹವಾಗಿದ್ದು ಅವುಗಳನ್ನು ಒಂದೆಡೆ ಸಂಕಲಿಸಿ ಪ್ರಕಟಿಸುವ ಅಗತ್ಯವಿದೆ.

## ಸಾಹಿತ್ಯ ಕ್ಷೇತ್ರದ ಮನ್ನಣೆಗಳು

ಪುರಾಣಿಕರು ಅನೇಕ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಡಾ|| ಸರೋಜಿನಿ ಮಹಿಷಿ ಸಮಿತಿ, ಕನ್ನಡ ಗಡಿ ಸಮಿತಿ, ಕನ್ನಡ ಕನ್ನಡ ನಿಘಂಟು ಸಮಿತಿ, ಕನ್ನಡ ಪ್ರಾಧಿಕಾರ ಇವುಗಳ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಬಸವ ಸಮಿತಿಯ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟಿನ ಹಾಗೂ ರಾಜಾಜಿನಗರ ಲಲಿತಕಲಾ ನಿಕೇತನದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಬಸವಣ್ಣ ಹಾಗೂ ಅಕ್ಕಮಹಾದೇವಿಯ ವಚನಗಳ ಧ್ವನಿಸುರಳಿಗಳ ನಿರ್ಮಾಣದಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ.

ಕರ್ನಾಟಕ ಜಾನಪದ ಟ್ರಸ್ಟ್, ಬಿ.ಎಂ.ಶ್ರೀ. ಪ್ರತಿಷ್ಠಾನ ಕಾರ್ಯ ಸಮಿತಿ ಮುಂತಾದವುಗಳಲ್ಲಿ ಟ್ರಸ್ಟ್ ಹಾಗೂ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ವರ್ಷಕ್ಕಿಂತ ಹೆಚ್ಚು ಕಾಲ ಲೋಕವಾಣಿ ದಿನಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸುವುದಲ್ಲದೆ ಅವರು ಬರೆದ ಸಂಪಾದಕೀಯಗಳು ಅತ್ಯಂತ ಒಳ್ಳೆಯ ಸಂಗ್ರಹ ಯೋಗ್ಯವಾದ ಲೇಖನಗಳಾಗಿವೆ.

ವೃತ್ತಿಯ ಜೊತೆಗೆ ಸೃಜನ ಸಾಹಿತ್ಯ ಸೇವೆ ಮಾಡಿದ ಸಿದ್ಧಯ್ಯ ಪುರಾಣಿಕರು ಕನ್ನಡಪರವಾದ ಹೋರಾಟದಲ್ಲಿ ಅತ್ಯಂತ ಸಕ್ರಿಯವಾಗಿ ತಮ್ಮನ್ನು ತಾವೇ ತೊಡಗಿಸಿಕೊಂಡವರು.ಆರಂಭದಲ್ಲಿ ಹೈದರಾಬಾದ್ ಕನ್ನಡ ಪ್ರದೇಶಗಳ ಕನ್ನಡ ಜಾಗೃತಿಗಾಗಿ ಶ್ರಮಿಸಿದ ಸಿದ್ಧಯ್ಯನವರು ಕರ್ನಾಟಕದ ಸೇವೆಗೆ ಮರಳಿದ ಮೇಲೆ ಇಡೀ ಕರ್ನಾಟಕದ ಸಮಸ್ಯೆಗಳಿಗೆ ತಮ್ಮನ್ನು ತಾವು ತೆತ್ತುಕೊಂಡವರು. ಈ ಕಾರಣದಿಂದಾಗಿ ಕನ್ನಡ ಜನತೆ ಅವರನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಬೇಕಾಗುತ್ತದೆ.ಅವರು ಕನ್ನಡಕ್ಕಾಗಿ ಹಲವಾರು ಶಾಶ್ವತವೆನ್ನಬಹುದಾದ ಕಾರ್ಯಗಳಿಗೂ ಕಾರಣವಾಗಿರುವುದು ಗಮಿಸಬೇಕಾದ ಕೆಲಸ. ಇವುಗಳಲ್ಲಿ ಮುಖ್ಯವಾದುದು ವಿರಾಜಪೇಟೆಯಲ್ಲಿರುವ ಕರ್ನಾಟಕ ಭವನದ ನಿರ್ಮಾಣ ಕಾರ್ಯ.

ಸಿದ್ಧಯ್ಯ ಪುರಾಣಿಕರು ಅನೇಕ ಸಾಹಿತ್ಯ ಗೋಷ್ಠಿಗಳಲ್ಲಿ ಹಾಗೂ ಕವಿಗೋಷ್ಠಿಗಳಲ್ಲಿ ಅಧ್ಯಕ್ಷರಾಗಿದ್ದಾರೆ. ಹರಪನಹಳ್ಳಿಯ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯಗೋಷ್ಠಿ, ಮೈಸೂರು ಸಾಹಿತ್ಯ ಸಮ್ಮೇಳನದ ಲೇಖಕರ ಗೋಷ್ಠಿ, ಬೀದರ್ ಸಮ್ಮೇಳನದ ಕವಿಗೋಷ್ಠಿ, ದೆಹಲಿ ಸಮ್ಮೇಳನದ ಕನ್ನಡ ಭವಿಷ್ಯದ ಗೋಷ್ಠಿ, ಹೈದರಾಬಾದಿನಲ್ಲಿ ನಡೆದ ಬಹುಭಾಷಾ ಕವಿ ಸಮ್ಮೇಳನ, ಮೈಸೂರು ದಸರಾ ಕವಿ ಸಮ್ಮೇಳನ, ಹೊಂಬುಜ ಮತ್ತು ಧರ್ಮಸ್ಥಳಗಳ ಸಾಹಿತ್ಯ ಮತ್ತು ಧರ್ಮ ಸಮ್ಮೇಳನಗಳು, ರಾಯಚೂರು ಹಾಗೂ ಕೊಡಗು ಜಿಲ್ಲೆಗಳ ಸಾಹಿತ್ಯ ಸಮ್ಮೇಳನ ಇವುಗಳ ಅಧ್ಯಕ್ಷತೆ ವಹಿಸಿದ್ದಾರೆ. ಅಷ್ಟೇ ಅಲ್ಲ ಗುಲ್ಬರ್ಗಾದಲ್ಲಿ ನಡೆದ ಅಖಿಲಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವ ಗೌರವವನ್ನು ಸಿದ್ಧಯ್ಯ ಪುರಾಣಿಕರು ಪಡೆದಿದ್ದಾರೆ. ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ಕೊಟ್ಟಿದೆ. ಇವರ ಕನ್ನಡಪರವಾದ ಕೆಲಸ ಹಾಗೂ ವಚನ ಸಾಹಿತ್ಯವನ್ನು ಕುರಿತ ಸಾಧನೆ



ಸಿದ್ಧಿಗಾಗಿ ಕರ್ನಾಟಕ ವಿಶ್ವವಿದ್ಯಾನಿಲಯವು ಗೌರವ ಡಿ.ಲಿಟ್ ಪದವಿಯನ್ನಿತ್ತು ಗೌರವಿಸಿದೆ. ಡಾ|| ಸಿದ್ಧಯ್ಯ ಪುರಾಣಿಕರು ತಮ್ಮ ಬದುಕನ್ನು ಕುರಿತು ಆತ್ಮಕಥೆಯಲ್ಲಿ ಹೇಳುವಾಗ ಬರುವ ಒಂದು ಮಾತು ಅತ್ಯಂತ ಮಹತ್ವವಾದುದು : '.....ಒಟ್ಟಿನಲ್ಲಿ ಸಂತೃಪ್ತ ನಾನು.' ಡಾ|| ಸಿದ್ಧಯ್ಯ ಪುರಾಣಿಕರನ್ನು ಕುರಿತು ಕುವೆಂಪು ಹೇಳಿರುವ ಈ ಮಾತುಗಳೊಂದಿಗೆ ಈ ಬರಹವನ್ನು ಮುಗಿಸಬಹುದೆಂದು ತೋರುತ್ತದೆ:

''ಜ್ಞಾನ, ಅಧಿಕಾರ, ವಿನಯ, ಸೌಜನ್ಯ, ಸೃಜನಶೀಲತೆಗಳು ಏಕತ್ರ ಸಮಾವೇಶಗೊಳ್ಳುವುದು ತುಂಬ ಅಪರೂಪ ಎಂಬುದು ತಮ್ಮೆಲ್ಲರ ಅನುಭವಕ್ಕೆ ಬಂದ ವಿಷಯವಾಗಿದೆ. ಇದಕ್ಕೆ ಅಪರೂಪವಾಗಿ ನಿಂತ ಪ್ರತಿಭಾಶೀಲ ಸತ್ಪುರುಷರ ವಿರಳ ಪಂಕ್ತಿಯಲ್ಲಿ ನಿಂತಿದ್ದಾರೆ ಶ್ರೀ ಪುರಾಣಿಕರು.''

•